ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸಿದ ನಿಬಂಧ

'ಡಾ. ಲತಾಗುತ್ತಿ ಅವರ ಕರಿನೀರು ಕಾದಂಬರಿ ಒಂದು ಅಧ್ಯಯನ'

ನೊಂ. ಸಂ. ೧೬೦೭೦೧೦೩೦೦೪

ಹಂಪಿ ಕನ್ನಡ ವಿಶ್ವವಿದ್ಯಾಲಯ
ವಿದ್ಯಾರಣ್ಯ, ಹೊಸಪೇಟೆ, ಬಳ್ಳಾರಿ,
ಹಂಪಿ, ಕರ್ನಾಟಕ - ೫೮೩ ೨೭೬

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸಿದ ನಿಬಂಧ

'ಡಾ. ಲತಾಗುತ್ತಿ ಅವರ ಕರಿನೀರು ಕಾದಂಬರಿ ಒಂದು ಅಧ್ಯಯನ'

ನೊಂ. ಸಂ. ೧೬೦೭೦೧೦೩೦೦೪

ಹಂಪಿ ಕನ್ನಡ ವಿಶ್ವವಿದ್ಯಾಲಯ
ವಿದ್ಯಾರಣ್ಯ, ಹೊಸಪೇಟೆ, ಬಳ್ಳಾರಿ,
ಹಂಪಿ, ಕರ್ನಾಟಕ – ೫೮೩ ೨೭೬

ಅಧ್ಯಾಯಗಳು

ಅಧ್ಯಾಯ – 1

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ :-

ಕಾದಂಬರಿಯು ಸಜ್ಜನಿಕೆಯನ್ನು ಪ್ರತಿ ಹಂತದಲ್ಲಿಯೂ ರೂಪಿಸುವ ಕಡೆಗೆ ಗಮನವೀಯುವುದಲ್ಲದೆ. ಅನ್ಯಾಯ, ಕ್ರೌರ್ಯದ ವಿರುದ್ಧ ತಿರುಗಿ ಬೀಳುವ ಕಾದಂಬರಿಯು ಸಜ್ಜನಿಕೆಯನ್ನು ಪ್ರತಿ ಪಾದಿಸಲು ಪ್ರಯತ್ನಿಸುತ್ತದೆ.

ಇಂದಿನ ಆಧುನಿಕ ಯುಗದಲ್ಲಿ ಸಾಮಾಜಿಕ ಕಾದಂಬರಿಗಳೇ ಓದುಗರ ತಿರಸ್ಕಾರಕ್ಕೆ ಒಳಗಾಗಿ ನಿರ್ಲಕ್ಷಿಸಲ್ಪಡುತ್ತಿವೆ. ಈ ಸಂಧರ್ಭದಲ್ಲಿ ಉತ್ತಮ ಐತಿಹಾಸಿಕ ಮಹತ್ವದ ಕಾದಂಬರಿಯನ್ನು ಲೇಖಕ ಸಮಾಜದ ಒಳಿತಿಗಾಗಿ ಅರಿವನ್ನು ಮೂಡಿಸುವ ಉದ್ದೇಶದಿಂದ ಕಟ್ಟಿಕೊಟ್ಟಿದ್ದಾರೆ.

ಶಿವಲಿಂಗು ಪ್ರಾಯದಲ್ಲಿದ್ದಾಗ ದುಡುಕಿನ ಸ್ವಭಾವದವನಾಗಿರುತ್ತಾನೆ. ತನ್ನ ಮೂಲ ಸ್ವಭಾವ, ಮನಸ್ಸನ್ನು ಬದಲಿಸಿಕೊಂಡು ಸಮಾಜಕ್ಕೆ ಮಾದರಿಯಾಗುವ ಮಟ್ಟಿಗೆ ಬೆಳೆಯುವುದು ಗಮನಾರ್ಹ ಅಂಶವಾಗಿದೆ.

ಕಾದಂಬರಿಯ ಕಥಾ ಹಂದರವನ್ನು ಸುಂದರವಾಗಿ ಹೆಣೆದು ನಂತರದ ಬೆಳವಣಿಗೆಗಳನ್ನು ಅಷ್ಟೇ ಸಮರ್ಥವಾಗಿ ಕಾದಂಬರಿಕಾರರು ನಿರ್ವಹಿಸಿದ್ದಾರೆ. ಬೆಳಗಾವಿ ಪ್ರದೇಶದ ಕನ್ನಡದ ನವಿರಾದ ಎಳೆಗಳನ್ನು ಬಹಳ ನಾಜೂಕಾಗಿ; ಬಳಸಿ ಓದುಗರ ಮನಸ್ಸಿಗೆ ಹತ್ತಿರವಾಗಿರುವುದೇ ಕತೆಯ ಉದ್ದೇಶವೆಂಬಂತೆ ತೋರುತ್ತಿದೆ.[1]

ಸ್ವಾಂತತ್ರ್ಯ ದಿನಗಳ ರೋಚಕತೆಯ ಪರಿಚಯ ಪಡೆಯ ಬಯಸುವವರಿಗೆ ಮತ್ತೆ-ಮತ್ತೆ ಈ ಕಾದಂಬರಿಯನ್ನು ಓದುವುದರ ಮೂಲಕ ನಮ್ಮಲ್ಲಿನ ಸ್ವಾತಂತ್ರ್ಯದ ಗೌರವ ಮತ್ತು ಪ್ರಜ್ಞೆಯನ್ನು ಜಾಗರೂಕವಾಗಿ ಇಟ್ಟುಕೊಳ್ಳಬಹುದು. ಮುಂದಿನ ಜನಾಂಗದವರಿಗೆ ಇದನ್ನು ಓದಿ ಎಂದರೆ ಅವರಿಗೆ ಕನ್ನಡ ಸರಿಯಾಗಿ ಬಾರದಿರುವುದರಿಂದ ಮಕ್ಕಳನ್ನು ಎದುರು ಕೂರಿಸಿಕೊಂಡು, ಇದರಲ್ಲಿನ ಕಷ್ಟಕಾರ್ಪಣ್ಯಗಳನ್ನು ಓದಿ ಹೇಳುವುದರಿಂದ ಅವರ ಮನಸ್ಸಿಗೆ ನಾಟಬಹುದು. ಈ ರೀತಿಯ ಓದಿ ಹೇಳುವ ಸೆಷನ್‌ಗೆ ತುಂಬಾ ಅರ್ಹವಾದ ಕಾದಂಬರಿ ಇದು.[2]

ಯಥಾವತ್ತಾಗಿ ರಾಷ್ಟ್ರೀಯ ನಾಯಕರುಗಳ ಜಯಂತಿಗಳನ್ನು ಆಚರಿಸದೆ ಅವರು ಸ್ವಾತಂತ್ರ್ಯಕ್ಕಾಗಿ ನೀಡಿರುವ ಕೊಡುಗೆಗಳನ್ನು ಇಂದಿನ ಯುವ ಜನಾಂಗಕ್ಕೆ ಸಾರುವುದು ಮತ್ತು ಅದರ ಮಹತ್ವವನ್ನು ತಿಳಿಸುವುದೇ ಇದರ ಮೊದಲ ಉದ್ದೇಶವಾಗಿದೆ.

1, 2 ಓ.ಎಲ್. ನಾಗಭೂಷಣ ಸ್ವಾಮಿ,
ವಿಮರ್ಶಾ ಲೇಖನ,

ಐತಿಹಾಸಿಕ ಕಾದಂಬರಿಗಳನ್ನು ರಾಷ್ಟ್ರೀಯ ನಾಯಕರುಗಳನ್ನು ತಿರಸ್ಕರಿಸದೆ, ನಿರ್ಲಕ್ಷ್ಯಕ್ಕೆ ಗುರಿಪಡಿಸದೆ ಅವರ ದೇಶಪ್ರೇಮ. ಸ್ವಾತಂತ್ರ್ಯದ ಕೆಚ್ಚನ್ನು ಅವರು ಹೋರಾಟದ ಹಾದಿಯಲ್ಲಿ ಅನುಭವಿಸಿದ ನರಕಯಾತನೆಯನ್ನು ಎಂದೂ ಕಂಡರಿಯದೆ, ಕೇಳರಿಯದ, ಬ್ರಿಟಿಷರು ನೀಡುತ್ತಿದ್ದ ಶಿಕ್ಷೆಯನ್ನು ಅನುಭವಿಸಿಕೊಂಡು ಗುಂಡೇಟಿಗೆ, ಬೂಟು ಕಾಲಿಗೆ, ಲಾಠಿಯೇಟಿಗೆ ಜಗ್ಗದೆ, ಸ್ವಾತಂತ್ರ್ಯವನ್ನೇ ಬದುಕನ್ನಾಗಿರಿಸಿಕೊಂಡ ಹೋರಾಟಗಾರರ ಬಗ್ಗೆ ಗೌರವ, ಭಕ್ತಿಯನ್ನು ಮೂಡಿಸುವುದು. ಜೊತೆಗೆ ಅವರ ಯಶೋಗಾಥೆಯನ್ನು ಎಳೆ-ಎಳೆಯಾಗಿ ಸಹೃದಯರಿಗೆ ತಲುಪಿಸುವುದೇ ಮುಖ್ಯ ಉದ್ದೇಶವಾಗಿದೆ.

ಅಷ್ಟೇ ಅಲ್ಲದೆ ಒಬ್ಬ ವ್ಯಕ್ತಿ ತನ್ನೂರಿನ ಹೆಣ್ಣು ಮಗಳೊಬ್ಬಳ ಮಾನರಕ್ಷಣೆಗೆ ಮುಂದಾಗಿ ತಾನೇ ಸುಳಿಯಲ್ಲಿ ಸಿಲುಕಿ, ನಲುಗಿ, ಇನ್ನೇನು 'ಕರಿನೀರು' ನ ಶಿಕ್ಷೆಯಲ್ಲಿ ಪ್ರಾಣವೇ ಹೊರಟು ಹೋಗುತ್ತದೆ. ಎಂದು ತಿಳಿದಿದ್ದ ಕಾದಂಬರಿಯ ನಾಯಕ

ತನ್ನ ಸದ್ಗುಣ, ಸನ್ನಡತೆಯಿಂದ ಶಿಕ್ಷಯ ಬಂಧನದಿಂದ ಬಿಡುಗಡೆಯಾಗಿ ಬಂದು ಬದುಕನ್ನು ರೂಪಿಸಿಕೊಂಡು. ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳುವ ಅವನ ಗಟ್ಟಿ ಮನಸ್ಥಿತಿಯನ್ನು ಇಂದಿನ ಆಧುನಿಕ ಪ್ರಪಂಚಕ್ಕೆ ಪರಿಚಯಿಸುವುದು. ಆ ಮೂಲಕ ಉತ್ತಮ ಮೌಲ್ಯವನ್ನು ಪ್ರತಿಪಾದಿಸುವುದು ಅಧ್ಯಯನದ ಉದ್ದೇಶವಾಗಿದೆ.

ಅಧ್ಯಾಯ – 2

ಕನ್ನಡದಲ್ಲಿ ಕಾದಂಬರಿ ಬೆಳೆದುಬಂದ ಬಗೆ

ಕನ್ನಡ ಕಾದಂಬರಿ ಬೆಳೆದು ಬಂದ ಬಗೆ

ಕಾದಂಬರಿ, ಸಣ್ಣ ಕಥೆ ಪಾಶ್ಚಾತ್ಯ ಸಾಹಿತ್ಯದಿಂದ ನಮಗೆ ಕನ್ನಡಕ್ಕೆ ಬಂದವು ಎಂದು ಹೇಳಬಹುದಾದಷ್ಟು ಮಟ್ಟಿಗೆ ಪ್ರಭಾವಿತವಾದವು. ಇಂಗ್ಲಿಷ್ ಸಾಹಿತ್ಯದ ಪ್ರಭಾವ ಬೀಳುವ ಮೊದಲೇ 'ಕಾದಂಬರಿ' ಎನ್ನಬಹುದಾದ ಮೂರು ಕೃತಿಗಳು ರಚಿತವಾದವು ಎಂದು ಸಾಹಿತ್ಯದ ಚರಿತ್ರಕಾರರು ಹೇಳುತ್ತಾರೆ. ಯಾದವನ 'ಕಲಾವತೀ ಪರಿಣಯ' (ಸುಮಾರು 1815), ಮುಮ್ಮಡಿ ಕೃಷ್ಣರಾಜರ 'ಸೌಗಂಧಿಕಾ ಪರಿಣಯ' (1821) ಮತ್ತು ಕೆಂಪುನಾರಾಯಣನ 'ಮುದ್ರಾಮಂಜೂಷ' (1823), ಮೊದಲ ಎರಡು ಅದ್ಭುತ ರಮ್ಯ ಕಥೆಗಳು, ದೇವತೆಗಳ–ಮಾಟ ಮಂತ್ರಗಳ ಪ್ರವೇಶ ಉಂಟು, 'ಕಲಾವತೀ ಪರಿಣಯ'ದಲ್ಲಿ ಒಳ್ಳೆಯ ಕಥಾನಕವಿದೆ, ಪಾತ್ರಗಳ ನಿರೂಪಣೆಯಲ್ಲಿ ಸಹಜತೆಯೂ ಇಲ್ಲದಿಲ್ಲ. 'ಸೌಗಂಧಿಕಾ ಪರಿಣಯ'ದ ಭಾಷೆ ಹೊಸಗನ್ನಡಕ್ಕೆ ಹತ್ತಿರವಿದೆ. 'ಮುದ್ರಾಮಂಜೂಷಾ' ಸಂಸ್ಕೃತದ 'ಮುದ್ರಾರಾಕ್ಷಸ' ನಾಟಕದ ಆಧಾರದ ಮೇಲೆ ರಚಿತವಾಗಿದೆ. ನೇರ ಕಥಾನಕ ಇದರಲ್ಲಿ ಕಾಣುತ್ತದೆ. 1842ರಲ್ಲಿ ಜಾನ್ ಬನ್‌ಯನ್‌ನ 'ದಿ ಪಿಲ್‌ಗ್ರಿಮ್ಸ್ ಪ್ರೋಗ್ರೆಸ್', 1857ರಲ್ಲಿ ಡ್ಯಾನಿಯಲ್ ಡಫೋನ 'ರಾಬಿನ್‌ಸನ್ ಕ್ರೂಸೋ' ಕನ್ನಡಕ್ಕೆ ಅನುವಾದವು 'ರಾಬಿನ್‌ಸನ್ ಕ್ರೂಸೋ' ಬಹು ಸಣ್ಣ ಸಣ್ಣ ವಿವರಗಳಿಗೂ ಗಮನಕೊಡುವ ವಿಶಿಷ್ಟ ವಾಸ್ತವಿಕ ನಿರೂಪಣೆಯನ್ನು ಕನ್ನಡಕ್ಕೆ ಪರಿಚಯ ಮಾಡಿಕೊಟ್ಟಿತು. ಇತರ ಭಾಷೆಗಳಿಂದ ಅನುವಾದವಾದ ಪ್ರಥಮ ಕಾದಂಬರಿಗಳು ಇವು. ಮರಾಠಿಯಿಂದ ಪದಮಂಜಿಯವರ 'ಯಮುನಾ ಪರ್ಯಟನ' (1829), ಬಂಗಾಲಿಯಿಂದ ಬಂಕಿಮಚಂದ್ರರ 'ದುರ್ಗೇಶನಂದಿನಿ' (1885), ಮಲಯಾಳಿಯಿಂದ ಮುಳಿಯಿಲ್ ಅವರ 'ಸುಕುಮಾರಿ' (1899(. 'ದುರ್ಗೇಶನಂದಿನಿ'ಗೆ ಬರೆದ ಇಂಗ್ಲಿಷ್ ಪೀಠಿಕೆಯಲ್ಲಿ ವೆಂಕಟಾಚಾರ್ಯರು 'ನಾವೆಲ್' ಪದವನ್ನು ಬಳಸಿದರು ಕಾದಂಬರಿ 'ಸಮಾಜದ ಹಾಗೂ ಸಮಾಜದ ಅಂಗಭೂತನಾದ ಮನುಷ್ಯನ ಚರಿತ್ರೆ ನಡವಳಿಕೆಗಳಲ್ಲಿ ಕಂಡುಬರುವ ದುರ್ನಡತೆ ಮುಂತಾದವುಗಳನ್ನು ಉದಾಹರಣೆಗಳೊಡನೆ ಚಿತ್ರಿಸಿ ಪ್ರತಿ ಒಬ್ಬನೂ ಸದ್ಭಾವದಿಂದ ನಡೆದುಕೊಳ್ಳುವುದನ್ನು ತೋರ್ಪಡಿಸತಕ್ಕದ್ದಾಗಿದೆ' ಎಂದರು. 1875ರ ಸುಮಾರಿಗೆ ಪ್ರಕಟವಾದ ಗಂಗಾಧರ ಮಡಿವಾಳೇಶ್ವರ ತುರಮರಿಯವರ 'ಬಾಣ' ಕಾದಂಬರಿಯ ಶೈಲಿ ಹೊಸಗನ್ನಡಕ್ಕೆ ಸಮೀಪವಾಗಿದೆ.

1892ರಲ್ಲಿ ಪ್ರಕಟವಾದ ಲಕ್ಷ್ಮಣರಾವ್ ಗದಗಕರರ 'ಸೂರ್ಯಕಾಂತ' ಕನ್ನಡದ ಮೊದಲನೆಯ ಸ್ವತಂತ್ರ ಕಾದಂಬರಿ ಎನ್ನಬಹುದು. ಇದು ಐತಿಹಾಸಿಕ ಕಾದಂಬರಿ. ಗುಬ್ಬಿ ಮುರುಗಾರಾಧ್ಯರ 'ಶೃಂಗಾರ ಚಾತುರ್ಯೋಲ್ಲಾಸಿನಿ' (1896), ಗಳಗನಾಥರ 'ಪ್ರಬುದ್ಧನಯನ' (1899) ಇವುಗಳ ನಂತರ ಬಂದ ಗುಲವಾಡಿ ವೆಂಕಟರಾಯರ 'ಇಂದಿರಾಬಾಯಿ' (1899) ಗಮನಿಸಬೇಕಾದ ಕೃತಿ. ಇದರ ಇನ್ನೊಂದು ಶೀರ್ಷಿಕೆ 'ಸದ್ಧರ್ಮವಿಜಯವು'; ಇದೇ ಕೃತಿಯು ನೀತಿಪ್ರಧಾನ ಎಂಬುದನ್ನು ತೋರಿಸುತ್ತದೆ. ಪರಂಪರಾಗತ

ನಂಬಿಕೆ ಕಟ್ಟಲೆಗಳು, ಇವುಗಳ ಕೋಟೆಯಂತಿರುವ ಧಾರ್ಮಿಕ ಮಠಗಳು ಇವನ್ನು ಬಯಲಿಗೆಳೆದು ಸುಧಾರಣೆಯ ಅಗತ್ಯವನ್ನು ಬಎರಳಿಟ್ಟು ತೋರಿಸುತ್ತದೆ ಕಾದಂಬರಿ. ಕಾಮುಕನಾದ ಗಂಡನ ಕೈಹಿಡಿದು, ವಿಧವೆಯಾಗಿ ಹಲವು ಕಷ್ಟಗಳನ್ನನುಭವಿಸಿ ಮತ್ತೆ ಮದುವೆಯಾಗಿ ಸಮಾಜದಲ್ಲಿ ಕೋಲಾಹಲವೆಬ್ಬಿಸಿದ ಇಂದಿರಾ ಈ ಕಾದಂಬರಿಗೆ ಹೆಸರು ಕೊಟ್ಟಿದ್ದಾಳೆ. ಇದರ ನಂತರ ಮುಖ್ಯವಾದ ಕಾದಂಬರಿ ಬೋಳಾರ ಬಾಬೂರಾಯರ 'ವಾಗ್ದೇವಿ' (1905). ಘಟನೆಗಳಿಂದ ತುಂಬಿದ ಕಥೆ ಕುತೂಹಲಕಾರಿಯಾಗಿದೆ. ವೇಗವಾಗಿ ಸಾಗುತ್ತದೆ. ಇಲ್ಲೂ ಮಠಗಳ ಹೊಲಸು ಜೀವನವನ್ನು ಹೊರಗೆಳೆಯುವ ಪ್ರಯತ್ನವಿದೆ. ಕನ್ನಡ ಕಾದಂಬರಿಗೆ ಇಲ್ಲಿ ಹಾಸ್ಯ ಕಾಲಿಟ್ಟಿತು ಎನ್ನಬಹುದು. ಪಾತ್ರಗಳ ನಿರೂಪಣೆಯಲ್ಲಿ ಲವಲವಿಕೆ ಇದೆ. ಕೆರೂರು ವಾಸುದೇವಾಚಾರ್ಯರ 'ಇಂದಿರೆ' (1908) ಆದರ್ಶ ಸ್ತ್ರೀಯ ಚಿತ್ರವನ್ನು ಕೊಡುತ್ತದೆ.

ಇಲ್ಲಿಂದ ಮುಂದೆ ಪ್ರಾರಂಭದ ಎಲ್ಲ ಕಾದಂಬರಿಗಳನ್ನು ನಾವು ಗಮನಿಸುವ ಅಗತ್ಯ ಇಲ್ಲ. ಕೆಲವು ಕೃತಿಗಳನ್ನು ಗಮನಿಸಬಹುದು. 1823ರಲ್ಲಿ ಪ್ರಕಟವಾದ 'ಮುದ್ರಾಮಂಜೂಷ' ಪ್ರಥಮ ಐತಿಹಾಸಿಕ ಕಾದಂಬರಿ ಎನ್ನಬಹುದು. 1897ರಲ್ಲಿ ಪ್ರಕಟವಾದ ಎಂ. ವೆಂಕಟಕೃಷ್ಣಯ್ಯನವರ 'ಚೋರಗ್ರಹಣ ತಂತ್ರ' ಮೊದಲನೆಯ ಪತ್ತೇದಾರಿ ಕಾದಂಬರಿ, 'ಇಂದಿರಾ ಬಾಯಿ' (1899) ಮೊದಲನೆಯ ಸ್ವತಂತ್ರ ಸಾಮಾಜಿಕ ಕಾದಂಬರಿ. ಗಳಗನಾಥರ 'ಕುಮುದಿನಿ' (1913) ಕರ್ನಾಟಕದ ಇತಿಹಾಸಕ್ಕೆ ಸಂಬಂಧಿಸಿದ ಮೊದಲನೆಯ ಕಾದಂಬರಿ.

ಕಾದಂಬರಿಯ ರಚನೆ ಸಾಧ್ಯವಾಗುವುದು ಓದುಗರ ವೃತ್ತ ಸಾಕಷ್ಟು ಹಿರಿದಾಗಿದ್ದಾಗ, ಕಾವ್ಯದಂತೆ ಇದು ಒಬ್ಬರು ಓದಿ ನೂರು ಜನ ಕೇಳಿ ಸಂತೋಷಪಡಲು ಸಲಭ್ಯವಾಗುವ ರಚನೆಯಲ್ಲ, ಅಚ್ಚುಕೂಟಗಳು, ಪುಸ್ತಕಗಳ ಸಾಗಾಣಿಕೆ–ಮಾರಾಟ ಇವುಗಳ ವ್ಯವಸ್ಥೆ ಬೆಳೆದು ಅಕ್ಷರಸ್ಥರ ಮತ್ತು ಓದಲು ವಿರಾಮವಿರುವವರ ಸಂಖ್ಯೆ ಸಾಕಷ್ಟು ಆದಾಗ, ಸಾಹಿತ್ಯದಲ್ಲಿ ತಮ್ಮ ಜೀವನವನ್ನು ಕಾಣುವ ಆಸಕ್ತಿ ಇರುವ ವರ್ಗ ಬೆಳೆದಾಗ ಕಾದಂಬರಿ–ಸಣ್ಣ ಕಥೆ ಬೆಳೆಯಬಲ್ಲವು. ಇಂತಹ ಸ್ಥಿತಿ ರೂಪಿತವಾದಾಗ ಓದುವವರ ಕುತೂಃಲವನ್ನು ತಣಿಸಿದವರು ಮುಖ್ಯವಾಗಿ ಇಬ್ಬರು – ಬಿ. ವೆಂಕಟಾಚಾರ್ಯರು ಮತ್ತು ವೆಂಕಟೇಶ ತಿರಕೋ ಕುಲಕರ್ಣಿ ಗಳಗನಾಥರು. ವೆಂಕಟಾಚಾರ್ಯರು ಈಶ್ವರಚಂದ್ರ ವಿದ್ಯಾಸಾಗರ, ಬಂಕಿಮಚಂದ್ರ, ರಮೇಶಚಂದ್ರ ದತ್ತ ಇವರ ಕೃತಿಗಳನ್ನು ಕನ್ನಡಕ್ಕೆ ತಂದರು. 'ದೇವೀ ಚೌಧುರಾಣಿ', 'ಆನಂದ ಮಠ', 'ವಿಷವೃಕ್ಷ' ಮೊದಲಾದ ಕಾದಂಬರಿಗಳು ಬಹು ಜನಪ್ರಿಯವಾದವು. ಬಂಕಿಮರು ಚರಿತ್ರೆಯ ಆಧಾರದ ಮೇಲೆ ಕಾದಂಬರಿಗಳನ್ನು ಬಹು ಜನಪ್ರಿಯವಾದವು. ಬಂಕಿಮರು ಚರಿತ್ರೆಯ ಆಧಾರದ ಮೇಲೆ ಕಾದಂಬರಿಗಳನ್ನು ಬರೆದರು. ವಿಧವಾ ವಿವಾಹ, ಸ್ತ್ರೀಯರ ವಿದ್ಯಾಭ್ಯಾಸ ಮೊದಲಾದ ಸಾಮಾಜಿಕ ಸಮಸ್ಯೆಗಳನ್ನು ಕಾದಂಬರಿಗಳಲ್ಲಿ ವಿಶ್ಲೇಷಿಸಿದರು. 'ಆನಂದ ಮಠ' ಕಾದಂಬರಿಯಲ್ಲಿ 'ವಂದೇ ಮಾತರಂ' ಹಾಡನ್ನು

ಭಾರತಕ್ಕೆ ಕೊಟ್ಟವರು ಅವರು. ಸ್ವಾರಸ್ಯವಾಗಿ ಕಥೆಗಳನ್ನು ಹೇಳಬಲ್ಲರು. ಜೊತೆಗೇ, ಪಾತ್ರಗಳ ವಿಶ್ಲೇಷಣೆಯನ್ನೂ ಮಾಡಬಲ್ಲರು. ಅವರ ಕಾದಂಬರಿಗಳಲ್ಲಿ ಸಾಹಸ, ಅದ್ಭುತ ರಮ್ಯತೆ ಉಂಟು. 'ಚಾರಿತ್ರಿಕ' ಕಾದಂಬರಿಗಳಾದರೂ ಕ್ರಿಯೆಯ ಯುಗವನ್ನು ರಮ್ಯವಾಗಿ ಚಿತ್ರಿಸುತ್ತಾರೆ. ಆದರೂ ಕಾದಂಬರಿ ಸಾಮಾನ್ಯರ ಜೀವನ, ಸಾಮಾಜಿಕ ಜೀವನ ಇವುಗಳಿಗೆ ಸಮೀಪವಾಯಿತು. ವೆಂಕಟಾಚಾರ್ಯರ ಶೈಲಿ ಸಂಸ್ಕೃತ ಶಬ್ದಗಳು ತುಂಬಿಹೋದ, ಪುಸ್ತಕಗಳ ಶೈಲಿ. ಇದರಲ್ಲಿ ಸಾಕಷ್ಟು ಬಳುಕಿಲ್ಲ, ವೈವಿಧ್ಯವಿಲ್ಲ. ಗಳಗನಾಥರು ವಿಶೇಷವಾಗಿ ಮರಾಠಿಯಿಂದ ಹರಿನಾರಾಯಣ ಅಪ್ಟೆಯವರ ಕಾದಂಬರಿಗಳನ್ನು ಭಾಷಾಂತರ ಮಾಡಿದರು. ಹಲವು ಕಾದಂಬರಿಗಳಲ್ಲಿ ಮರಾಠಿಯಿಂದ ವಸ್ತುವನ್ನು ತೆಗೆದುಕೊಂಡು ತಮ್ಮ ನಿರೂಪಣೆಯನ್ನೆ ಕೊಟ್ಟರು. ವಿಜಯನಗರದ ಇತಿಹಾಸವನ್ನು ಕುರಿತ 'ಮಾಧವ ಕರುಣಾವಿಲಾಸ' (1923) ಇವರ ಸ್ವತಂತ್ರ ಕೃತಿ. ಇವರ ಎಲ್ಲ ಕಾದಂಬರಿಗಳೂ ಕ್ಷಾತ್ರ ತೇಜಸ್ಸನ್ನು ಉತ್ಸಾಹದಿಂದ ಚಿತ್ರಿಸುತ್ತವೆ, ದೇಶಾಭಿಮಾನದಿಂದ ತುಂಬಿ ತುಳುಕುತ್ತವೆ. ಇವರ ಭಾಷೆಯಲ್ಲೂ ವೈವಿಧ್ಯವಿಲ್ಲ, ಆದರೆ ವೆಂಕಟಾಚಾರ್ಯರ ಭಾಷೆಯಂತೆ ಗ್ರಂಥಸ್ಥವಲ್ಲ.

ಇಲ್ಲಿಂದಾಚೆ ಅನೇಕರು ಕಾದಮಬರಿಗಳನ್ನು ರಚಿಸಿದರು. ಬಾಲ ಸರಸ್ವತಿ, ಭೀ.ಪ. ಕಾಳೆ ಮೊದಲಾದವರ ಪತ್ತೇದಾರಿ ಕಾದಂಬರಿಗಳು ಜನಪ್ರಿಯವಾದವು. ಆಧುನಿಕ ಕನ್ನಡ ಸಾಹಿತ್ಯದ ಪ್ರಾರಂಭದಲ್ಲಿ ಕೃತಿರಚನೆ ಮಾಡಿದ ಮಹಿಳೆಯರಲ್ಲಿ ತಿರುಮಲಾಂಬ ಅವರು ಒಬ್ಬರು.

'ಇಂದಿರಾಬಾಯಿ'ಯ ನಂತರ ಸಾಹಿತ್ಯದ ದೃಷ್ಟಿಯಿಂದ ಕಾದಂಬರಿ ಎಂದು ಹೇಳಬಹುದಾದ ಮೊಟ್ಟ ಮೊದಲನೆಯ ಕೃತಿ ಎಂ.ಎಸ್. ಪುಟ್ಟಣ್ಣ (1854–1930)ನವರ 'ಮಾಡಿದ್ದುಣ್ಣೋ ಮಹರಾಯ' (1915) 'ಪುರಾಣ ಪ್ರಸಿದ್ಧರು ವ್ಯಾಕರಣದ ಸೂತ್ರಗಳಾಗಿದ್ದಾರೆ, ಮನುಷ್ಯ ಸಾಮಾನ್ಯರಲ್ಲಿ ಸಿಕ್ಕುವ ಧೀರರು ಉದಾಹರಣೆಗಳಾಗಿದ್ದಾರೆ' ಎಂದು ಮುನ್ನುಡಿಯಲ್ಲಿ ಹೇಳುವ ಪುಟ್ಟಣ್ಣನವರ ಉದ್ದೇಶ ಸ್ಪಷ್ಟವಾಗಿ ನೀತಿಬೋಧನೆ.

ಕಥೆ ನಡೆಯುವುದು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಸಂಜವಾಡಿ ಎಂಬ ಹಳ್ಳಿಯಲ್ಲಿ, ಇದರ ಮುಖ್ಯ ಪಾತ್ರಗಳು ವಿದ್ವತ್ತು, ಸದ್ಗುಣಗಳಿಂದ ಶೋಭಿಸುವ ಸದಾಶಿವ ದೀಕ್ಷಿತ, ಅವರ ಮೂರ್ಖ ಹೆಂಡತಿ ತಿಮ್ಮಮ್ಮ, ಪಾತಿವ್ರತ್ಯ ಧರ್ಮದ ಮೂರ್ತಿಯಾದ ಸೊಸೆ ಸೀತಮ್ಮ, ಅಪ್ಪಾಜಿ ಎಂಬ ಘಟಿಂಗ, ಪೂರ್ವಾರ್ಧದಲ್ಲಿ ಸದಾಶಿವ ದೀಕ್ಷಿತನ ಘನತೆಯೂ ಉತ್ತರಾರ್ಧದಲ್ಲಿ ಸೀತಮ್ಮನ ಹಿರಿಮೆಯೂ ಬೆಳಗುತ್ತವೆ. ಕಾದಂಬರಿಯಲ್ಲಿ ಮಾಟ ಮಂತ್ರಗಳ ಪ್ರವೇಶವಿದೆ. ಸತ್ತುಹೋದಳೆಂದು ಸೀತಮ್ಮನಿಗೆ ನಂಟರು ಅಂತ್ಯ ಸಂಸ್ಕಾರ ಮಾಡಿ, ಚಿತೆ ಪೂರ್ಣವಾಗಿ ಹೊತ್ತಿಕೊಳ್ಳುವ ಮೊದಲೇ ಹಿಂದಿರುಗುತ್ತಾರೆ. ಮಂತ್ರವಾದಿಯೊಬ್ಬ ಆಕೆಯನ್ನು ಬದುಕಿಸುತ್ತಾನೆ. ಕಾದಂಬರಿಯ ಉದ್ದೇಶ ನೀತಿಯ ಉಪದೇಶ,

ಆದರೆ ಮಾನವ ಸ್ವಭಾವದಲ್ಲಿ ನೈಜವಾದ ಆಸಕ್ತಿ ಇರುವ ಕೃತಿ ಇದು. ಮಹಾಕಾವ್ಯ, ಆಧುನಿಕ ಕಾದಂಬರಿ ಇವುಗಳ ನಡುವೆ ಅರ್ಧ ದೂರವನ್ನು ಸವೆಸಿದ ಕೃತಿ ಇದು. ಆದರ್ಶ-ವಾಸ್ತವಗಳ ಸಂಗಮ. ಹಳ್ಳಿಯ ಉಪಾಧ್ಯಾಯ ನಾರಪ್ಪಯ್ಯ, ಕಳ್ಳ ಅಮಾಸೆ, ಊರಿನ ಲಂಚಕೋರ ಅಧಿಕಾರ, ಅವನ ಹೆಂಡತಿ ಈ ಪಾತ್ರಗಳನ್ನು ಸೃಷ್ಟಿಸಿದ ಕಾದಂಬರಿಕಾರರು ಮನುಷ್ಯ ಸ್ವಭಾವದಲ್ಲಿ, ಅದರ ವೈವಿಧ್ಯ-ವೈಚಿತ್ರ್ಯಗಳಲ್ಲಿ ಆಸಕ್ತಿ ಇರುವವರು. ಜೊತೆಗೆ ಪುಟ್ಟಣ್ಣನವರು ಕ್ರಿಯೆ ನಡೆಸುವ ಆವರಣವನ್ನು ಜೀವಂತವಾಗಿ ಸೃಷ್ಟಿಸಿಬಿಡುತ್ತಾರೆ. ಹಳ್ಳಿ, ಹಳ್ಳಿಯ ಪಾಠಶಾಲೆ, ರಾಜರ ಆಸ್ಥಾನ, ಲಂಚಕೋರ ಅಧಿಕಾರಿಯ ಮನೆ ಎಲ್ಲ ನಮ್ಮ ಕಣ್ಣ ಮುಂದೆ ನಿಲ್ಲುತ್ತವೆ. ಮಾತನಾಡುವವರ ಮಾತು ಕೇಳಿಸುತ್ತದೆ, ಮುಖ ಕಾಣಿಸುತ್ತದೆ. ಹರಿತವಾದ ಸ್ಫುಟವಾದ ಶೈಲಿ ಇವರದು. ಪುಟ್ಟಣ್ಣನವರೇ 'ಮುಸುಕು ತೆಗೆಯೇ ಮಾಯಾಂಗನೇ', 'ಪೇಟೆ ಮಾತೇನಜ್ಜಿ' ಈ ಕೃತಿಗಳನ್ನೂ ರಚಿಸಿದರು.

ವೆಂಕಟಾಚಾರ್ಯ, ಗಳಗನಾಥ, ಎಂ.ಎಸ್. ಪುಟ್ಟಣ್ಣ ಇವರಿಂದ ಪ್ರಾರಂಭದಲ್ಲಿಯೇ ಕನ್ನಡ ಕಾದಂಬರಿ ಮನರಂಜನೆಯ ಸಾಧನವಾಗದೆ ಜೀವನದಲ್ಲಿ ಗಂಭೀರವಾಗಿ ವೀಕ್ಷಿಸುವ ಕ್ರಿಯೆಯಾಯಿತು.

ಇಪ್ಪತ್ತನೆಯ ಶತಮಾನದ ನಾಲ್ಕನೆಯ ದಶಕದಿಂದ ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಬೆಳೆ ಹುಲುಸಾಯಿತು. 1928ರಲ್ಲಿಯೇ ಶಿವರಾಮ ಕಾರಂತರ 'ದೇವದೂತರು' ಪ್ರಕಟವಾಗಿತ್ತು. 1933ರಲ್ಲಿ ಬೆಟಗೇರಿ ಕೃಷ್ಣಶರ್ಮರ (ಆನಂದಕಂದ) 'ಸುದರ್ಶನ' ಕಾದಂಬರಿಯೂ ಶಿವರಾಮ ಕಾರಂತರ 'ಚೋಮನ ದುಡಿ'ಯೂ ಪ್ರಕಟವಾದವು. 1934ರಲ್ಲಿ ರಂ.ಶ್ರೀ ಮುಗಳಿಯವರ 'ಬಾಳುರಿ', ಅ.ನ. ಕೃಷ್ಣರಾಯರ 'ಜೀವನ ಯಾತ್ರೆ' ಮತ್ತು 'ಉದಯರಾಗ', 'ಶ್ರೀರಂಗ'ರ 'ವಿಶ್ವಾಮಿತ್ರ ಸೃಷ್ಟಿ', 1935ರಲ್ಲಿ ಆನಂದಕಂದರ 'ರಾಜಯೋಗಿ' ಮತ್ತು 'ಅಶಾಂತಿ ಪರ್ವ', 'ಗೋಕಾಕರ 'ಇಜ್ಜೋಡು', ಅ.ನ.ಕೃ ಅವರ 'ಸಂಧ್ಯಾರಾಗ', ಜಡಭರತರ 'ಧರ್ಮಸೆರೆ', 1936ರಲ್ಲಿ ಕುವೆಂಪು ಅವರ 'ಕಾನೂರು ಸುಬ್ಬಮ್ಮ ಹೆಗ್ಗಡತಿ' ಪ್ರಕಟವಾದವು. ಕನ್ನಡದಲ್ಲಿ ಕಾದಂಬರಿಯ ಯುಗ ಪ್ರಾರಂಭವಾದಂತಾಯಿತು. 1920 ರಿಂದ 1945ರವರೆಗಿನ ಇಪ್ಪತ್ತೈದು ವರ್ಷಗಳಲ್ಲಿ ಸುಮಾರು ಎಂಬತ್ತು ಕಾದಂಬರಿಗಳು ಪ್ರಕಟವಾದವು. ಇವನ್ನು ಬರೆದ ಕಾದಂಬರಿಕಾರರ ಸಂಖ್ಯೆ ಸುಮಾರು 40. ಈ ಅವಧಿಯಲ್ಲಿ ಮೇಲೆ ಹೆಸರಿಸಿದ ಕಾದಂಬರಿಗಳಲ್ಲದೆ, ಶ್ರೀನಿವಾಸರ 'ಸುಬ್ಬಣ್ಣ' (ಇದನ್ನು ಕಿರು ಕಾದಂಬರಿ ಎನ್ನಬೇಕು), ದೇವುಡು ನರಸಿಂಹ ಶಾಸ್ತ್ರಿಗಳ 'ಅಂತರಂಗ', 'ಮಯೂರ', ಕಾರಂತರ 'ಮರಳಿ ಮಣ್ಣಿಗೆ', 'ಬೆಟ್ಟದ ಜೀವ', 'ಹೆತ್ತಳಾ ತಾಯಿ', ನಾ. ಕಸ್ತೂರಿಯವರ 'ಚಕ್ರದೃಷ್ಟಿ', ವಿ.ಎಂ. ಇನಾಂದಾರರ 'ಎರಡು ದ್ರುವ' ಈ ಎಲ್ಲ ಕಾದಂಬರಿಗಳೂ ಪ್ರಕಟವಾಗಿದ್ದುವೆಂದರೆ, ಸಂಖ್ಯೆಯಲ್ಲಿ ಮಿತವಾಗಿದ್ದರೂ ಗುಣದಲ್ಲಿ ಮೆಚ್ಚಬೇಕಾದ ಸೃಷ್ಟಿ ಈ ಇಪ್ಪತ್ತೈದು ವರ್ಷಗಳಲ್ಲಿ ಆಯಿತು ಎನ್ನಬೇಕು.

ಕಾವ್ಯದಲ್ಲಿ ಬೇಂದ್ರೆ–ಕುವೆಂಪು ಇವರು ಪ್ರಭಾವ ಬೀರಿದಂತೆ ಕಾದಂಬರಿಯಲ್ಲಿ ಕಾರಂತರ ಅ.ನ.ಕೃ ಪ್ರಭಾವ ಬೀರಿದರು. ಈವರೆಗೆ ಕಾರಂತರು ಸುಮಾರು 38 ಕಾದಂಬರಿಗಳನ್ನು ಬರೆದಿದ್ದಾರೆ. ಅಗಾಧವಾದ ಜೀವನ ಶ್ರದ್ಧೆ ಅವರದು. ನವೋದಯ ಯುಗದಲ್ಲಿಯೂ ಅತಿ ಭಾವುಕತೆಗೆ ಎಡೆಕೊಡದ ಕಾದಂಬರಿಕಾರರು ಅವರು. ಕಾದಂಬರಿಕಾರರಾಗಿ ಬರಹ ಪ್ರಾರಂಭಿಸಿದ ತರುಣದಲ್ಲೇ 'ಮರಳಿ ಮಣ್ಣಿಗೆ' ಯಂತಹ ಕಾದಂಬರಿಯನ್ನು ಬರೆದರೆಂಬುದು ಅಚ್ಚರಿಯ ಸಂಗತಿ. ಮೂರು ತಲೆಮಾರುಗಳ ಜೀವನ ಇಲ್ಲಿ ನಿರೂಪಿತವಾಗಿದೆ. ರಾಮ ಐತಾಳರು ಮೊದಲ ಪೀಳಿಗೆಯವರು, ವೈದಿಕ ಬ್ರಾಹ್ಮಣರು, ಹೊಟ್ಟೆ ಬಟ್ಟೆ ಕಟ್ಟಿ, ಮಗ ಲಚ್ಚಣ್ಣನ ಅಭ್ಯುದಯಕ್ಕಾಗಿ ಸವೆದರು. ಲಚ್ಚಣ್ಣ ಇಂಗ್ಲಿಷ್ ಕಲಿತು ವಿದ್ಯೆಯಲ್ಲಿ ಮುಂದುವರಿದ, ಪಟ್ಟಣ ಸೇರಿದ, ಪಟ್ಟಣದಲ್ಲಿ ವಿಲಾಸ ಜೀವನವನ್ನು ನಡೆಸಿದ. ಆಸ್ತಿಯನ್ನು ಕರಗಿಸಿದ. ಹೆಂಡತಿ ನಾಗವೇಣಿ, ಮಗ ರಾಮ ನೋವನ್ನೇ ಉಂಡರು. ರಾಮ ವಿದ್ಯಾಭ್ಯಾಸ ಮುಂದುವರಿಸಿದ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸೆರೆಮನೆ ಕಂಡು ಅನಂತರ ಹೊಟ್ಟೆಪಾಡಿಗಾಗಿ ಪಾಡುಪಟ್ಟ, ಅಕಸ್ಮಾತ್ತಾಗಿ ಬಿದ್ದ ಗೋಡೆಯಲ್ಲಿ ತಾಯಿ ನಾಗವೇಣಿಗೆ ಒಂದಿಷ್ಟು ಹಣ ಸಿಕ್ಕಿತು. ತಾಯಿ ಮಗ ಮತ್ತೆ ಹಳ್ಳಿ ಸೇರಿದರು, ನೆಮ್ಮದಿ ಕಂಡರು – ಇದು ಕಥೆ. ಇಲ್ಲಿ ನಿಸರ್ಗ ಕಾದಂಬರಿಯ ಜಗತ್ತಿನ ಜೀವಂತ ಭಾಗ. ಜೀವನ ಮಾಡಲು ಜನ ನಿಸರ್ಗದೊಡನೆ ನಡೆಸುವ ನಿರಂತರ ಹೋರಾಟ ಕಣ್ಣಿಗೆ ಕಟ್ಟುತ್ತದೆ. ಕಾರಂತರು ಯಾವ ತತ್ವ–ಉಪದೇಶಗಳಿಗೂ ವಶವಾಗದೆ ಇಲ್ಲಿನ ಪಾತ್ರಗಳು ತಾವಾಗಿಯೇ ಬಎಳೆಯಲು, ತಮ್ಮ ಸ್ವಭಾವವನ್ನು ತೋರಿಸಿಕೊಳ್ಳಲು ಬಿಟ್ಟಿದ್ದಾರೆ. ಕಾದಂಬರಿಯ ಮೌಲ್ಯಗಳು ಕ್ರಿಯೆಯಿಂದ ಸಹಜವಾಗಿ ಮೂಡುತ್ತವೆ. ಆತ್ಮಗೌರವ, ಪ್ರಾಮಾಣಿಕ ಶ್ರಮ, ವ್ಯಕ್ತಿಯ ಸ್ವೀಕೃತ ಮೌಲ್ಯಗಳಿಗೆ ನಿಷ್ಠೆ ಇವನ್ನು ಮೌಲ್ಯಗಳನ್ನಾಗಿ ಮಾಡಿತು. ಕಾರಂತರ ಕಾದಂಬರಿ ಸಾಹಿತ್ಯ, ಪಾತ್ರಗಳನ್ನು ಸಾಂಪ್ರದಾಯಿಕ ಮೌಲ್ಯಗಳ ಬೆಳಕಿನಲ್ಲಿ ಕಂಡು 'ಒಳ್ಳೆಯವರು', 'ಕೆಟ್ಟವರು' ಎಂದು ತೀರ್ಪು ಕೊಡುವುದಿಲ್ಲ. ಒಳಗೆ ನೈತಿಕವಾಗಿ ಗಟ್ಟಿ ಅಥವಾ ಟೊಳ್ಳು ಎನ್ನುವುದನ್ನು ಕಾರಂತರ ಕಾದಂಬರಿಗಳು ತೆರೆದು ತೋರಿಸುತ್ತವೆ. ನಿರುದ್ವಿಗ್ನವಾಗಿ ಜೀವನವನ್ನು ಚಿತ್ರಿಸುವ ಈ ಶಕ್ತಿ ಅಸಾಧಾರಣ, ಕನ್ನಡ ಕಾದಂಬರಿಗೆ ತುಂಬಾ ಆರೋಗ್ಯಕರವಾದ ಪ್ರಭಾವ, ಹಿರಿಯ ಕಾದಂಬರಿಕಾರನೊಬ್ಬ ಹಲವು ಕಾದಂಬರಿಗಳನ್ನು ಬರೆದು ತನ್ನ ಜೀವನ ಸಂಧ್ಯೆಯಲ್ಲಿ ಬರೆದು ಹೆಮ್ಮೆಪಟ್ಟುಕೊಳ್ಳಬಹುದಾದ ಕಾದಂಬರಿಯನ್ನು ಕಾರಂತರು ತಮ್ಮ ಐದನೆಯ ಕಾದಂಬರಿಯಾಗಿ ಕೊಟ್ಟರು. ಕಾರಂತರ ಕಾದಂಬರಿಗಳೆಲ್ಲ ಗಟ್ಟಿಯಾದ ಅನುಭವದ ತಳಹದಿಯ ಮೇಲೆ ನಿಂತಿವೆ. ಅವರ ಬರಹದಲ್ಲಿ ಜೀವಂತವಾದ, ನಮ್ಮ ನಿಜವಾದ ಜಗತ್ತಿಗೆ ಸಮೀಪವಾದ ಜಗತ್ತನ್ನು ಸೃಷ್ಟಿಸುತ್ತಾರೆ. ಜೀವನ ಒಡ್ಡುವ ಪರೀಕ್ಷೆಗಳಲ್ಲಿ ಪಾತ್ರಗಳ ಟೊಳ್ಳು–ಗಟ್ಟಿ ನಿರ್ಣಯವಾಗುತ್ತದೆ. ಅವರ ಕಾದಂಬರಿಗಳಲ್ಲಿ ಸಾಮಾಜಿಕ ಆವರಣ ಜೀವಂತವಾಗುತ್ತದೆ. ವ್ಯಕ್ತಿಯ ಪ್ರಾಧಾನ್ಯವೂ ನುಸುಳದೆ ಆವರಣವೂ ಅಸ್ಪಷ್ಟವಾಗದೆ, ವ್ಯಕ್ತಿತ್ವ–ಸಮಾಜದ ವ್ಯವಸ್ಥೆ ಎರಡೂ ವಾಸ್ತವಿಕವಾಗಿ ನಮಗೆ ಅನುಭವವಾಗುತ್ತದೆ.

ಕಾರಂತರು ಮನುಷ್ಯನ ಬದುಕಿನ ಸಾರ್ಥ್ಯಕ್ಯವನ್ನು ಕಾಣುವುದು 'ಕ್ರಿಯೇಟಿವ್' ಆಗಿ ಬದುಕುವುದರಲ್ಲಿ, ಸೃಜನಶೀಲವಾಗಿ ಬದುಕುವುದರಲ್ಲಿ. ಇತರರ ಬದುಕು ಅರಳುವಂತೆ ಬದುಕುವುದು'ಕ್ರಿಯೇಟಿವ್' ಇಂಥ ಪಾತ್ರಗಳಿಗೆ ಸಾಮಾನ್ಯವಾಗಿ ತಾವು ಒಳ್ಳೆಯವರು ಎನ್ನುವ ಅರಿವೂ ಇರುವುದಿಲ್ಲ. ಇತರರ ಬಾಳನ್ನು ಅರಳಿಸುವುದು ಇವರಿಗೆ ಉಸಿರಾಡುವಷ್ಟು ಸಹು. ಪ್ರತಿಭಾವಂತ ಕಾದಂಬರಿಕಾರ ತನ್ನ ಅನುಭವಕ್ಕೆ ಬದ್ಧನಾಗಿ ಬರೆದಾಗ ತಂತ್ರ ತಾನಾಗಿಯೇ ಮೂಡುತ್ತದೆ, ತಂತ್ರವು ಹೊರಗಿನಿಂದ ನಿರ್ಧರಿಸಿ ಹೊಂದಿಸುವ ಅಂಶವಲ್ಲ ಎನ್ನುವುದು ಕಾರಂತರ ಕಾದಂಬರಿಗಳಲ್ಲಿ ಸ್ಪಷ್ಟವಾಗುತ್ತದೆ. ಅವರು ಎಂದೂ ತಂತ್ರದ ಬಗೆಗೆ ತಲೆ ಕೆಡಿಸಿಕೊಂಡವರಲ್ಲ. ಆದರೆ 'ಮರಳಿ ಮಣ್ಣಿಗೆ', 'ಬೆಟ್ಟದ ಜೀವ', 'ಮೈಮನಗಳ ಸುಳಿಯಲ್ಲಿ', 'ಅಳಿದ ಮೇಲೆ', 'ಮೂಕಜ್ಜಿಯ ಕನಸುಗಳು' ಇಂಥ ಕಾದಂಬರಿಗಳಲ್ಲಿ ಒಂದೊಂದರ ತಂತ್ರವೂ ಹೊಸತು, ಸಾರ್ಥಕ, ಅನುಭವ ಮತ್ತು ಅಭಿವ್ಯಕ್ತಿಗಳ ನಡುವಣ ಸಾರ್ಥಕ ಸಾಧನವಾಗುತ್ತದೆ ತಂತ್ರ. ತಂತ್ರದ ವಿಷಯ ಮಾತನಾಡುವಾಗ, ವಿಮರ್ಶೆಯ ಕೈಗೆ ದಕ್ಕದ ಅಸಾಧಾರಣ ತಂತ್ರ ಉಂಟು ಎನ್ನುವುದನ್ನು ಗಮನಿಸಬೇಕು. 'ಬೆಟ್ಟದ ಜೀವ'ದ ವಸ್ತು ಮನುಷ್ಯ-ನಿಸರ್ಗಗಳ ಸಂಬಂಧ. ನಿಸರ್ಗವೇ ಮನುಷ್ಯನ ಉಳಿವಿಗೆ ಆಧಾರ. ಆತನಿಗೆ ಆಹಾರ ಕೊಡುವುದು, ಅವನ ಬಟ್ಟೆ ಮನೆ, ವಿದ್ಯೆ, ಕೈಗಾರಿಕೆ ಎಲ್ಲಕ್ಕೆ ಸಾಮಗ್ರಿಯನ್ನು ಒದಗಿಸುವುದು ನಿಸರ್ಗ. ಆತನಿಗೆ ಅಪಾಯಗಳನ್ನು ತದು ಒಡ್ಡುವುದೂ ನಿಸರ್ಗವೇ. ಮನುಷ್ಯ ನಿಸರ್ಗದ ಭಾಗ. ಆದರೂ ಅದರಿಂದ ಭಿನ್ನವಾಗಿ ನಿಸರ್ಗವನ್ನು ಬಳಸಿಕೊಂಡು ತನ್ನ ಬಲವನ್ನು ಹೆಚ್ಚಿಸಿಕೊಳ್ಳುತ್ತಾನೆ. ಮನುಷ್ಯ ನಿಸರ್ಗಗಳ ಸಂಬಂಧದ ವಸ್ತು. ಈ ಕಾದಂಬರಿಯ ವರ್ಣನೆಗಳಲ್ಲಿ, ವಾಕ್ಯಗಳಲ್ಲಿ, ಸಂಭಾಷೈಎಲ್ಲಿ ಹೇಗೆ ಪ್ರಕಟವಾಗುತ್ತದೆ ಎನ್ನುವುದನ್ನು ಪೂರ್ಣವಾಗಿ ವಿವರಿಸಲು ಸಾಧ್ಯವಿಲ್ಲ. ಕಾದಂಬರಿಕಾರರ ದರ್ಶನವು ಇಡೀ ಕಾದಂಬರಿಯ ಬರಹವನ್ನು ಹೊಕ್ಕಿದೆ.

ಕಾರಂತರ ಪ್ರಭಾವ ಕನ್ನಡ ಕಾದಂಬರಿಯಲ್ಲಿ ಮಿತವಾದದ್ದು, ಇದಕ್ಕೆ ಕಾರಣ ಪ್ರಾಯಶಃ ಅವರ ಮಾರ್ಗ ಕಷ್ಟವಾದದ್ದು ಎಂಬುದು. ಬರೆದ ಕಾದಂಬರಿಗಳ ಸಂಖ್ಯೆ ಮಹತ್ವದ್ದಾಗುವಾಗ, ತಿಂಗಳಿಗೊಂದರಂತೆ ಕಾದಂಬರಿ ಬೆದು ಎಸೆಯುವವರಿರುವಾಗ, ವರ್ಷಕ್ಕೊಂದು ಕಾದಂಬರಿ ಬರೆಯುವ ಕಾರಂತರ ಸಂಯಮ ಕಷ್ಟದ್ದು. ಅದರಲ್ಲಿ ಘೋಷಣೆಗಳಿಲ್ಲ, ನಾಟಕೀಯ ದೃಶ್ಯಗಳಿಲ್ಲ, ಕಣ್ಣಿಗೆ ಹೊಡೆಯುವ ತಂತ್ರವಿಲ್ಲ, ಆದರೆ ಗಟ್ಟಿಯಾದ ಅನುಭವದ ದೃಷ್ಟಿಯಿಂದ ರಾವ್ ಬಹದ್ದೂರರು, ವ್ಯಾಸರಾಯ ಬಲ್ಲಾಳ, ಜೀವನದ ಪರೀಕ್ಷೆಯ ವಿಧಾನದಿಂದ ಅನಂತಮೂರ್ತಿ, ಒಟ್ಟು ಕಾದಂಬರಿಯ ವಿಧಾನದಿಂದ ಎಸ್.ಎಲ್. ಬೈರಪ್ಪ ಹೀಗೆ ಕೆಲವರಾದರೂ ಕಾರಂತರ ಕಾದಂಬರಿಯ ಹಾದಿಯಲ್ಲಿ ಹೆಜ್ಜೆ ಹಾಕಿದ್ದಾರೆ.

ಒಂದು ಪರಂಪರೆಯನ್ನೆ ಸೃಷ್ಟಿಸುವಷ್ಟು ಪ್ರಭಾವವನ್ನು ಬೀರಿದರು ಅ.ನ. ಕೃಷ್ಣರಾಯರು. 112 ಕಾದಂಬರಿಗಳನ್ನು ಬರೆದರು. ಪ್ರಗತಿಶೀಲ ಚಳವಳಿಯ ನಾಯಕರಾಗಿ ವಿಪುಲವಾಗಿ ಬರೆದರು,

ಮಾತನಾಡಿದರು. ಹಲವು ವಾದವಿವಾದಗಳ ಕೇಂದ್ರವಾಗಿ ಉತ್ಸಾಹದಿಂದ ಸೆಣಸಿದರು. ಸ್ವಲ್ಪ ಹೆಚ್ಚು ಕಡಿಮೆ ತಮ್ಮ ಪ್ರತಿಯೊಂದು ಕಾದಂಬರಿಗೆ ಮುನ್ನುಡಿ ಬರೆದು ಘೋಷಣೆಗಳನ್ನು ಸೇರಿಸಿದರು. ಕೃಷ್ಣರಾಯರು ಕಾದಮಬರಿಯ ಹರಹನ್ನು ವಿಸ್ತರಿಸಿದರು. ಕುಟುಂಬ ಜೀವನ, ಗ್ರಾಮ ಜೀವನ, ನಗರ ಜೀವನ, ವೇಶ್ಯೆಯರ ಜೀವನ, ಕಾರ್ಮಿಕರ ಜೀವನ, ಅಸ್ಪೃಶ್ಯತೆ, ಕಾಮ ಜೀವನ ಎಲ್ಲವನ್ನೂ ಕಾದಂಬರಿಯ ಪರಿಧಿಯಲ್ಲಿ ತರಲು ಯತ್ನಿಸಿದರು. ಮಡಿ–ಮೈಲಿಗೆ, ಶೀಲ–ಅಶ್ಲೀಲಗಳ ಸಂಕೋಚವಿಲ್ಲದೆ ಎಲ್ಲ ಅನುಭವವನ್ನು ಬಳಸಿಕೊಳ್ಳಲು ಪ್ರಯತ್ನಿಸಿದರು. ಕಾದಂಬರಿಯನ್ನು 'ಸಮಸ್ಯೆ'ಗಳ ನಿರೂಪಣೆಗೂ ಸಾಮಾಜಿಕ ಕ್ರಾಂತಿಗೂ ಸಾಧನವನ್ನಾಗಿ ಬಳಸಲು ಪ್ರಯತ್ನಿಸಿದರು. ಬದುಕು ಚೆನ್ನಾಗಬೇಕು ಎಂಬ ಕಳಕಳಿ ಅವರ ಕಾದಂಬರಿಗಳಲ್ಲಿ ಎದ್ದು ಕಾಣುತ್ತದೆ. ಜೊತೆಗೆ ಪ್ರೀತಿ, ಅಂತಃಕರಣಗಳನ್ನು ಮುಖ್ಯ ಮೌಲ್ಯಗಳನ್ನಾಗಿ ಕಾದಂಬರಿಯಲ್ಲಿ ಬೆಳಗಿಸಿದರು. ಇದೆಲ್ಲದರಿಂದ ಕಾದಂಬರಿಗೆ ಲಾಭವೇ ಆಯಿತು. ಅ.ನ.ಕೃ. ಹುಟ್ಟು ಕಥೆಗಾರರು, ಆಸಕ್ತಿ ಉಳಿಯುವಂತೆ ಕಥೆ ಹೇಳಬಲ್ಲರು. ನಿರರ್ಗಳವಾದ, ಲಲಿತವಾದ ಶೈಲಿ. ಈ ವರಗಳೂ, ಸುಲಭವಾಗಿ ಆಕರ್ಷಿಸುವ ಹೇಳಿಕೆಗಳು ಘೋಷಣೆಗಳು–ಭಾವುಕತೆ ಇವೂ ಅವರಿಗೆ ಸಾವಿರಾರು ಮಂದಿ ಓದುಗರನ್ನು ತಂದುಕೊಟ್ಟು, ಕಾದಂಬರಿ ನೂರಾರು ಮನೆಗಳಲ್ಲಿ ಕಾಲಿಡುವಂತೆ ಸಾಧ್ಯ ಮಾಡಿದವು. ಆದರೆ ಅ.ನ.ಕೃ. ಅವರಿಗಿದ್ದ ಸಹಜ ಅನುಕೂಲಗಳೇ ಪ್ರತಿಕೂಲಗಳಾದವು. ಆಸಕ್ತಿ ಉಳಿಯುವಂತೆ ಕಥೆ ಹೇಳಬಲ್ಲವರಾದ್ದರಿಂದ ಕಥೆಯ ಅರ್ಥದತ್ತ ಗಮನ ಕಡಿಮೆಯಾಯಿತು; ನಿರರ್ಗಳವಾಗಿ ಬರೆಯಬಲ್ಲವರಾದ್ದರಿಂದ ಬರೆಯುವುದೇ ಗುರಿಯಾಯಿತು. ಪಾತ್ರಗಳ ಮಾನಸಿಕ ಜೀವನ ಸ್ಫುಟವಾಗುವುದಿಲ್ಲ, ಕಾರಂತರ ಕಾದಂಬರಿಗಳಲ್ಲಿ ಕಾಣುವಂತೆ ಪಾತ್ರಗಳು ಅನುಭವವನ್ನು ಎದುರಿಸುವುದು, ಅನುಭವದಿಂದ ಮಾಗುವುದು ಕಾಣುವುದಿಲ್ಲ. ಸನ್ನಿವೇಶಗಳ ನಿರೂಪಣೆಯಲ್ಲಿ, ಮಾತುಗಾರಿಕೆಯಲ್ಲಿ ನಾಟಕೀಯತೆ ಹೆಚ್ಚಾಯಿತು. ತಂದೆಯಂತಹ ಜಮೀನ್ದಾರ, ಭಾರತೀಯ ಸಂಸ್ಕೃತಿ ಮೂರ್ತಿವೆತ್ತ ಗೃಹಿಣಿ, ವಿಲಾಸಿಯಾದ ತರುಣ, ನಿಷ್ಠಳಾದ ವೇಶ್ಯೆ, ನಂಜಿನ ಅತ್ತೆ – ಇಂತಹ ಪಾತ್ರಗಳು ಮತ್ತೆ ಮತ್ತೆ ಕಾಣಿಸುತ್ತವೆ. ವಸ್ತುವಿನ ಆಯ್ಕೆ, ನಿರೂಪಣೆ ಚಿತ್ರಿಸಿದ್ದು, ಕಾದಂಬರಿಗೆ ಸಾವಿರಾರು ಓದುಗರನ್ನು ಆಕರ್ಷಿಸಿದ್ದು ಅ.ನ.ಕೃ. ಅವರ ಕೊಡುಗೆ. ಸಾಕಷ್ಟು ನಿರ್ಲಿಪ್ತತೆಯನ್ನು ಬೆಳೆಸಿಕೊಳ್ಳದೆ, ಪಾತ್ರಗಳ ಪರ–ವಿರೋಧ ಧೋರಣೆಯನ್ನು ನಿರ್ಧರಿಸಿಕೊಂಡು ಪಾತ್ರಗಳನ್ನು ಕಾದಂಬರಿಕಾರರೇ ನಡೆಸುತ್ತಾರೆನ್ನುವಂತೆ ರೂಪಿಸಿದ್ದು ಅವರ ಕಾದಂಬರಿಗಳಲ್ಲಿ ದೋಷವಾಯಿತು.

ಕಾರಂತರನ್ನು ಅನುಕರಿಸುವುದು ಅಸಾಧ್ಯ. ಅ.ನ.ಕೃ. ಅವರನ್ನು ಅನುಕರಿಸುವುದು ಸುಲಭ. ಅ.ನ.ಕೃ ಅವರ ಶ್ರದ್ಧೆ, ಬುದ್ಧಿಶಕ್ತಿಗಳಿಲ್ಲದ ಹತ್ತಾರು ಮಂದಿ ಅವರನ್ನು ಅನುಕರಿಸಿದರು. ಅತಿ ಭಾವುಕತೆ, ಘೋಷಣೆಗಳು, ವಾಸ್ತವಿಕತೆಯ ಹೆಸರಿನಲ್ಲಿ ಹೋಟಲಿನಲ್ಲಿ ತಿಂದ ತಿಂಡಿಗಳ ಒಂದೊಂದರ ವಿವರ – ಅಂಗಡಿಯಲ್ಲಿ ಕೊಂಡ ಪ್ರತಿ ಸೀರೆ ಖಣಗಳ ವಿವರ – ಪ್ರಯಾಣದಲ್ಲಿ ಓದಿದ ಪತ್ರಿಕೆ, ಕುಡಿದ ಕಾಫಿ

ಸೋಡಾಗಳ ವಿವರ ಎಲ್ಲದರ ಸಮಾರಾಧನೆ ಕನ್ನಡ ಕಾದಂಬರಿಯಲ್ಲಿ ಸಮೃದ್ಧವಾಯಿತು. ಇಂದಿಗೂ ಹೊಸ ಕಾದಂಬರಿಗಳಲ್ಲಿ ಮತ್ತೆ ಮತ್ತೆ ಅ.ನ.ಕೃ ಅವರ ಲೇಖನಿಯೇ ಬರೆದಂತೆ ಭಾಸವಾಗುತ್ತದೆ.[1]

ಸಾಹಿತ್ಯ ಪ್ರಕಾರಗಳಲ್ಲಿ ಕಾದಂಬರಿಯು ಅತ್ಯಂತ ಪ್ರಭಾವಶಾಲಿ ಹಾಗೂ ಜನಪ್ರಿಯವೂ ಆಗಿದೆ. 19ನೆಯ ಶತಮಾನದಲ್ಲಿ ಇಂಗ್ಲಿಷ್ ಸಾಹಿತ್ಯದ ಪ್ರೇರಣೆಯಿಂದ ಹೊಸಗನ್ನಡದಲ್ಲಿ ಸಣ್ಣಕಥೆ, ಪ್ರಬಂಧ, ಭಾವಗೀತೆ, ಜೀವನ ಚರಿತ್ರೆ ಮೊದಲಾದ ಹೊಸ ಪ್ರಕಾರಗಳು ಹುಟ್ಟಿದಂತೆ 'ನಾವೆಲ್' ಎಂಬ ಪ್ರಕಾರ ಕಾದಂಬರಿ ಎಂಬ ಹೆಸರಿನಿಂದ ಪ್ರಚುರವಾಯಿತು.

ಕಾದಂಬರಿ ಎಂಬ ಹೇಗೆ ಬಂದಿತೆಂಬ ವಿಷಯ ಕುತೂಹಲ ಹುಟ್ಟಿಸುವಂತಥದ್ದು. ಸಂಸ್ಕೃತದಲ್ಲಿ ಬಾಣಭಟ್ಟ ರಚಿಸಿದ ಗದ್ಯಕಾವ್ಯ ಕಾದಂಬರಿ ಹೆಸರಿನಿಂದ ಪ್ರಸಿದ್ಧವಾಗಿದೆ. ಇದೇ ಉತ್ತರ ಕರ್ನಾಟಕದಲ್ಲಿ ತುರುಮರಿಯವರಿಂದ ಕಾದಂಬರಿ ಕಾವ್ಯದ ಹೊಸಗನ್ನಡ ಗದ್ಯರೂಪ ಎಂಬ ಹೆಸರಿನಿಂದ ಪ್ರಕಟವಾಗಿ (1875) ಜನರ ಮನಸ್ಸನ್ನು ಸೂರೆಗೊಂಡಿತು.

ಜೈ.ವೈ. ಕೃಷ್ಣಚಾರ್ಯರ ಕಾದಂಬರಿ ಕನ್ನಡ ಗದ್ಯಕತೆಯ ಸವಿ ದಕ್ಷಿಣ ಕರ್ನಾಟಕದ ಮೈಸೂರು ಸಂಸ್ಥಾನದ ಜನರಿಗೆ ಉಂಟಾಗಿತ್ತು. ಕಾದಂಬರಿ ಕಾವ್ಯದ ಸೊಗಸು ನಾಗವರ್ಮನ ಕೃತಿಯ ಮೂಲಕ ಕನ್ನಡಿಗರಿಗೆ ಹಿಂದಿನಿಂದಲೂ ಪರಿಚಯವಾಗಿತ್ತು. ಕಥೆ, ಶೈಲಿ, ನಿರೂಪಣೆ, ವರ್ಣನೆಯ ಚಮತ್ಕೃತಿ ರಸ, ಮೊದಲಾದ ದೃಷ್ಟಿಗಳಿಂದ ಕಾದಂಬರಿ ಕಾವ್ಯ ಜನಮನವನ್ನು ಸೂರೆಗೊಂಡಿತು. ಆದುದರಿಂದ ಸಂಸ್ಕೃತದ ಕಾದಂಬರಿ ಕಾವ್ಯದಂತೆ ರಮ್ಯವಾದ ಎಲ್ಲ ಕೃತಿಗಳನ್ನು ಕಾದಂಬರಿ ಎಂಬ ಹೆಸರಿನಿಂದಲೇ ಕರೆಯುವ ವಾಡಿಕೆ ಏರ್ಪಟ್ಟಿತ್ತು. ಹೀಗಾಗಿ 'ನಾವೆಲ್' ಜಾತಿಗೆ ಕಾದಂಬರಿ ಎಂದು ಕನ್ನಡಿಗರು ಕೊಟ್ಟ ಹೆಸರು ಸಾರ್ಥಕವಾಗಿ ಸ್ಥಿರವಾಗಿ ಉಳಿಯಿತು.

ಇತಿಹಾಸ ಸಂಪಾದಿಸಿ ಕನ್ನಡ ಸಾಹಿತ್ಯದಲ್ಲಿ ನಾಗವರ್ಮನ ಕಾದಂಬರಿ ದುರ್ಗಸಿಂಹನ ಪಂಚತಂತ್ರ, ನೇಮೀಚಂದ್ರನ ಲೀಲಾವತಿ ಪ್ರಬಂಧ. ಚೌಂಡರಸನ ಅಭಿನವ ದಶಕುಮಾರ ಚರಿತ್ರೆ, ದೇವಕವಿಯ ಸುಸುಮಾವಳಿ ಮೊದಲಾದವು ಕುತೂಹಲಕರವಾದ ಕಥೆಗಳನ್ನುಳ್ಳ ಪದ್ಯ ಕಾವ್ಯಗಳು ಗದ್ಯಕಥೆಗಳೂ ಕನ್ನಡ ಸಾಹಿತ್ಯದದಲ್ಲಿ ಇಲ್ಲದಿಲ್ಲ. ಪ್ರಾಚೀನ ಗದ್ಯಗ್ರಂಥವಾದ ವಡ್ಡಾರಾಧನೆ ಹಲವು ಉತ್ತಮ ಕಥೆಗಳ ಸಂಗ್ರಹ. ಮುದ್ದಣನ ರಾಮಾಶ್ವಮೇಧ. ಈಚಿನ ಗದ್ಯ ಕಥೆ ಆದರೆ ಅವು ಯಾವುವೊ ಕಾದಂಬರಿ ಎಂಬ ಸಾಹಿತ್ಯ ಪ್ರಕಾರಕ್ಕೆ ಸೇರುವುದಿಲ್ಲ. ಏಕೆಂದರೆ ಇವುಗಳಲ್ಲಿ ಮೊದಲನೆಯದು ಕೇವಲ ಕಥೆಗಳ ಗುಂಪು. ಎರಡನೆಯದು ಕಾವ್ಯ.

---

[1] ಹೊಸಗನ್ನಡ ಸಾಹಿತ್ಯ ಚರಿತ್ರೆ
ಎಲ್.ಎಸ್. ಶೇಷಗಿರಿ ರಾವ್
ಪ್ರಥಮ ಆವೃತ್ತಿ – 1999

ಮುಮ್ಮಡಿ ಕೃಷ್ಣರಾಜ ಒಡೆಯರ ಆಶ್ರಿತನಾಗಿದ್ದ ಕೆಂಪುನಾರಾಯಣನ (ಸು. 1823) ಮುದ್ರಾ ಮಂಜೂಷವೆಂಬ ಗದ್ಯ ಕೃತಿಯಲ್ಲಿ ಕನ್ನಡ ಕಾದಂಬರಿಯ ರೂಪರೇಖೆಗಳನ್ನು ಗುರುತಿಸಬಹುದಾಗಿದೆ.

ಮುದ್ದಣ 'ಗೋದಾವರಿ' ಎಂಬ ಒಂದು ಕಾದಂಬರಿಯನ್ನು ಬರೆದು ಮುಗಿಸುವಷ್ಟರಲ್ಲಿಯೇ ತೀರಿಕೊಂಡನೆಂದು ಹೇಳುತ್ತಾರೆ. ಕನ್ನಡಿಗರಿಗೆ ಕಾದಂಬರಿಗಳ ಮೊದಲ ಪರಿಚಯ ಕನ್ನಡದ ಮೂಲಕ ಆದುದು ಬಿ. ವೆಂಕಟಾಚಾರ್ಯರು ಮಾಡಿದ ಬಂಗಾಳಿ ಕಾದಂಬರಿಗಳ ಭಾಷಾಂತರದಿಂದ. ಬಂಕಿಮ ಚಂದ್ರರ ಕಾದಂಬರಿ 'ದುರ್ಗೇಶ ನಂದಿಯನ್ನು ಬಂಗಾಳಿ ಭಾಷೆಯಿಂದ ಕನ್ನಡಕ್ಕೆ 1865ರಲ್ಲಿ ಭಾಷಾಂತರಿಸಲಾಯಿತು. ಆಚಾರ್ಯರು ಮೊದಲು ಭಾಷಾಂತರ ಮಾಡಿದ ಕೃತಿ ಭ್ರಾಂತಿವಿಲಾಸ. ಇದೇ ಕನ್ನಡದಲ್ಲಿ ಕಾದಂಬರಿಗಳ ಆರಂಭಕ್ಕೆ ನಾಂದಿ ಎಂದು ಹೇಳಬಹುದು. ಅಂದಿನಿಂದ ಇಂದಿನವರೆಗಿನ ಕಾದಂಬರಿಗಳ ಬೆಳವಣಿಗೆ ಮತ್ತು ವಿಲಾಸಗಳನ್ನು ಕಾಲಮಾನ ರೀತಿಯಿಂದ ಮೂರು ಭಾಗಗಳಾಗಿ ವಿಂಗಡಿಸಬಹುದು. ಮೊದಲನೆಯದು ಆರಂಭಕಾಲ. 19ನೆಯ ಶತಮಾನದ ಉತ್ತರಾರ್ಧದಿಂದ 20ನೆಯ ಶತಮಾನದ ಕಅಲ ಶತಕದವರೆಗೆ.

ಎರಡನೆಯದು ನಿರ್ಮಾಣಶೀಲಯುಗ 1925 ಅಥವಾ 30ರಿಂದ ಸ್ವಾತಂತ್ರ್ಯೋದಯವರೆಗೆ. ಮೂರನೆಯದು ಸ್ವಾತಂತ್ರ್ಯೋದಯದ ಯುಗ ಸ್ವಾತಂತ್ರ್ಯೋದಯದ ಕಾಲದಿಂದ ಇಲ್ಲಿಯವರೆಗೆ.

ಮೈಲಾಪುರದಲ್ಲಿ ಹೈಕೋರ್ಟಿನ ವಕೀಲರಾಗಿದ್ದ ರೆಂಟ್ಲ ವೆಂಕಟಸುಬ್ಬರಾವ್ ಅವರಿಂದ ರಚಿತವಾಗಿ ಮದರಾಸಿನಲ್ಲಿ ಪ್ರಕಟವಾದ 'ಕೇಸರಿ ವಿಲಾಸ'(1895) ಕಾದಂಬರಿಯ ವಿಶಿಷ್ಟ ಲಕ್ಷಣಗಳನ್ನುಳ್ಳ ಕನ್ನಡದ ಪ್ರಥಮ ಸ್ವಾತಂತ್ರ್ಯ ಕಾದಂಬರಿ ಎಂಬುದು ಗೋವಿಂದ ಪೈ ಅವರ ಅಭಿಪ್ರಾಯ.

ದಕ್ಷಿಣ ಕನ್ನಡ ಜಿಲ್ಲೆಯ ಗುಲ್ವಾಡಿ ವೆಂಕಟರಾಯರು ಬರೆದ ಇಂದಿರಾಬಾಯಿ ಅಥವಾ ಸದ್ಧರ್ಮ ವಿಜಯ(1899). ಎರಡನೆಯ ಸ್ವತಂತ್ರ ಸಾಮಾಜಿಕ ಕಾದಂಬರಿ. 250 ಪುಟಗಳ ಈ ಕಾದಂಬರಿಯಲ್ಲಿ ಅಂದಿನ ಸಾರಸ್ವತ ಸಮಾಜದ ವಾಸ್ತವಿಕ ಚಿತ್ರವಿದೆ, ಭಾಗೀರಥಿ, ಸೀಮಂತಿನಿ ಇವು ಇವರ ಇನ್ನೆರೆಡು ಕಾದಬಂಬರಿಗಳು. ಗಳಗನಾಥರ ಹೆಸರು ಕಾದಂಬರಿ ಸಾಹಿತ್ಯದ ಬೆಳವಣಿಗೆಯಲ್ಲಿ ಗುರುತಿಸುವಂಥದ್ದು, ಪದ್ಮನಯನೆ ಇವರ ಪ್ರಥಮ ಕಾಲ್ಪನಿಕ ಕಾದಂರಿ(1848)

ಮಂಗಳೂರಿನ ಬೋಳಾರ ಬಾಬುರಾಯರ ಸ್ವತಂತ್ರ ಕಾದಂಬರಿ ವಾಗ್ದೇವಿ(1905) ಇದು ಸುಮಾರು 308ಪುಟಗಳಿದ್ದು ಈ ಕಾದಂಬರಿಯ ವಸ್ತುವಿಗೆ ಆಗಿನ ಕಾಲದಲ್ಲಿ ನಡೆದ ಕೆಲವೊಂದು ಘಟನೆಗಳೇ ಆಧಾರ ಎಂಬುದಾಗಿ ತಿಳಿದವರು ಹೇಳುತ್ತಾರೆ. ಅಂದಿನ ಸಾಮಾಜಿಕ ಜೀವನದಲ್ಲಿ ಮಠಗಳ ಪಾತ್ರ, ನ್ಯಾಯ ವಿತರಣೆಯ ರೀತಿನೀತಿ, ಅಧಿಕಾರಿಗಳು ಸಾಮಾಜಿಕ ಜೀವನದಲ್ಲಿ ನಡೆಸುತ್ತಿದ್ದ ಕೃತ್ರಿಮ ಕೈವಾಡ

ಇವೇ ಮೊದಲಾದ ವಾಸ್ತವ ಚಿತ್ರಗಳು ಈ ಕಾದಂಬರಿಯಲ್ಲಿ ಮೂಡಿ ಬಂದಿವೆ. ವಾಸ್ತವಿಕ ಘಟನೆಗಳ ಆಧಾರದ ಮೇಲೆ ಅಂದಿನ ಸಮಾಜದ ಕೆಲವೊಂದು ಲೋಪದೋಷಗಳನ್ನು ಎತ್ತಿ ತೋರಿಸುವ ಇಂಥ ಒಂದು ಕಾದಂಬರಿಯನ್ನು ರಚಿಸಿದುದು ಅಂದಿನ ಕಾಲಕ್ಕೆ ಒಂದು ದಿಟ್ಟತನವೆಂದೇ ಹೇಳಬಹುದು. 1906ರಲ್ಲಿ ಅಣ್ಣಾಜಿರಾವ್ ಗುಲ್ವಾಡಿ ಎಂಬುವರು ರಚಿಸಿದ 'ರೋಹಿಣಿ ಇಲ್ಲವೇ ಸಾರಸ್ವತ ಮಂಡಳ'232 ಪುಟಗಳನ್ನೊಳಗೊಂಡ ಒಂದು ಸಾಮಾಜಿಕ ಕಾದಂಬರಿ. ಉತ್ತರ ಕರ್ನಾಟಕದ ಕೆರೂರ ವಾಸುದೇವಚಾರ್ಯರು ರಚಿಸಿದ(1908) ಇಂದಿರೆ ಎಂಬ ಕಾದಂಬರಿ ಸ್ವತಂತ್ರ ಕಅದಂಬರಿಗಳ ಮಾಲೆಯಲ್ಲಿ ಒಂದು ಗಮನಾರ್ಹ ಕೃತಿ.

ಉತ್ತರ ಕರ್ನಾಟಕ ಭಾಷೆಯನ್ನು ಕಾದಂಬರಿಯ ಗದ್ಯಕ್ಕೆ ಅಳವಡಿಸಿಕೊಳ್ಳಲು ಕಾದಂಬರಿಕಾರ ಮಾಡಿರುವ ಪರಯತ್ನ. ಇಲ್ಲಿ ಸ್ಮರಿಸುವಥಂಥದ್ದು ಅಂದು ವಿಶೇಷವಾಗಿ ಚರ್ಚೆಗೆ ಒಳಗಾಗಿದ್ದ ವಿಧವಾ ವಿವಾಹ ಸ್ತ್ರೀ ಶಿಕ್ಷಣ ಮತ್ತು ಸ್ತ್ರೀ ಸಾತಂತ್ರ್ಯದಂತ ವಿಷಯಗಳ ಈಕಾದಂಬರಿಯಲಿಲ ಬರುತ್ತವೆ. ಇಂದಿರೆಯನ್ನು ಆದರ್ಶ ಮಹಿಳೆಯನ್ನಾಗಿ ಚಿತ್ರಿಸಿ ಉತ್ತಮ ಸ್ತ್ರೀ ಶಿಕ್ಷಣದ ಬಗೆಗೆ ಒಳ್ಳೆಯ ನಿದರ್ಶನವನ್ನು ಒದಗಿಸಲಾಗಿದೆ. ಇಲ್ಲಿ ಗಮನಾರ್ಹವಾದ ಮತ್ತೊಂದು ಸಂಗತಿ. ಕಾದಂಬರಿಯ ಸೌಂದರ್ಯವನ್ನು ಹೆಚ್ಚಿಸಲು ಉಪಯೋಗಿಸಿರುವ ಮೋಹಕ ವರ್ಣಗಳು. ಔರಂಗಜೇಬ ಎಂಬುದು ಇತಿಹಾಸವನ್ನು ವಸ್ತುವಾಗುಳ್ಳ ಇವರ ಇನ್ನೊಂದು ಕಾದಂಬರಿ.

ಕಾದಂಬರಿಗಳ ಆರಂಭ ಕಾಲದ ಮೊರಲಿನಲ್ಲಿ ಕೃತಿಗಳನ್ನು ರಚಿಸಿದ ಕೆಲವರನ್ನು ಇಲ್ಲಿ ಸ್ಮರಿಸಿಕೊಳ್ಳಬಹುದಾಗಿದೆ. ವೃದ್ಧ ಪಿತಾಮಹ ವೆಂಕಟಕೃಷ್ಣಯ್ಯನವರು ರಚಿಸಿದೆ. ಚೋರಗ್ರಹಣ ತಂತ್ರ ಕನ್ನಡದ ಪ್ರಥಮ ಪತ್ತೇಧಾರಿ ಕಾದಂಬರಿ. ಎಂ.ಎಲ್. ಶ್ರೀಕಂಠೇಶಗೌಡ ಅವರ ಕನ್ಯಾವಿತಂತು 1895ರಲ್ಲಿ ಪ್ರಕಟವಾಯಿತು. ತೆಲುಗಿನಲ್ಲಿ ವೀರೇಶಲಿಂಗ ಪಂತುಲು ಅವರು ರಚಿಸಿದ ನೂತನ ರೀತಿಯ ಕಲ್ಪನಾ ಕಥೆಗಳಾದ ರಾಜಶೇಖರ ಚರಿತ್ರೆ, ಸತ್ಯವತೀ ಚರಿತ್ರೆ ಮತ್ತು ಸತ್ಯರಾಜಾ, ಪೂರ್ವದೇಶದ ಯಾತ್ರೆಗಳು ಎಂಬ ಮೂರು ಕೃತಿಗಳನ್ನು ಬಎನಗಲ್ ರಾಮಾರಾಯರು 1899ರ ಹೊತ್ತಿಗೆ ಕನ್ನಡಕ್ಕೆ ಭಾಷಾಂತರಿಸಿದ್ದರು. ಗೋಡೆ ಜೀವಣರಾಯರು ಜಾನ್ಸನ್ನಿನ ಕಾದಂಬರಿ ರಾಸಲಾಸನ್ನು ಕನ್ನಡಿಸಿದರು.[2]

ಹಿಂದಿನ ಅವಧಿಗಳಲ್ಲಿನಂತೆ ಈ ಅವಧಿಯಲ್ಲಿಯೂ ಕಾದಂಬರಿಯು ವೈವಿಧ್ಯಮಯವಾಗಿ ಪ್ರಯೋಗ ಶ್ರೀಮಂತವಾಗಿ ಸಾಧನೆ ಸಮೃದ್ಧಿಯಾಗಿ ಬೆಳೆಯಿತು. 1975ರ ಹೊತ್ತಿಗೆ ಪರಸಿದ್ದವಾಗಿದ್ದ ಹಲವಾರು ಕಾದಂಬರಿಕಾರರು ಹೊಸ ಹಾದಿಗಳನ್ನು ಗುರುತಿಸಿಕೊಂಡರು.

---

[2]ಮಾಹಿತಿ– 'ಸಾಮಾಜಿಕ ಜಾಲತಾಣ'

ಹೊಸ ಶಿಖರಗಳನ್ನು ಮುಟ್ಟಿದರು. ಇವರಲ್ಲಿ ಎಸ್.ಎಲ್. ಭೈರಪ್ಪನವರಂತೆ. ಯಶವಂತ ಚಿತ್ತಲಾರಂತೆ. ಪೂರ್ಣಚಂದ್ರ ತೇಜಸ್ವಿಯವರಂತೆ. ಕೆಲವರ ಬೆಳವಣಿಗೆಯಂತೂ ಅಚ್ಚರಿಯನ್ನುಂಟು ಮಾಡುವಂತದ್ದು.

ಸಾಹಿತ್ಯ ಪಂಥಗಳ 'ಐಡಿಯಾಲಜಿ'ಗಳ ಹಿಡಿತ ಕಡಿಮೆಯಾಗಿ ವೈಯಕ್ತಿಕ ಪ್ರಭಾವಕ್ಕೆ ಮುಕ್ತ ಆವರಣ ಲಭ್ಯವಾದದ್ದು ವೈವಿಧ್ಯವನ್ನೂ ಸಾಧನೆಯನ್ನೂ ಬೆಳೆಸಿತು.

ಸಾಮಾನ್ಯವಾಗಿ ಪೌರಾಣಿಕವೂ ಅಲ್ಲದ ಐತಿಹಾಸಿಕವೂ ಅಲ್ಲದ ಕಾದಂಬರಿಯನ್ನು ಸಾಮಾಜಿಕ ಕಾದಂಬರಿ ಎಂದು ಕರೆಯುವುದು ವಾಡಿಕೆ. ಸಾಮಾಜಿಕ ಕಾದಂಬರಿಯಲ್ಲಿ ಸಮಾಜವು ಸ್ಪಷ್ಟವಾಗಿ ಒಂದು ಗಟ್ಟಿಯಾದ ಪಾತ್ರವಾಗಬೇಕು. ಅದರ ವ್ಯಕ್ತಿತ್ವ ಸ್ವರೂಪ , ನಮ್ಮ ಅನುಭವಕ್ಕೆ ಬರಬೇಕು. ಕುವೆಂಪುರವರ 'ಮಲೆಗಳಲ್ಲಿ ಮದುಮಗಳು' ಕಾರಂತರ ಕೆಲವು ಕಾದಂಬರಿಗಳು, ಭೈರಪ್ಪನವರ 'ಗೃಹಭಂಗ' ತೇಜಸ್ವಿಯವರ 'ಚಿದಂಬರ ರಹಸ್ಯ' ಇಂತಹ ಕೆಲವು ಕಾದಂಬರಿಗಳನ್ನು ಮಾತ್ರ ಸಾಮಾಜಿಕ ಕಾದಂಬರಿಗಳೆನ್ನ ಬಹುದು.

ಈ ದೃಷ್ಟಿಯಿಂದ ಸಾರಾ ಅಬೂಬಕರ್ ಅಂತವರ ಕಾದಂಬರಿ ಮಹತ್ವದ್ದಾಗಿದೆ. ಈಚೆಗೆ ಕಾದಂಬರಿಗಳಲ್ಲಿ ಮುಸ್ಲಿಂ ಸಮಾಜವನ್ನು ಚಿತ್ರಿಸುತ್ತಿರುವ ಮುಸ್ಲಿಂಲೇಖಕರು ಈ ಸಮಾಜವನ್ನು ಜೀವಂತವಾದಿ ತಮ್ಮ ಕೃತಿಗಳಲ್ಲಿ ಪುನರ್ ಸೃಷ್ಟಿ ಮಾಡುತ್ತಿದ್ದಾರೆ.

ಈ ಅರ್ಥದಲ್ಲಿ 'ಸಾಮಾಜಿ' ಎಂದು ಕರೆಯಬಹುದಾದ ಒಂದು ಕಾದಂರಿ 'ಭುಜಂಗಯ್ಯನ ದಶಾವತಾರಗಳು', ಶ್ರೀ ಕೃಷ್ಣ ಆಲನಹಳ್ಳಿ ಯವರ ರಚನೆ. ಗ್ರಾಮೀಣ ಜೀವನದ ಒತ್ತಡಗಳು. ಮೌಲ್ಯಗಳ ಮಧ್ಯೆ ಒಂದು ಜೀವ ಬೆಳೆಯುವುದನ್ನು ಮಾಗುವುದನ್ನು ಇಲ್ಲಿ ಅವರು ಚಿತ್ರಿಸಿದರು. ಗ್ವಾಸೇ ಎಂಬ ವಿಚಾರವಂತ ಹೇಳುವುದೆಂದರೆ ನವ್ಯ ಸಾಹಿತ್ಯದಲಿಲ 'ಅಮಾನವೀಕರಣ'ದ ಕ್ರಿಯೆ ನಡೆಯುತ್ತದೆ. 'ಗತಿ–ಸ್ಥಿತಿ' ಈ 'ಅಮಾನವೀಕರಣ'ದ ಒಳ್ಳೆಯ ಉದಾಹರಣೆಯು ಹೌದು. ಅರ್ಥಪೂರ್ಣತೆಯ ಅಗತ್ಯವಿದ್ದುದ್ದರಿಂದಲೇ 'ಸಂಸ್ಕಾರ' ದ ನವ್ಯತೆ ಗ್ರಾಹ್ಯವಾಯಿತು.

ನವ್ಯತೆ ಅಸಂಗತೆಯತ್ತ ಸಾಗಿದ ಕೂಡಲೇ ಕನ್ನಡದಲ್ಲಿ ನವ್ಯತೆಯ ವಿರುದ್ಧ ಬಂಡಾಯ ಶುರುವಾಯಿತು. ತ.ರಾ.ಸು ಸಾಮಾಜಿಕ ಕಾದಂಬರಿಗಳನ್ನಲ್ಲದೆ ಪೌರಾಣಿಕ ವಸ್ತುಗಳನ್ನು ಐತಿಹಾಸಿಕ ವಸ್ತುಗಳನ್ನು ಆರಿಸಿಕೊಂಡು ಬರೆದರು. ಅವರ ಐತಿಹಾಸಿಕ ಕಾದಂಬರಿ 'ದುರ್ಗಾಸ್ತಮಾನ'. ಚಿತ್ರದುರ್ಗದ ಕಡೆಯ ಪಾಳೆಗಾರ ಮದಕರಿ ನಾಯಕನ ಕಥೆ. ಶಂಕರ ಮೊಕಾಶಿ ಪುಣೀಕರರ ಒಂದು ಮಹತ್ವಾಕಾಂಕ್ಷೆಯ ಕಾದಂಬರಿ' ಅವಧೇಶ್ವರಿ' ಇದನ್ನು ಅವರು ವೇದಕಾಲೀನ ರಾಜಕೀಯ ಕಾದಂಬರಿ ಎಂದು ಕರೆದಿದ್ದಾರೆ.

ಮಹಿಳೆಯರು ಕಾದಂಬರಿ ಕ್ಷೇತ್ರದಲ್ಲಿ ಪ್ರಧಾನವಾಗಿ ಕಾಣುತ್ತಾರೆ. ಈ ಇಪ್ಪತ್ತು ವರ್ಷಗಳಲ್ಲಿ ಸ್ಪಷ್ಟವಾಗಿ ಅವರ ಗುರಿ. ಅವರ ವಸ್ತು. ಅವರ ನಿಲುವು ಮತ್ತು ಮೌಲ್ಯಗಳಲ್ಲಿ ಮಾರ್ಪಾಡಾಗಿದೆ.

'ಆಕಾಶಗಂಗೆ'ಯಿಂದ ಪ್ರಾರಂಭವಾಇ ಅನುಪಮಾ ನಿರಂಜನ ಕಾದಂಬರಿಗಳಲ್ಲಿ ಕಾಣುವ ಬದಲಾವಣೆ ಮಹಿಳೆಯರ ಕಾದಂಬರಿಗಳಲ್ಲಾದ ಕ್ರಾಂತಿಯ ಕಿರುಚಿತ್ರ ಎನ್ನಬಹುದು–[3].

ಮಹಿಳೆಯರು ಎನ್ನುವ ಅನುಕಂಪ– ಅನುಗ್ರಹಗಳನ್ನು ಬಯಸದೆ ವಿಮರ್ಶೆಗೆ ವಿಲ್ಲಬಲ್ಲ ಕಾದಂಬರಿಗಳನ್ನು ಮಹಿಳೆಯರು ಬರೆಯುತ್ತಿದ್ದಾರೆ. ಎಚ್.ವಿ. ಸಾವಿತ್ರಮ್ಮನವರ 'ಸೀತೆ ರಾಮ ರಾವಣ' ಸಾರ ಅಬೂಬಕರ್ ಅವರ 'ಚಂದ್ರಗಿರಿಯ ತೀರದಲ್ಲಿ' , ವೀಣಾ ಅವರ 'ಗಂಡಸರು' ಇವನ್ನು ಪ್ರಾತಿನಿಧಿಕ ಎಂದು ಪರಿಗಣಿಸಿ ಮಹಿಳೆಯರ ಕಾದಂಬರಿಗಳನ್ನು ಸಮೀಕ್ಷಿಸಿದರೆ ಮಹಿಳೆಯರು ಕಾದಂಬರಿ ಮಾಧ್ಯಮದಲ್ಲಿ ತಮ್ಮ ಸ್ವತಂತ್ರ ವ್ಯಕ್ತಿತ್ವವನ್ನು ಕಂಡು ಕೊಳ್ಳುತ್ತಿದ್ದಾರೆ ಎನ್ನುವುದು ಸ್ಪಷ್ಟವಾಗುತ್ತದೆ.

ದಲಿತ–ಬಂಡಾಯ ಸಾಹಿತ್ಯ ವಇರೋಧರ ಏಕತಾನದಿಂದ ತಪ್ಪಿಸಿಕೊಂಡು ಹೆಚ್ಚು ವಿಶ್ಲೇಷಣಾತ್ಮಕವಾಗುತ್ತಿದೆ. 'ಪಾಸಿಟಿವ್' ಆಗುತ್ತಿದೆ. ಎನ್ನುವುದನ್ನು ಗುರುತಿಸಬೇಕು. ಬರಗೂರು ರಾಮಚಂದ್ರಪ್ಪಾವರ 'ಸೂರ್ಯ', ಅರವಿಂದ ಮಾಲಗಿತ್ತಿಯುವರ 'ಕಾರ್ಯ', ಕಾ.ತ. ಚಿಕ್ಕಣ್ಣನವರ'ಮುಂಜಾವು', ಕುಂ.ವಿ. ಅವರ 'ಕಪ್ಪು', ಮನಜ ಅವರ 'ಮಾಗಿ', ಮೊದಲಾದ ಕಾದಂಬರಿಗಳು ಈ ಪಂಥದ ಗುರಿಗಳು ಮತ್ತು ಮೌಲ್ಯಗಳನ್ನು ಪ್ರತಿನಿಧಿಸುತ್ತವೆ.–4

3,4 ಹೊಸಗನ್ನಡ ಸಾಹಿತ್ಯ ಚರಿತ್ರೆ– ಎಲ್.ಎಸ್. ಶೇಷಗಿರಿರಾವ್
ಪು.ಸಂ– 260, 262
ಪರಿಷ್ಕೃತ– ವಿಸ್ತೃತ ಪ್ರಥಮ ಆವೃತ್ತಿ–1999
ಪ್ರಕಾಶರು–ಅಂಕಿತ ಪುಸ್ತಕ ,ಬಸವನಗುಡಿ, ಬೆಂಗಳೂರು

ಐತಿಹಾಸಿಕ ಕಾದಂಬರಿಗಳ ಹಿನ್ನೆಲೆ

ಬಿ.ವೆಂಟಾಚಾರ್ ಹಾಗು ಗಳಗನಾಥರ ಕಾಲ ಮಲುಗಿದುಹೋದ ಮೇಲೆ ಕನ್ನಡದಲ್ಲಿ ಐತಿಹಾಸಿಕ ಕಾದಂಬರಿಗಳು ವಿಪುಲವಾಗಿ ಬರಲಿಲ್ಲ.

ಸಾಮಾಜಿಕ ಕಾದಂಬಗಳು ಜನರ ಅಭಿರುಚಿಯನ್ನು ಸರೆಹಿಡಿದ ಮೇಲೆ ಅವುಗಳನ್ನು ಓದುವವರು ಇಲ್ಲವಾಯಿತು. ಆದರೆ ಅಂಥ ಕೊರತೆಯ ಕಾಲದಲ್ಲಿಯೂ ಮಾಡಿದ ಪರಯತ್ನಗಳು ಯಶಸ್ಸನ್ನು ಗಳಿಸಿವೆಯೆಂದೇ ಹೇಳಬೇಕು. ಆನಂದ ಕಂದರ 'ರಾಜಯೋಗಿ' ಹಾಗು 'ಅಶಾಂತಿ ಪರ್ವ'ಗಳು ಇತಿಹಾಸಕ್ಕೆ ಪ್ರಾಮಾಣಿಕವಾಗಿ ಬರೆದ ಕೃತಿಗಳಿವೆ. ಆನಂದ ಕಂದರಲ್ಲಿ ,ಗಳಗನಾಥರ ಕಾದಂಬರಿಗಳಲ್ಲಿಯಂತೆ ಕಲ್ಪಿತ ಪಾತ್ರಗಳನ್ನು ಪ್ರಮುಖವಾಗಿ ಪರಿಗಣಿಸುವುದಿಲ್ಲ. ವಿಜಯನಗರದ ಇತಿಹಾಸವನ್ನು ಹಿನ್ನೆಲೆಗಿಟ್ಟುಕೊಂಡು ಬರೆದು ಈಕಾದಂಭರಿಗಳು ಆ ಕಾಲದ ವೈಭವ ಹಾಗು ವೀರ ಜೀವನವನ್ನು ಯಥಾವತ್ತಾಗಿ ಪ್ರತಿಬಿಂಬಿಸುತ್ತವೆ. ಕೇವಲ ವಿವರಗಳಲ್ಲಷ್ಟೇ, ಅಲ್ಲದೆ ಜೀವನದರ್ಶನದಲ್ಲಿಯೂ ಆನಂದಕಂದರ ಇತಿಹಾಸ ಪ್ರಜ್ಞೆ ಜಾಗೃತವಾಗಿಯೇ ಇರುತ್ತದೆ.

ದೇವುಡು ಅವರ 'ಅವಳ ಕತೆ' ಯಲ್ಲಿ ಕೂಡ ವಿಜಯನಗರದ ಇತಿಹಾಸವೇ ಹಿನ್ನೆಲೆಯಾಗಿದೆ. ಆದರೆ ಈ ಕಾದಂಬರಿ ಸಂಪೂರ್ಣವಾಗಿ ಐತಿಹಾಸಿಕವಾಗಿಲ್ಲ. ಇತಿಹಾಸಕಾಲದಲ್ಲಿ ನಡೆದಿರಬಹುದಾದ ಒಂದು ರಮ್ಯ ಶೃಂಗಾರದ ಕತೆ. ವಿಜಯನಗರದ ಸಾಮ್ರಾಜ್ಯದ ದೈವದೊಂದಿಗೆ ಹೇಗೋ ಸಂಬಂಧವನ್ನು ಬೆಳೆಸಿಕೊಂಡಿದೆ.

ಶ್ರೀ ದೇವುಡು ಅವರ 'ಮಯೂರ' ಮಯೂರ ಕಾದಂಬರಿ ಬಹಳ ಹಿಂದೆ ಪ್ರಕಟವಾಗಿದ್ದು ಸಾಕಷ್ಟು ಜನಪ್ರಿಯತೆಯನ್ನುಗಳಿಸಿತು.

'ಮಯೂರ ಒಂದು ಕಥೆ ; ಅದರಲ್ಲಿ ದಿಟಕ್ಕಿಂತ ದಿಟದಂತೆ ತೋರುವ ಸಟೆಯೇ ಹೆಚ್ಚು' ಎಂದು ಅವರು ಹೇಳಿದ್ದರೂ ಈ ಕಥೆಗೆ ಸರಿಯಾದ ಐತಿಹಾಸಿಕ ಹಿನ್ನೆಲೆಯಿದೆ.[4]

---

4. ಕೀರ್ತಿನಾಥ ಕುರ್ತುಕೋಟಿ
ಪುಟ.ಸಂ- 239, 240, 335-336 -1983
'ಯುಗಧರ್ಮ ಹಾಗು ಸಾಹಿತ್ಯ ದರ್ಶನ'

ತ.ರಾ.ಸು ಚಿತ್ರದುರ್ಗದ ಇತಿಹಾಸವನ್ನುವಲಂಬಿಸಿ ಐದಾರು ಕಾದಂಬರಿಗಳನ್ನು ಬರೆದಿದ್ದಾರೆ. ಅವರ ಮೊದಲ ಕಾದಂಬರಿಯಾದ 'ಹಂಸಗೀತ' ಆಕಾಲದ ಒಬ್ಬ ಸಂಗೀತಗಾರನ ಕತೆಯಾಗಿದೆ, ಹಾಗು ಕೇಂದ್ರ ವ್ಯಕ್ತಿಯಾದ ವೆಂಕಟಸುಬ್ಬಯ್ಯನವರ ಮನೋರಂಜವಾದ ಕತೆಯೊಂದಿಗೆ ಆಕಾಲದ ಐತಿಹಾಸಿಕ ವಿವರಗಳು ಕತೆಗೆ ಜೀವಕಳೆಯನ್ನು ಕೊಡುತ್ತವೆ. ಅವರ ಮುಂದಿನ ಕಾದಂಬರಿಗಳಾದ 'ಕಂಬನಿಯ ಕುಯಿಲು', 'ರಕ್ತರಾತ್ರಿ', 'ತಿರುಗುಬಾಣ', 'ಹೊಸಹಗಲು', ಮೊದಲಾದವುಗಳಲ್ಲಿ ನೇರವಾಗಿ ಚಿತ್ರದುರ್ಗದ ಇತಿಹಾಸವ್ನು ಬಳಸಿಕೊಳ್ಳಲಾಗಿದೆ.

ಕೆ.ವಿ. ಅಯ್ಯರ್‌ರವರ 'ಶಾಂತಲಾ' ಇನ್ನೊಂದು ಮಹತ್ವಪೂರ್ಣವಾದ ಕಾದಂಬರಿಯಾಗಿದೆ. ಹೊಯ್ಸಳರ ವಿಷ್ಣುವರ್ಧನನ ಈ ಕಾದಂಬರಿಯ ಕೇಂದ್ರ ವ್ಯಕ್ತಿಯಾಗಿದ್ದಾನೆ. ಕುವರ ವಿಷ್ಣುವಿನ ಉಪನಯನ, ಶಾಂತಲೆ- ಲಕ್ಷ್ಮಿಯವರ ಮದುವೆಯಿಂದ ಮೊದಲುಗೊಂಡು ಶಾಂತಲೆಯ ಮರಣದವರೆಗೆ ಕಾದಂಭರಿಯ ಕಥಾನಕ ವ್ಯಾಪ್ತಿಯಿದೆ.

ಮಾಸ್ತಿಯವರ 'ಚನ್ನಬಸವನಾಯಕ' ಒಂದು ಅದ್ಭುತವಾದ ಐತಿಹಾಸಿಕ ಕಾದಂಬರಿಯಾಗಿದೆ. ಬಿದನೂರಿನ ನಾಯಕ, ಮನೆತನದಲ್ಲಿ ಉಂಟಾದ ಅವ್ಯವಸ್ಥೆ ರಣಿರಾಣಿ ವೀರಮ್ಮಾಜಿ ಮತ್ತು ಮಗ ಚನ್ನಬಸವನಾಯಕ ಇವರಲ್ಲಿ ನಡೆದಿರುವ ವೈಮನಸ್ಸು. ಶಾಂತವ್ವನ ಪತಿಭಕ್ತಿ, ಮೈಸೂರು ಅರಸರೊಡನೆ ಬಂದ ಸಂಬಂಧ. ಹೈದರಾಲಿಯ ಮಹತ್ವಾಕಾಂಕ್ಷೆ. ನಾಯನಿಗೆ ಬಂದ ಅಪಾಯ, ಹೈದರಾಲಿಯ ದಂಡಯಾತ್ರೆ, ಕೊನೆಗೆ ನಾಯಕನ ಮರಣ ಈ ಘಟನೆಗಳು ಕತೆಗೆ ಮುಖ್ಯ ದ್ರವ್ಯವನ್ನು ಒದಗಿಸುತ್ತಿವೆ.

'ಚಿಕ್ಕವೀರರಾಜೇಂದ್ರ' ಮಾಸ್ತಿಯವರ ಎರಡನೆಯ ಐತಿಹಾಸಿಕ ಕಾದಂಬರಿಯಾಗಿದೆ. ಕೊಡಗಿನ ಕೊನೆಯ ಅರಸನಾದ ಚಿಕ್ಕವೀರರಾಜೇಂದ್ರ ನೈತಿಕ ಅಧಃಪತನದ ಮೂಲಕ ರಾಜ್ಯವನ್ನು ಕಳೆದುಕೊಂಡ ದುರಂತ- ಚಿತ್ರ ಈ ಕಾದಂಬರಿಯ ರಾಜ್ಯವನ್ನು ಕಳೆದುಕೊಂಡ ದುರಂತ- ಚಿತ್ರ ಈ ಕಾದಂಬರಿಯ ಕಥಾವಸ್ತುವಾಗಿದೆ. 'ಚನ್ನಬಸವನಾಯಕ'ದಂತೆಯೇ ಇಲ್ಲಿಯೇ ಜನತೆಯ ಸಂಸ್ಕೃತಿಯ ಚಿತ್ರಣಕ್ಕೆ ಮಾಸ್ತಿಯವರು ಮಹತ್ವವನ್ನಿತ್ತರು, ಚಿಕ್ಕವೀರರಾಜನ ವ್ಯಕ್ತಿತ್ವವೇ ವಿನಾಶಗಳ ಸಿಡಿಮದ್ದಾಗಿದೆ 'ಕುಂಟಬಸವಯ್ಯನ' ಸಂಬಂಧ ಅದಕ್ಕೆ ಹೊತ್ತಿಸಿದ ಉರಿಯಾಗಿ. ವಿನಾಶ ಇಡೀ ರಾಜ್ಯವನ್ನು ಕಬಳಿಸಿಬಿಡುತ್ತಾರೆ.

ಹೀಗೆ ಇತಿಹಾಸಕ್ಕೆ ಸಂಬಂಧಿಸಿದ ಕಾದಂಬರಿಗಳು ಕನ್ನಡ ಸಾಹಿತ್ಯದಲ್ಲಿ ಹೇರಳವಾಗಿ ಸಿಗುತ್ತವೆ. ಕಥೆಯು ವಸ್ತು ಹಾಗು ನಿರೂಪಣೆಯ ಶೈಲಿಯಲ್ಲಿ ವಿಭಿನ್ನತೆಯನ್ನು ಕಾಣಬಹುದಾಗಿದೆ.[5]

---

5. ಯುಗಧರ್ಮ ಹಾಗು ಸಾಹಿತ್ಯದರ್ಶನ
ಕೀರ್ಥಿನಾಥ ಕುರ್ತುಕೋಟಿ
2ನೇ ಮುದ್ರಣ
ಪು- 239-340

ಅಧ್ಯಾಯ – 3

ಅಧ್ಯಯನದ ಸ್ವರೂಪ

ಅಧ್ಯಯನದ ಸ್ವರೂಪ

ಲೇಖಕಿಯೇ ಹೇಳಿರುವಂತೆ ಇದೊಂದು ನಿಜಜೀವನದಲ್ಲಿ ನಡೆದಿರುವ ನೈಜ ಚಿತ್ರಣವಾಗಿದೆ. ಅವರ ಕುಟುಂಬದ ಹಿರಿಯರಾದಂತಹ' ಶಿವಲಿಂಗೇಗೌಡ' ಎನ್ನುವ ವ್ಯಕ್ತಿ ಮತ್ತು ಕುಟುಂಬದವರು ಸ್ವಾತಂತ್ರ್ಯ ಹೋರಾಟ ಮತ್ತು ಚಳುವಳಿಯಲ್ಲಿ ಭಾಗಿಯಾಗುವ ಮತ್ತು ಸ್ವಾತಂತ್ರ್ಯವನ್ನು ಪಡೆದು ಯಶಸ್ವಿಯಾದ ನೈಜ ಚಿತ್ರವಾಗಿದೆ.

ಸ್ವಾತಂತ್ರ್ಯ ಪಡೆಯುವ ಸಲುವಾಗಿ ಹೋರಾಟ ಚಳುವಳಿ. ಪ್ರತಿಭಟನೆಯಲ್ಲಿ ನಿರತರಾಗಿ ಬ್ರಿಟಿಷರ. ಗುಂಡುಗಳಿಗೆ ಎದೆಯೊಡ್ಡಿ. ಬೂಟುಕಾಲಿನ ತುಳಿತಕ್ಕೆ ಒಳಗಾಗಿ. ಲಾಠಿ ಏಟನ್ನು ತಂದು ರಕ್ತದ ಕೋಡಿಯನ್ನು ಹರಿಸಿ. ಸ್ವಾತಂತ್ರ್ಯಕ್ಕಾಗಿ ಬಲಿದಾನ ನೀಡಿ ಹುತ್ಮಾತ್ಮರಾದ ನೈಜ ಕಥಾ ಹಂದರವನ್ನು ಎಲ್ಲಿಯೂ ಮೀತಿಮೀರಿ ವರ್ಣಿಸಿದೆ. ವೈಭವೀಕರಿಸಿದೆ. ಅಚ್ಚುಕಟ್ಟಾಗಿ ಹೆಣೆದಿರುವ ಕೃತಿಯ ತುಂಬ ತ್ಯಾಗ, ಬಲಿದಾನಗಳು ನಾಯಕತ್ವ ಗುಣ, ನಿಸ್ವಾರ್ಥದಿಂದ ಹಳ್ಳಿಯ ಹೆಣ್ಣು ಮಕ್ಕಳು ಸ್ವಾತಂತ್ರ್ಯ ಹೋರಾಟದಲ್ಲಿ ಸ್ವಯಿಚ್ಚೆಯಿಂದ ಪಾಲ್ಗೊಳ್ಳುವುದು ಕೃತಿಯ ವಿಶೇಷ. ಗಾಂಧೀಜಿಯವರು ಸಮಯದಲ್ಲಿ ಅವರ ಭಾಷಣ ಕೇಳಲೆಂದು ಹಳ್ಳಿಯ ಮೂಲೆ–ಮೂಲೆಯಿಂದ ಬರುವ ಸಾಗರದಂತ ಜನಗಳು. ಸ್ವಯಂಪ್ರೇರಿತರಾಗಿ ಹಣ. ಒಡವೆಗಳನ್ನು ನೀಡುತ್ತಿದ್ದರೂ, ಅದರಲ್ಲಿಯೂ ಹೆಣ್ಣು ಮಕ್ಕಳು ಮನೆ–ಮಂದಿಗಳಿಗೆ ಕೇಳದೆ, ಹೆದರದೆ. ಒಡವೆಗಳನ್ನು ನೀಡಿ ಸ್ವಾತಂತ್ರ್ಯಕ್ಕಾಗಿ ಅಳಿಲುಸೇವೆಯನ್ನಾದರೂ ಮಾಡಬೇಕೆಂದು ಮನಸ್ಸನ್ನು ಸಧೃಡರಾಗಿ ಕೊಂಡು ತಮ್ಮ ಮನೆಗಳಲ್ಲಿಯೇ ನೂಲು ತೆಗೆಯುವುದು. ಹೆಣೆಗೆಗಳನ್ನು ಹಾಕು ಕೆಲಸದಲ್ಲಿ ತಮ್ಮ ಹಳ್ಳಿಯ ಹೆಣ್ಣು ಮಕ್ಕಳಿಗೆ ಹೇಳಿಕೊಡುವ ಮೂಲಕ ಗಾಂಧೀಜಿಯವರ ಸ್ವಾಲಂಭಿ ಬದುಕನ್ನು ನನಸಾಗಿ ಮಾಡುತ್ತಾರೆ.

ಸ್ವಯಂಪ್ರೇರಿತವಾಗಿ ಹೋರಾಟದ ಮಾರ್ಗವನ್ನು ಸೃಷ್ಠಿಸಿಕೊಳ್ಳುತ್ತಾ ವಿಶಾಲ ಭಾರತದ ಕನಸು ಕಾಣುತ್ತಾ. ಅದನ್ನು ನನಸು ಮಾಡಿಕೊಳ್ಳುವ ನಿಟ್ಟಿನಲ್ಲಿ ಹೆಜ್ಜೆಹಾಕಿದರೆ ನಮ್ಮವರೇ ಕೆಲವರು ಬ್ರಿಟಿಷ್ ಅಧಿಕಾರಿಗಳಿಗೆ ಬೆನ್ನೆಲುಬಾಗಿ ನಿಂತು ಅವರ ಪರವಾಗಿಯೇ. ಮುಂದುವರೆಯುವ ಪಾತ್ರವರ್ಗಗಳನ್ನು ಲೇಖಕಿ ಯಾವುದೇ ಮುಚ್ಚು–ಮರೆಯಿಲ್ಲದೆ. ಮಾರ್ಮಿಕವಾಗಿ ಚಿತ್ರಿಸಿರುವುದು ಅವರ ನೈಜತೆಗೆ ಹಿಡಿದ ಕನ್ನಡಿಯಾಗಿದೆ.

ನಮ್ಮ ಹೊಲ ನಮ್ಮ ನೆಲ ನಿಮ್ಮದೇನು? ಎನ್ನುವಂತಹ ಚಿನ್ನಕ್ಕಳ ಮಾತಿಗೆ ಕುಪಿತಗೊಂಡು ಅವಳನ್ನು ಅವಮಾನಿಸುವ ಪತಿಯನ್ನು ಗಮನಿಸಿದರೆ, ಸ್ವತಃದ ಹೋರಾಟದ ದುರ್ಗಮದ ಹಾದಿ ಎಷ್ಟು ಕಠಿಣವಾದುದೆಂದು ಊಹಿಸಿಕೊಳ್ಳಲು ಅಸಾಧ್ಯವಾಗುತ್ತದೆ.

ಕಥಾನಾಯಕಿ ಚಿನ್ನಕ್ಕಳಿಗೆ ಆದ ಅವಮಾನವನ್ನು ಸಹಿಸಲಾರದೇ. ಜಾರ್ಜ್ ಸಾಹೇಬನಿಗೆ ಗುಂಡಿಕ್ಕಿ

ಕೊಲ್ಲಲು ಮುಂದಾಗಿ ಗುರಿತಪ್ಪಿ ಅವನ ಹೆಂಡತಿಯನ್ನು ಬಲಿತೆಗೆದುಕೊಂಡಾಗ. ಸುಮಾರು 20ವರ್ಷಗಳ ಕಾಲ ಅಂಡಮಾನಿನ ನಡುವಿನ ಸರಳುಗಳ ಹಿಂದೆ ಕಾಲ ಕಳೆಯುವಂತಾಗುತ್ತದೆ. ಜೈಲಿನಲ್ಲಿದ್ದಾಗ ಮಹಾನ್ ನಾಯಕರುಗಳ ಹೇಳುವಂತಹ ಮೈನವಿರೇಳಿಸುವಂತಹ ಕತೆಗಳು. ಭಾಷಣಗಳು ಸ್ವಾತಂತ್ರ್ಯಕ್ಕೆ ಸ್ಫೂರ್ತಿನೀಡುವ ಚರ್ಚೆ. ಮಾತುಗಳಿಂದ ಮನಸ್ಸನ್ನು ಗಟ್ಟಿಗೊಳಿಸಿಕೊಂಡು ಬಿಡುಗಡೆಯಾದ ನಂತರ ಸಂಪೂರ್ಣವಾಗಿ ತನ್ನನ್ನು ಸ್ವಾತಂತ್ರ್ಯ ಸಂಗ್ರಾಮದಲ್ಲಿ ತೊಡಗಿಸಿಕೊಳ್ಳುವ ಪರಿಯಂತೂ ಒಂದು ರೋಚಕವೇ ಸರಿ.

ಅಂಡಮಾನಿನ ಕರಿನೀರಿನ ಶಿಕ್ಷೆಯನ್ನು, ಆ ಕ್ಷಣಗಳನ್ನು ಅತ್ಯಂತ ಮಾರ್ಮಿಕವಾಗಿ, ಮನಮಟ್ಟುವಂತೆ ಚಿತ್ರಿಸಿರುವುದು ಲೇಖಕಿಯ ಮತ್ತು ಕಾದಂಬರಿಯ ವಿಶೇಷತೆ ಎನ್ನಬಹುದು.

ಜೈಲುಗಳು ವರ್ಣನೆ, ನರಕ ಸದೃಶ ಶಿಕ್ಷೆ, ಅದರಲ್ಲೂ ಸುಶಿಕ್ಷಿತರ ಗಲ್ಲು ದುರ್ಗಮ ಕಾಡನ್ನು ಸವರಿ ತೋಟವನ್ನಾಗಿ ಮಾಡುವ ಶಿಕ್ಷೆ. ಕಾಡಿನಲ್ಲಿ ಕಾಡುಜನರ ಕೈಗೆ ಸಿಕ್ಕರೆ ಇನ್ನೂ ಹೀನಾಯವಾಗಿ (ಭಯಂಕರವಾಗಿ) ಸಾಯುವ ಸ್ಥಿತಿ. ರುಚಿ–ಶುಚಿಯಿರದ ಆಹಾರ, ಜೈಲರ್‌ಗಳ ದಬ್ಬಾಳಿಕೆ, ಸಹೃದಯರನ್ನು ಬೆಚ್ಚಿ ಬೀಳುಸುತ್ತದೆ.

ಲತಾಗುತ್ತಿಯವರ ಇತರೆ ಸಾಹಿತ್ಯ ಕೃತಿಗಳಿಗೆ ಹೋಲಿಸಿದರೆ ಇದು ವಿಭನ್ನವಾದ, ವಿಶಿಷ್ಟವಾದ ನೈಜ ಚಿತ್ರಣವಾಗಿದೆ, ಜೊತೆಗೆ ಬೆಳಗಾವಿಯ ಭಾಷೆ, ಸಹೃದಯರ ಮನಸ್ಸನ್ನು ಸೆಳೆಯುತ್ತದೆ. ಬೆಳಗಾವಿ. ಭಾಷೆ ಬ್ರಿಟಿಷರ ಭಾಷೆ, ಆಧುನಿಕ ಕನ್ನಡ ಭಾಷೆಯನ್ನು ಕಾದಂಬರಿಯುದ್ದಕ್ಕೂ ಕಾಣಬಹುದು.

ಚಿನ್ನಕ್ಕಳಿಗೆ ಬ್ರಿಟಿಷ್ ಅಧಿಕಾರಿಯಿಂದಾದ ಅವಮಾನ ಮತ್ತು ಅವಳ ಸಾವು

ಕಥಾನಾಯಕಿಯಾದ ಚಿನ್ನಕ್ಕಳು ಬ್ರಿಟಿಷರ ಕುತಂತ್ರಗಳಿಗೆ ಮತ್ತು ಅವರು ನೀಡುವ ಕಿರುಕುಳಗಳಿಗೆ ಬಗ್ಗದೇ ಇರುವಂತಹ ನಾರಿಯಾಗಿದ್ದಳು. ಬಾಣಂತನ ಮುಗಿಸಿ ಗಂಡನ ಮನೆಗೆ ಹೊರಡಲು ಅನುವಾಗುತ್ತಿದ್ದ ದಿನಗಳು. ಗಂಡನ ಮನೆಗೆ ಹೋದಮೇಲೆ ಮತ್ತೆ ತವರಮನಿಗೆ ಇನ್ನ್ಯಾವಾಗ ಬರ್ತಿನೋ ಏನೋ ಎಂದುಕೊಂಡು ಮರುದಿನ ಅವು ಅಪ್ಪನಿಗೆ ಹೇಳಿ ಗೆಳತಿಯರೊಂದಿಗೆ ಹೊಲಕ್ಕೆ ಹೋಗಲು ಸಿದ್ದಳಾದಳು. ಮನೆಯಲ್ಲಿ ಆಜೂ ಬಾಜೂ ಯಾರು ಎಷ್ಟೇ ಹೇಳಿದರೂ ಕೇಳದೆ ಹಠ ಹಿಡಿದವಳಂತೆ ಹೊರಟಳು'(ಪು.ಸಂ.30)

ಬಹುಶಃ ಚಿನ್ನಕ್ಕನ ದುರಾದೃಷ್ಟದ ಬಾಗಿಲು ಹೊಲಕ್ಕೆ ಹೊರಡುವ ಮೂಲಕ ತೆರೆದುಕೊಳ್ಳುತ್ತದೇನೋ ಎನಿಸುತ್ತದೆ. ಯಾರು ಎಷ್ಟೇ ಹೇಳಿದರೂ, ಬಾಣಂತಿ ಎನ್ನುವುದನ್ನೂ ಮರೆತು ತನ್ನ ಹೊಲ, ಗದ್ದೆ ನೋಡಲು ಹೊರಡುತ್ತಾಳೆ.

ಗಂಡನ ಮನೆಯವರು ಶ್ರೀಮಂತ ಮನೆತನದವರಾದರೂ ಗಂಡನೂರಿನಲ್ಲಿ ಬೇಕಾದಷ್ಟೂ ಗದ್ದೆ,

ಹೊಲವಿದ್ದರೂ ಇವಳಿಗೆ ತವರು ಮನೆಯ ತುಡಿತ. ಅಣ್ಣ ತಮ್ಮಂದಿರನ್ನು ಪ್ರೀತಿಯಿಂದ ಬಯ್ಯುವ ಅವಳ ಕಾಳಜಿ. ಒಂಚೂರು ಕಡಿಮೆಯಿರಲಿಲ್ಲ.

ಚಿನ್ನಕ್ಕ ನೀ ಮೂರು ತಿಂಗಳ ಬಾಣಂತಿ' ನಿನಗ್ಯಾಕ ಬೇಕು ಇದೆಲ್ಲಾ. ನಿಮ್ಮಪ್ಪ ನಿನ್ನ ತಮ್ಮಂದಿರು ನೋಡಕೋತಾರ ಸಾಕಬಿಡಲ್ವಾ' ಎಂದು ಎದುರುಗಡೆ ಮನೆಯ ಹಿರಿಯ ಕಾಶಮ್ಮ ಆಯಿ ಹೇಳಿದರೂ ಕೇಳದೆ. 'ನೋಡಬೇ ಆಯಿ ವರ್ಷ ಆಗಾಕ ಬಂತು ಹೊಲದ ಕಡೆ ಹೋಗಿಲ್ಲ. ಒಂದಿಟೂ ಹೋಗಿ ಹೊಲದಾಗ ಹೆಜ್ಜೆ ಇಟ್ಟಬರ್ತೇನ ಸ್ವಲ್ಪ. ಸುಮ್ಮನಿರಬೇಕು ಎಂದು ಹೊರಟಿದ್ದಳು.

'ಹೊಲದ ಮ್ಯಾಲಿನ ಪ್ರೀತಿ ಇನ್ನೂ ಬಿಟ್ಟಿಲ್ಲ ಬಿಡವಾ ನೀ' ಎಂದು ಆಯಿ ಸುಮ್ಮನಾಗಿದ್ದ ಮೇಲಿನವರೆ ಅಗಾಧ ಪ್ರೀತಿ ಮತ್ತು ತುಡಿತವನ್ನು ನೋಡಬಹುದು. ಹೊಲಕ್ಕೆ ಹೋಗುವ ಮುನ್ನ ಚಿನ್ನಕ್ಕ ತನ್ನ ಕೂಸಿಗೆ ಹಾಲು ಕೂಡಿಸಿ ಅವ್ವನಿಗೆ ಮಗುವನ್ನು ನೋಡಿಕೊಳ್ಳಲಿಕ್ಕೆ ಕೇಳಿ, ಮಗುವನ್ನು ತೊಟ್ಟಲಿಗೆ ಹಾಕಿ, ಸಂತೋಷದಿಂದ ಹೊಲದ ದಾರಿ ಹಿಡಿದಳು.

ಅವು ಆಷಾಢದ ಮಳೆಗಾಲವಾಗಿರುವುದರಿಂದ ಎಲ್ಲೆಲ್ಲೂ ಹಸಿರು ಕಂಗೊಳಿಸುತ್ತಿತ್ತು. ಎಲ್ಲರ ಹೊಲಗಳು ಸಮೃದ್ಧವಾಗಿದ್ದವು. ಅಕ್ಕಪಕ್ಕದವರ ಹೊಲದವರನ್ನಲ್ಲಾ ಮಾತನಾಡಿಸಿ ತನ್ನ ತೋಟದ ಮನೆಯಲ್ಲಿ ಬಂದು ಕುಳಿತಳು. ಚಿನ್ನಕ್ಕ ಹೊಲದ ಕಡೆ ಬಂದು ಸುಮಾರು ದಿನಗಳೇ ಕಳೆದುದರಿಂದ ಅವಳನ್ನು ಮಾತನಾಡಿಸಲು ಅಕ್ಕಪಕ್ಕದ ಹೊಲದವರು ಬಂದು. ಚಿನ್ನಕ್ಕಳ ಯೋಗಕ್ಷೇಮವನ್ನು ವಿಚಾರಿಸಿ. ಹರಟುತ್ತಾ ಕುಳಿತಿದ್ದ ಹೆಂಗಸರು. ಕೆಂಪು ಮೂತಿಯ ಜನಗಳು ಹೇಗೆ ತೊಂದರೆಗೀಡು ಮಾಡುತ್ತಾರೆ. ಎಂಬುದನ್ನೆಲ್ಲಾ ಚಿನ್ನಕ್ಕನಿಗೆ ವಿವರಿಸುತ್ತಿದ್ದರು.

ಇದಕ್ಕೆ ಪೂರಕವೆಂಬಂತೆ ಜಮೀನಿಗೆ ಹೊಂದಿಕೊಂಡಿರುವಂತೆಯೇ ಇರುವ ಬ್ರಿಟಿಷರ ಬಂಗಲೆಗಳು. ಪರೇಡ್ ಗ್ರೌಂಡುಗಳು ಇದ್ದವು. ಈ ಹೆಂಗಸರು ಗುಂಪುಕಟ್ಟಿಕೊಂಡು ಹರಟುತ್ತಿದ್ದ ಧ್ವನಿ ಅಲ್ಲೇ ಪಕ್ಕದಲ್ಲಿದ್ದ ಕಮಾಂಡೋ ಹುಡುಗರ ಕಿವಿಗೆ ಕೇಳಿಸಿತು. ಈ ಹೆಂಗಸರನ್ನು ಕೆಣಕುವ ಉದ್ದೇಶದಿಂದಲೇ ಬಂದು ಇಲ್ಲೇನು ಮಾಡುತ್ತಿರುವಿರಿ ಎಂದು ದರ್ಪದಿಂದ ಕೇಳಿದರು.

ಅವರು ನಗು, ಕೇಕೆ, ಹೆಂಗಸರನ್ನು ನೋಡುವ ಕೊಳಕು ದೃಷ್ಟಿಗೆ ನೆರೆದಿದ್ದ ಹೆಂಗಸರೆಲ್ಲಾ ಸೆರಗು ತಲೆ ಮೇಲೆ ಮತ್ತು ಮುಖವನ್ನು ಮುಚ್ಚಿಕೊಳ್ಳುತ್ತಾ ಓಡಲು ಶುರು ಮಾಡಿದರು. ಇದನ್ನೆಲ್ಲಾ ಗಮನಿಸಿದ ಚಿನ್ನಕ್ಕ ಅವರನ್ನು ತಡೆಯಲು ಯತ್ನಿಸಿದಳು. ಆ ಬ್ರಿಟಿಷ್ ಕಮಾಂಡೋ ಹುಡುಗರ ಪ್ರಶ್ನೆಗಳಿಗೆ ಚಿನ್ನಕ್ಕಳ ದಿಟ್ಟ ಉತ್ತರಗಳು ಹೆಂಗಸರನ್ನು ಭಯಬೀಳುವಂತೆ ಮಾಡಿದ್ದವು. ಇದೆಲ್ಲ ನಮ್ಮ ಹೊಲಗದ್ದೆ ನಿಮ್ಮದೇನು? ಎನ್ನುವಂತೆ ಅವಳ ಉತ್ತರಗಳು.

ಆ ಕಮಾಂಡೋ ಹುಡುಗರು ಅಲ್ಲಿಗೇ ಸುಮ್ಮನಾಗದೇ ಆ ಹೆಂಗಸರನ್ನೆಲ್ಲಾ ಸುತ್ತುವರೆಯತೊಡಗಿದರು. ಮೈಕೈ ಮುಟ್ಟುತ್ತಾ ಗಲ್ಲ ಸವರತೊಡಗಿದರು (ಪು.ಸಂ.32) ಆ ಹೆಂಗಸರೆಲ್ಲಾ ಭಯಗೊಂಡು ಕೂಗಾಡತೊಡಗಿದಂತೆ, ಅಶ್ಲೀಲದ ಅತಿರೇಕವೆಂಬಂತೆ ಪ್ಯಾಂಟು ಸಡಿಲಿಸಿ, ಮೂತ್ರ ವಿಸರ್ಜನೆಯನ್ನು ಮಾಡಿದರು. ಇದರಿಂದ ಹೆಂಗಸರ ಜೀವವೇ ನೆತ್ತಿಗೆ ಬಂದಂತಾಗಿ ಬಾಯಿ ಬಾಯಿ ಬಡಿದುಕೊಳ್ಳತೊಡಗಿದರು.

ಇಲ್ಲಿ ಬ್ರಿಟೀಷರ ಅಶ್ಲೀಲದ ಅತಿರೇಖತೆಯನ್ನು ಕರ್ನಾಟಕದ ಹಳ್ಳಿಯ ಮುಗ್ಧ ಹೆಣ್ಣು ಮಕ್ಕಳಿಗೆ ಊಹಿಸಲಾರದ ಒಂದು ಬೆಳವಣಿಗೆಯಾಗಿತ್ತು. ಬ್ರಿಟಿಷ್ ಕಮಾಂಡೋ ಹುಡುಗರಿಗೆ ತಮ್ಮ ಮಾತುಗಳೇ ವೇದವಾಕ್ಯ ಅಧಿಕಾರದ ಚುಕ್ಕಾಣಿಯನ್ನು ಹಿಡಿದಿರುವ ರಾಜಪ್ರಭುಗಳು ಎಂದು ಭಾವಿಸಿದ್ದರು.

ಹೆಂಗಸರು ಬಾಯಿ–ಬಾಯಿ ಬಡಕೊಂಡಿದ್ದನ್ನು ಕೇಳಿದ ಹೊಲದಲ್ಲಿ ಕೆಲಸ ಮಾಡುತ್ತಿದ್ದ ಗಂಡಸರೆಲ್ಲ ಜಮಾಯಿಸುವ ವೇಳೆಗೆ ಚೆನ್ನಕ್ಕ ರೌದ್ರಾವತಾರ ತಾಳಿ ಕಲ್ಲುಗಳನ್ನು ಅವರೆಡೆಗೆ ತೂರುತ್ತಿದ್ದಳು. ಜಮಾಯಿಸಿದ ಜನರೆಲ್ಲರೂ ಎಷ್ಟು ಸಮಾಧಾನಿಸಿದರೂ ತಣ್ಣಗಾಗಲಿಲ್ಲ.

ಈ ಹಿಂದೆಯೂ ಚೆನ್ನಕ್ಕಳ ಮೂರ್ನಾಲ್ಕು ಪ್ರಸಂಗಗಳನ್ನು ಜಾರ್ಜ್ ಸಾಹೇಬ ಕಂಡಿದ್ದ. ಈಗ ಅವಳ ಅವತಾರವನ್ನು ನೋಡಿ ಅವನಿಗೂ ಸಿಟ್ಟು ಬಂತು. ಹುಡುಗರ ಮೇಲೆ ಕಲ್ಲು ತೂರಾಟ ಸರಿಯಲ್ಲವೆಂದು ಹೇಳಿದರೂ ಕೇಳದ ಚೆನ್ನಕ್ಕಳಿಗೆ ಬಂದೂಕನ್ನು ಅವಳೆಡೆಗೆ ಗುರಿ ಮಾಡಿದ "ನನ್ನ ಕೊಂದಾಕ್ತೀಯೇನೋ" ಎನ್ನುತ್ತಾ ಅವನಿಗೆ ಎದುರಾಗುತ್ತಲೇ ಮುಂದೆ ಹೆಜ್ಜೆಯಿಡತೊಡಗಿದಳು" (ಪು.ಸಂ. 33)

ನೆರೆದಿದ್ದ ಹೆಂಗಸರು ಎಷ್ಟು ಸಮಾಧಾನಿಸಿದರೂ, ಕೊಸರಿಕೊಂಡು, ಸಾಹೇಬನನ್ನು ಬಯ್ಯಲು ಮುಂದಾದಳು. ಸಾಹೇಬನ ಆಜ್ಞೆಯಂತೆ, ಚೆನ್ನಕ್ಕಳನ್ನು ಕಮಾಂಡೋ ಹುಡುಗರು ಹಿಡಿದು ನಿಲ್ಲಿಸಿದರು. ಚೆನ್ನಕ್ಕ ಅವರ ಮೇಲೆ ಜೋರಾಗಿ ಉಗುಳಿದಳು. ಇದರಿಂದ ಇನ್ನೂ ಕುಪಿತನಾದ ಸಾಹೇಬ ಬಂದೂಕನ್ನು ಅವಳೆದೆಗೆ ಹಿಡಿಯುತ್ತಾನೆ.

'ನಮ್ಮೂರಿಗೆ ಬಂದು ನಮ್ಮದ ಅನ್ನ ತಿಂದು, ನನಗ ಬಂದೂಕು ಹಿಡಿತಿಯೇನೋ ಎಂದವಳೇ ಕಾಲಿನಿಂದ ಜೋರಾಗಿ ಸಾಹೇಬನಿಗೆ ಒದೆಯುತ್ತಾಳೆ. ಬ್ರಿಟಿಷ್ ಅಧಿಕಾರಿಗೆ ಒದೆಯುವುದೆಂದರೆ ಸಣ್ಣ ಮಾತೇ. ಕಮಾಂಡೋಗಳು ಅವಳನ್ನು ನೆಲಕ್ಕೆ ಕೆಡವುತ್ತಾರೆ. ಆ ಸಾಹೇಬ ತನ್ನ ಬೂಟುಕಾಲುಗಳಿಂದ ಅವಳ ಬೆನ್ನು ಸೊಂಟಕ್ಕೆ ಒದ್ದು ಮತ್ತೆ ಅವಳೆದೆಗೆ ಬಂದೂಕು ಹಿಡಿಯುತ್ತಾನೆ.

ನೆರೆದಿದ್ದ ಜನರೆಲ್ಲರೂ ಎಷ್ಟೇ ಬೇಡಿಕೊಂಡರೂ, ತಪ್ಪಾಯಿತೆಂದು ಪರಿಪರಿಯಾಗಿ ಬೇಡಿಕೊಂಡರೂ ಬಿಡುವಂತೆ ಕಾಣಲಿಲ್ಲ. ಜಾರ್ಜ್ ಸಾಹೇಬ. ಮತ್ತೆಂದೂ ಈ ಕಡೆ ತಲೆ ಹಾಕುವುದಿಲ್ಲವೆಂದು ಹೇಳು" ಎಂದು ಒತ್ತಾಯಿಸಿದ.

ಆದರೆ ಸ್ವಾಭಿಮಾನಿ ಮತ್ತು ಛಲ ತುಂಬಿಕೊಂಡಿರುವ ಚಿನ್ನಕ್ಕ ಆ ಕೆಂಪು ಮೂತಿಯ ಜಾರ್ಜ್‌ನಿಗೆ ಅಂತ ಸಂದರ್ಭದಲ್ಲೂ ದಿಟ್ಟತನದಿಂದಲೇ "ನನ್ನ ಹೊಲ, ನನ್ನ ಊರು, ನಾ ಜೀವಂತ ಇರುವವರೆಗೂ ಇಲ್ಲಿ ಬರುವವಳೆ. ನಿಮ್ಮಂಥವರ ಉಪಟಳ, ಉಡಾಳತನ ಹೆಚ್ಚಾತಂದ್ರೆ ಕುಡಗೋಲಿಂದ ಕೊಚ್ಚಿ ಕೊಂದಹಾಕ್ತೇನೆ" (ಪು.ಸಂ.53) ಎಂದು ವೀರಾವೇಶದಿಂದಲೇ ಕೂಗಿಹಾಕುತ್ತಿದ್ದಳು.

ಇಲ್ಲಿ ಆಶ್ಚರ್ಯ ಮತ್ತು ವಿಪರ್ಯಾಸ ಎಂದರೆ ಸುತ್ತ ನೆರೆದಿದ್ದ ಗಂಡಸರು ಹೆದರಿ ಬ್ರಿಟಿಷ್ ಕಮಾಂಡೋ ಹುಡುಗರನ್ನು, ಜಾರ್ಜ್ ಸಾಹೇಬನನ್ನು ಕ್ಷಮೆ ಕೇಳುತ್ತಿದ್ದರು. ಚಿನ್ನಕ್ಕ ಮಾತ್ರ ತನ್ನ ಸ್ವಾಭಿಮಾನವನ್ನು ಬಿಟ್ಟುಕೊಡದೇ ವೀರಾವೇಶದಿಂದ ಒಬ್ಬಂಟಿಯಾಗಿ ಹೋರಾಡುತ್ತಿದ್ದುದು ಅವಳ ದಿಟ್ಟತನವನ್ನು ಮತ್ತು ಧೈರ್ಯವನ್ನು ಎಂತಹವರನ್ನೂ ನಾಚಿಸುವಂತಿತ್ತು.

ಇಷ್ಟಕ್ಕೇ ಸುಮ್ಮನಾಗದ ಬ್ರಿಟಿಷರ ದರ್ಪ, ದೌರ್ಜನ್ಯಗಳು ಬಂದೂಕಿನಿಂದ ಸಾಹೇಬ ಚಿನ್ನಕ್ಕಳ ಸೆರಗು ಸರಿದ ಎದೆಯ ಸುತ್ತ ಸುತ್ತುತ್ತಲೇ ಇತ್ತು. ಗಂಡಸರೆಲ್ಲರೂ ನಾವು ಮತ್ತೆ ಈ ಕಡೆ ಬರದೇ ಇರುವಾಗೆ ನೋಡಿಕೊಳ್ತೇವೆ. ಎಂದು ಗೋಗರೆದಿದ್ದರಿಂದ "ನೀವು ಹೇಳ್ತೀರಿ ಎಂದು ಬಿಡ್ತೀನಿ. ಮತ್ತೆ ಈ ಕಡೆ ತಲೆ ಹಾಕಿದರೆ ನಿನ್ನ ಕಥೆ ಮುಗಿದಂಗೇನೇ" ಎಂದ ಜಾರ್ಜ್ ಸಾಹೇಬನಿಗೆ ಮತ್ತೆ ಚಿನ್ನಕ್ಕ ಉಗುಳುತ್ತಾಳೆ. ಮತ್ತೆ ರೊಚ್ಚಿಗೆದ್ದ ಜಾರ್ಜ್ ಚಿನ್ನಕ್ಕಳನ್ನು ನೆಲಕ್ಕೆ ಕೆಡವಿ ತನ್ನ ಗೂಟುಗಾಲುಗಳಿಂದ ಅವಳ ತುಂಬಿದೆದೆಗೆ ಒದ್ದು ಕೂದಲು ಎಳೆದಾಡಿ ಮುಖಕ್ಕೆ ಹೊಡೆಯುತ್ತಾನೆ.

ಅಲ್ಲಿ ಬ್ರಿಟಿಷ್ ಕಮಾಂಡೋ ಹುಡುಗರು ಈ ಪ್ರಸಂಗ ನೋಡಿ ಖುಷಿ ಪತ್ತರೆ ಇತ್ತ ರೈತ ಜನರಿಗೆ ತಮ್ಮ ಹೆಣ್ಣು ಮಗಳಿಗಾದ ಅವಮಾನದಿಂದ ಕುಗ್ಗಿ ಹೋದರು. ಈ ಎಲ್ಲಾ ಅವಮಾನಗಳಿಗೆ ಒಳಗಾದ ಕಥಾನಾಯಕಿ ಚಿನ್ನಮ್ಮ ತನ್ನ ಮನೆಯ ಹಿಂದಿರುವ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳುವ ಮೂಲಕ ಸೋದರ ಸಂಬಂಧಿಯಾದ 'ಶಿವಲಿಂಗೇಗೌಡ' ಎನ್ನುವ ಮತ್ತೊಬ್ಬ ಸಾಹಸಿ. ಪರಾಕ್ರಮಿ, ಸ್ವಾಭಿಮಾನಿ, ಸ್ವಾತಂತ್ರ್ಯ ಹೋರಾಟಗಾರನ ಹುಟ್ಟಿಗೆ ಕಾರಣಳಾಗುತ್ತಾಳೆ.

'ಶಿವಲಿಂಗು' ಸುಮಾರು 18–20 ಪ್ರಾಯದ ಹುಡುಗ. ಚಿನ್ನಕ್ಕಳು ಬ್ರಿಟೀಷರ ವಿರುದ್ಧ ಉರಿದೇಳುತ್ತಿದ್ದ ಪ್ರಸಂಗ. ಮಾತುಗಳು, ಅವಳ ದಿಟ್ಟತನವನ್ನೆಲ್ಲವನ್ನೂ ಗಮನದಲ್ಲಿ ನೆನೆಸಿಕೊಂಡು ವೇದನೆ ಪಡುತ್ತಿದ್ದ. ತಮ್ಮ ಮನೆಯ ಹೆಣ್ಣು ಮಗಳಿಗಾದ ಅವಮಾನವನ್ನು ಸಹಿಸಿಕೊಳ್ಳಲಾರದೇ ಆ ಬ್ರಿಟಿಷ್ ಅಧಿಕಾರಿ ಜಾರ್ಜ್‌ಗೆ ಗತಿ ಕಾಣಿಸಬೇಕೆಂದು ಮನದಲ್ಲೇ ಆ ಸದಾವಕಾಶಕ್ಕಾಗಿ ಕಾಯುತ್ತಾ ತನ್ನ ಉಪಾಯಕ್ಕೆ ಬೇಕಾದ ವ್ಯವಸ್ಥೆಯನ್ನು ಮಾಡಿಕೊಳ್ಳುತ್ತಿರುತ್ತಾನೆ. ಅಂತೂ ಒಂದು ದಿನ ವ್ಯವಸ್ಥಿತವಾಗಿಯೇ ಸಂಚು ರೂಪಿಸಿ ಬಂದೂಕಿನಿಂದಲೇ ಕೊಲ್ಲಬೇಕೆಂದು ನಿರ್ಧರಿಸಿ, ಮಳೆ, ಗಾಳಿ, ಕತ್ತಲು ಭಯ, ಮನೆಯವರ ಮಾತುಗಳನ್ನು ಲೆಕ್ಕಿಸದೇ ನಡೆದೇ ಬಿಟ್ಟ.

ಬಂಗಲೆಯ ಬುಡದಲ್ಲಿರುವ ಯಾವುದೇ ಒಂದು ಮರವನ್ನು ಹತ್ತಿ ಕುಳಿತುಕೊಂಡು ತನ್ನ ಗುರಿಗಾಗಿ ಶತಪ್ರಯತ್ನ ಮಾಡುತ್ತಿರುತ್ತಾನೆ. ಅಂತೂ ಶಿವಲಿಂಗು ಎಂದುಕೊಡಂತೆಯೇ ಅರ್ಧ ತೆರೆದ ಕಿಟಕಿಗಳು, ದೀಪದ ಬೆಳಕು, ತನ್ನ ಗುರಿಗೆ ಎದುರಾಗಿ ಕುಟುಂಬದವರೊಡನೆ ಊಟಕ್ಕೆ ಕುಳಿತಿದ್ದ ಜಾರ್ಜ್ ಅಧಿಕಾರಿ, ಈ ಅವಕಾಶಕ್ಕಾಗಿಯೇ ಕಾದುಕುಳಿತ ಶಿವಲಿಂಗು, ತನ್ನ ಬಂದೂಕನ್ನು ತೆಗೆದು ಜಾರ್ಜ್‌ಗೆ ಗುರಿಯಿಟ್ಟ ಕ್ಷಣಾರ್ಧದಲ್ಲಿಯೇ 'ಢಮಾರ್' ಎಂದು ಭಾರೀ ಶಬ್ದದೊಂದಿಗೆ ಜಾರ್ಜ್‌ನ ಹೆಂಡತಿಯಾದ ಕ್ಯಾಥರೀನ್‌ಳನ್ನು ಹೊಡೆದುರುಳಿಸಿತು. ಗುರಿ ತಪ್ಪಿದ್ದಕ್ಕೆ ಮತ್ತೊಮ್ಮೆ ಜಾರ್ಜ್‌ಗೆ ಹೊಡೆದ. ಢಮಾರ್ ಎಂಬ ಶಬ್ದವಾಯಿತಷ್ಟೇ. ಎರಡನೆಯ ಬಾರಿಗೂ ಶಿವಲಿಂಗುವಿನ ಗುರಿ ತಪ್ಪಿ ಜಾರ್ಜ್ ಜಾರಿಕೊಂಡಿದ್ದ. ಮನೆಯೊಳಗಿನ ಕಿರುಚಾಟ, ಕಾವಲುಗಾರರ ಹೋರಾಟ ಹೇಳತೀರದು.

ಇಲ್ಲಿ ಚಿನ್ನಕ್ಕಳನ್ನು ಅವಮಾನಿಸಿದ ಜಾರ್ಜ್‌ಗೆ ಗುರಿ ತಲುಪಿ, ಅಮಾಯಕ ಹೆಣ್ಣು ಮಗಳೊಬ್ಬಳ ಜೀವ ತೆಗೆದಿತ್ತು ಶಿವಲಿಂಗುವಿನ ಗುಂಡು. ಗುರಿ ತಪ್ಪಿದ್ದರಿಂದ ಅಮಾಯಕ ಕ್ಯಾಥರೀನ್‌ಳನ್ನು ಸಾವಿಗೀಡಾಗುವಂತೆ ಮಾಡಿತ್ತು. ಈಗ ಶಿವಲಿಂಗುನೂ ಒಂದು ಸಂದಿಗ್ಧ ಪರಿಸ್ಥಿತಿಗೆ ಸಿಲುಕಿಕೊಂಡ. ಅವನ ದ್ವೇಷ, ಸೇಡು, ಕಡಿಮೆಯಾಗಲಿಲ್ಲ. ಆದರೆ ಕ್ಯಾಥರೀನ್‌ಳ ಸಾವಿಗೆ ಮನದಲ್ಲೇ ಮರುಕವನ್ನು ವ್ಯಕ್ತಪಡಿಸಿಕೊಳ್ಳತೊಡಗಿದ್ದ. ಆದರೆ ತಾನಂದುಕೊಂಡಂತೆ ಚಿನ್ನಕ್ಕಳ ಆತ್ಮಕ್ಕೆ ಶಾಂತಿ ತಂದುಕೊಡಲಾಗಲಿಲ್ಲವೆಂಬ ಕೊರಗು ಅವನನ್ನು ಕಾಡುತ್ತಲೇ ಇರುತ್ತದೆ.

ಮರುದಿನ ನಸುಕಿನಲ್ಲೇ ಶಿವಲಿಂಗನನ್ನು ಪೊಲೀಸರು ಹುಡುಕಿಕೊಂಡು ಬಂದು ವಿಚಾರಿಸಿದಾಗ ಧೈರ್ಯದಿಂದಲೇ "ಪೊಲೀಸರ ನಾ ಹೀಗ ಇಲ್ಲಿ ಏನೂ ಹೇಳೋದಿಲ್ಲ. ನಾ ಏನ್ ಹೇಳಬೇಕನ್ನೋದು ಚಾವಡಿಯೊಳಗ ಹೇಳ್ತೀನಿ ನಡಿರಿ. ಕೈಗೆ ಬೇಡಿ ಹಾಕೋದಿದ್ರ ಹಾಕಿ (ಪು.ಸಂ. 42) ಎಂದು ದಿಟ್ಟತನದಿಂದ ಒಂಚೂರು ಅಳುಕದೇ ಹೇಳುವ ಮಾತು. ಜೊತೆಗೆ ಅವನಲ್ಲಿ ಜಾರ್ಜ್‌ನ ಬಗೆಗೆ ರಕ್ತ ಕುದಿಯುತ್ತಲೇ ಇತ್ತು.

ಬೆಳಗಾವಿಯಿಂದ ಫೌಜುದಾರ ಬಂದು "ಜಾರ್ಜ್ ಹೆಂಡತಿಯನ್ನು ಕೊಂದು ಓಡಿ ಬಂದ ಮನುಷ್ಯನನ್ನು ಎದುರಿಗೆ ನಿಲ್ಲಿಸ್ರಿ" (ಪು.ಸಂ. 44) ಎಂದು ತನ್ನ ಏರು ದನಿಯಲ್ಲಿ ಚರ್ಚೆ ಶುರುಮಾಡತೊಡಗಿದ.

ಶಿವಲಿಂಗುವಿನ ಗೆಳೆಯರು ನೆರೆಹೊರೆಯವರು ಮನೆಯ ಮಂದಿ, ಶಾಲೆಯ ಮಾಸ್ತರರಾದ ಶೇಷಪ್ಪ ಮಾಸ್ತರರು ಮತ್ತು ರಾಯಪ್ಪ ಮಾಸ್ತರರು ಎಲ್ಲರೂ ಶಿವಲಿಂಗುವಿನ ಒಳ್ಳೆಯ ಸದ್ಗುಣ, ಸನ್ನಡತೆಯನ್ನು ಹೊಗಳಿ ಅವನು ಅಂತ ಕೆಲಸ ಮಾಡುವ ಹುಡುಗನಲ್ಲ ಎಂದು ಹೇಳಿದರೂ ಫೌಜುದಾರರು

ಮತ್ತು ಪೊಲೀಸರು ಒಪ್ಪುವುದಿಲ್ಲ. ಇದಕ್ಕೂ ಮೊದಲೇ ಹೆಚ್ಚುಕಮ್ಮಿ ಶಿವಲಿಂಗುವಿನೇ ಒಪ್ಪಿಕೊಂಡಿರುತ್ತಾನೆ.

ಉರಿಯುವ ಬೆಂಕಿಗೆ ತುಪ್ಪ ಸುರಿಯುವ ಹಾಗೆ, ಶಾಲೆಯ ಸಹಪಾಠಿಯಾದ ಕೃಷ್ಣ (ಕಿಟ್ಯ) ಶಿವಲಿಂಗುವಿನ ಮೇಲೆ ದೂರು ಹೇಳಲು ಶುರು ಮಾಡಿದ. ಇದನ್ನೆಲ್ಲಾ ಗಮನಿಸಿದ ಫೌಜುದಾರರು ಮತ್ತು ಪೊಲೀಸರು "ಪ್ರತ್ಯಕ್ಷ ಸಾಕ್ಷಿ"ಯೇ ಸಿಕ್ಕನೆಂಬ ಗತ್ತಿನಿಂದ ಹೇಗೆ ಹೇಳುತ್ತೀಯಾ ಶಿವಲಿಂಗುವಿನೇ ಜಾರ್ಜ್‌ನ ಹೆಂಡತಿಯನ್ನು ಗುಂಡಿಟ್ಟು ಕೊಂದಿದ್ದಾನೆ ಎಂದು ಕೇಳಿದಾಗ "ಮಾತು ಮಾತಿಗೂ ನಮ್ಮ ಮನಿಯೊಳಗೆ ಬಂದೂಕ ಐತಿ. ಏನರ ಹೆಚ್ಚು ಕಡಿಮೆ ಯಾರರೇ ಮಾಡಿದ್ರಂದ್ರ ಅವರನ್ನ ಕೊಂದು ಹಾಕ್ತೇನು ಅಂತಿದ್ದಾ" (ಪು.ಸಂ. 45) ಎಂದು ಪುಂಕಾನುಪುಂಕವಾಗಿ ವಿವರಿಸತೊಡಗಿದರು.

ಶಿವಲಿಂಗುವಿಗೆ ಕರಿನೀರು ಶಿಕ್ಷೆ ಮತ್ತು ಜೈಲಿನ ಭೀಕರ ವರ್ಣನೆ

ಶಿವಲಿಂಗುವನ್ನು ಒಂದು ತಿಂಗಳ ಮಟ್ಟಿಗೆ ಬೆಳಗಾವಿಯ ಜೈಲಿಗೆ ಹಾಕಿದ್ದರು. ನಂತರ ಅವನನ್ನು "ಉಸಿರುಗಟ್ಟಿಸುವ ವಾತಾವರಣದಲ್ಲಿ, ಕತ್ತಲೆ ಕೋಣೆಯಲ್ಲಿ ಸಮುದ್ರದ ನಡುಗಡ್ಡೆಯಲ್ಲಿ ಇಡಬೇಕು. ಆ ಶಿಕ್ಷೆಯೇ ಕಾಲಾಪಾನಿ ಶಿಕ್ಷೆ ಕರಿನೀರು ಶಿಕ್ಷೆ" (ಪು.ಸಂ.50) ಇಂತಹ ಶಿಕ್ಷೆಗೆ ಶಿವಲಿಂಗು ಒಳಪಡುತ್ತಾನೆ.

ಪೊಲೀಸರ ಸರ್ಪಗಾವಲಿನಲ್ಲಿ ಕೈದಿಗಳ ಪ್ರಯಾಣ ಆರಂಭವಾಗುತ್ತದೆ. ಇಲ್ಲಿಂದಲೇ ಅವನಿಗೆ ಕರಿನೀರಿನ ದರ್ಶನವಾಗಿ ಮನಸ್ಸಿನಲ್ಲಿ ಸೂತಕದ ಛಾಯೆ ಮತ್ತು ಅನಾಥ ಪ್ರಜ್ಞೆ ಕಾಡಲು ಶುರುವಾಗುತ್ತದೆ. "24ರ ಹರೆಯದ ಶಿವಲಿಂಗು ಯಾವ ಭಾವನೆಗಳೂ ಇಲ್ಲದೆ ಕ್ರೂರ ಕೈದಿಗಳೊಂದಿಗೆ ಹೊರಡಲು ಮಾನಸಿಕ ಸಿದ್ಧತೆ ಮಾಡಿಕೊಂಡ. ಜೈಲಿನವರೇ ಕೊಟ್ಟ ತಟ್ಟೆ, ಲೋಟ ಚೀಲಕ್ಕೆ ಇಳಿಸಿ ಜೈಲಿನ ಉಡುಪು ತೊಟ್ಟು ಪೊಲೀಸ ಕಾವಲಿನಲ್ಲಿ ಕೈದಿಗಳು ಹೊರಡಲನುವಾದರು. (ಪು.ಸಂ. 51)

ನಾಲ್ಕೈದು ದಿನಗಳ ಹಡಗು ಪ್ರಯಾಣ. ಸೂರ್ಯನ ಬೆಳಕು ಕಾಣದೆ ಕೈದಿಗಳು ಇನ್ನಿತರ ಪ್ರಯಾಣಿಕರು ಸುಸ್ತಾಗಿಯೇ ಹೋಗಿದ್ದರು. ಕೈದಿಗಳಿಗೆ ಹೊಟ್ಟೆ ತುಂಬ ಊಟವಿಲ್ಲ. ಕಣ್ತುಂಬ ನಿದ್ದೆಯಿಲ್ಲ. ಮೇಲಾಗಿ ಜೀವಾವಧಿ ಶಿಕ್ಷೆಯ ತಳಮಳ (ಪು.ಸಂ. 51) ಹೆಚ್ಚು ಕಡಿಮೆ ಸಾವಿನ ದವಡೆಯಲ್ಲಿ ಇರುವ ಹಾಗೆ ಭಾಸವಾಗುತ್ತಿತ್ತು. ಆದರೆ ಶಿವಲಿಂಗು ಮುಗ್ಧ ಯುವಕನಾಗಿದ್ದನು. ಅಚಾತುರ್ಯದಿಂದಲೋ ದುಡುಕಿನಿಂದಲೋ ವಿಧಿಯ ಆಟದಿಂದಲೋ ಶಿವಲಿಂಗುವಿನಿಂದ ಸಂಭವಿಸಬಾರದ ಘಟನೆ ನಡೆದುಹೋಗಿತ್ತು. ಇವನ ಜೊತೆಗಿದ್ದ ಸಹಕೈದಿಗಳು ಕ್ರೂರ ದರೋಡೆಕೋರರು, ಖೂನಿಗಾರರು,. ಬ್ರಿಟಿಷರ ವಿರುದ್ಧ ಸಿಡಿದೆದ್ದವರು, ಬಂಡುಕೋರರು ಆಗಿರುತ್ತಾರೆ.

ಅವರ ನಡುವೆ ತನ್ನವರನ್ನು ನೆನೆದು ವಿಚಲಿತನಾದ ಶಿವಲಿಂಗ ಭಯಗೊಂಡ. ನಸುಕು ಹರಿಯುತ್ತಿದ್ದಂತೆಯೇ ಅಂಡಮಾನಿನ ನಡುಗಡ್ಡೆ ಕಾಣಿಸತೊಡಗಿತು. ಬಂಗಾಲ ಉಪಸಾಗರದ ಕಪ್ಪು

ನೀರು ಸುತ್ತೆಲ್ಲ ಆವರಿಸಿಕೊಂಡಿತ್ತು. ಏನೇ ಸಾಹಸ ಮಾಡಿದರೂ ಈ ಕಪ್ಪು ನೀರು ದಾಟಿಕೊಂಡು ಮರಳಿ ತಮ್ಮೂರಿನ ದಂಡೆ ಸೇರಲು ಸಾಧ್ಯವೇ ಇಲ್ಲವೆಂದು ಕೈದಿಗಳ ಮಾತನಾಡತೊಡಗಿದ್ದನ್ನು ಕಂಡು ದುಃಖ ಒತ್ತರಿಸಿಕೊಂಡು ಬಂದಿತು. (ಪು.ಸಂ. 52)

ಕೆಲವೊಮ್ಮೆ ಕಥಾನಾಯಕ ಶಿವಲಿಂಗುವಿಗೆ ತನ್ನವರನ್ನು ನೆನೆದಾಗ ನಾ ಯಾಕಾದರೂ ದುಡುಕಿ ಇಂತಹ ಕೃತ್ಯಕ್ಕೆ ಬಲಿಯಾದೆನೋ ಎಂದುಕೊಂಡರೂ ಮತ್ತೆ ಅವನಲ್ಲಿ ಮತ್ತದೇ ರೋಷ, ದ್ವೇಷಗಳಿಂದ, ಅನಿವಾಸಿ ಭಾರತೀಯರನ್ನು ನೆನೆದು ಕುದಿಯತೊಡಗಿದ. ಏನೇ ಆದರೂ, ತನ್ನ ನೆಲದ ಹೆಣ್ಮಗಳನ್ನು ಅವಮಾನಿಸಿದ ಪ್ರತೀಕಾರಕ್ಕೆ ಬ್ರಿಟಿಷ್ ಅಧಿಕಾರಿ ಜಾರ್ಜ್‌ನನ್ನು ಬಲಿ ತೆಗೆದುಕೊಳ್ಳಬೇಕೆಂಬುದು ಅವನ ಹಂಬಲ. ಅದೇ ಅವನನ್ನು ಸ್ವಾತಂತ್ರ್ಯ ಪ್ರೇಮಿಯನ್ನಾಗಿ ಮಾರ್ಪಡಿಸಿತು. ದೈವೇಚ್ಛೆಯೋ, ದುಡುಕೋ, ವಿಧಿಯಾಟವೋ ಇಂದು 'ಕರಿನೀರು'ನ ಶಿಕ್ಷೆ ಅನುಭವಿಸುವಂತೆ ಮಾಡಿತ್ತು.

ಮಹಿಳಾ ಕೈದಿಗಳಿಗೂ ತನ್ನಂತೆಯೇ ಕಾಲಾಪಾನಿ ಶಿಕ್ಷೆಯಾಗಿರುವುದನ್ನು ಕಂಡು ಶಿವಲಿಂಗು ಆಶ್ಚರ್ಯಪಟ್ಟಿದ್ದ. ಅವರು ಅದೆಂಥಾ ತಪ್ಪು ಮಾಡಿದ್ದರು ಎಂದು ಮನದಲ್ಲಿಯೇ ಲೆಕ್ಕಹಾಕಿದ್ದ.

ಅಂಡಮಾನಿಗೆ ಹೋದ ದಿನಗಳಿಂದಲೇ ಅವರಿಗೆ ಶಿಕ್ಷೆಯ ಕೆಲಸಗಳು ಶುರುವಾಗಿದ್ದವು. ಶಿವಲಿಂಗುವಿಗೆ ಕನ್ನಡ ಭಾಷೆಯನ್ನು ಹೊರತು ಬೇರೆ ಭಾಷೆಗಳ ಅರಿವಿರಲಿಲ್ಲ. ಅವನಿಗೆ ಭಾಷಾ ಸಂವಹನದ ತೊಡಕು ಉಂಟಾಯಿತು. ಜೊತೆಗೆ ಅನುಭವಿಸಲಾರದ, ಸಾಯಲೂ ಆಗದಂತಹ ಇಕ್ಕಳಕ್ಕೆ ಸಿಲುಕಿ, ದಿನವೂ ಪುನರ್ಜನ್ಮವನ್ನು ಪಡೆಯುತ್ತಿದ್ದ. ದಿನದ ಇಪ್ಪತ್ನಾಲ್ಕು ಘಂಟೆಯೂ ಕೈಕಾಲಿನ ಬಿಗಿಯಾದ ಸರಪಳಿಯಲ್ಲಿಯೇ ಕೆಲಸ ಮಾಡುವಂತಹ ಪರಿಸ್ಥಿತಿ ಅವನದಾಗಿತ್ತು. ಕೂರಲು ನಿಲ್ಲಲು, ಮಲಗಲು ಸರಪಳಿಗಳು ಅಡ್ಡಗಟ್ಟುತ್ತಿದ್ದವು. ಈ ಬ್ರಿಟಿಷರು ಕೊಡುತ್ತಿದ್ದ ಶಿಕ್ಷೆಗಳೇ ಈ ಮಟ್ಟದ ಅಂದರೆ ಮನುಷ್ಯ-ಮನುಷ್ಯನ ನಡುವೆ ಮಾನವೀಯ ಸಂಬಂಧಗಳೇ ಮುರಿದುಬಿದ್ದು ಎಂತಹ ಕ್ರೂರಪ್ರಾಣಿಗಳನ್ನು ಇಂತಹ ಹೀನಾಯವಾಗಿ ನಡೆಸಿಕೊಂಡಿದ್ದು, ನಮ್ಮ ಭಾರತೀಯ ಹೆಮ್ಮೆಯ ಪುತ್ರನಾದ ಶಿವಲಿಂಗುವಿಗೆ ಅರ್ಥವಾದದ್ದೇ ಆ ಅಂಡಮಾನಿನಲ್ಲಿ.

ತಾಯಿಯ ಮಡಿಲನ್ನು ಕ್ರೂರಪ್ರಾಣಿಗಳಿಗೆ ಬಿಟ್ಟುಕೊಟ್ಟು, ತಾನು ಹುಲಿಯ ಬೋನಿನೊಳಗೆ ವಾಸಮಾಡುತ್ತಿರುವಂತಹ ನರಕಯಾತನೆ ಅವನಿಗೆದುರಾಗಿತ್ತು. ಕನ್ನಡಿಗರ ನಡೆ, ನುಡಿ ಅನುಕಂಪ, ಪ್ರೀತಿ, ವಾತ್ಸಲ್ಯ ಎಲ್ಲವೂ ಅವನಿಗೆ ಸಂದುಹೋದ ಜೀವನಶೈಲಿಯಂತೆ ಭಾಸವಾಗತೊಡಗಿತು. ಹೇಗಾದರೂ ಇಲ್ಲಿಂದ ಹೊರಹೋಗಿ ತನ್ನವರಿಗೆ, ಬ್ರಿಟಿಷರ ಕಪಿಮುಷ್ಟಿಯಿಂದ ಸ್ವಾತಂತ್ರ್ಯವನ್ನು ಕಸಿದುಕೊಳ್ಳಬೇಕೆಂಬ ಛಲ ಹುಟ್ಟುತ್ತಿತ್ತು. ಜೈಲಿನಲ್ಲಿ ಇರುವ ಸ್ವಾತಂತ್ರ್ಯ ಹೋರಾಟಗಾರರ ಖೈದಿಗಳು, ರಾಜಕೀಯ ಹಿನ್ನಲೆಯಿಂದ ಬಂದಿರುವ ಖೈದಿಗಳಾಡುತ್ತಿದ್ದ ದೇಶಪ್ರೇಮದ ಬಗೆಗಿನ ಮಾತುಗಳೂ ಕೂಡಾ ಅವನನ್ನು ಒಬ್ಬ ಅಪ್ಪಟ

ಸ್ವಾತಂತ್ರ್ಯ ಪ್ರೇಮಿಯನ್ನಾಗಿಸಿದುದು ಸುಳ್ಳಲ್ಲ.

ಈ ಕಾದಂಬರಿಯ ನಾಯಕನಿಗೆ ಸರಪಳಿಗಳ ಬಂಧನದಲ್ಲಿ ಜೈಲಿನ ನಾಲ್ಕು ಗೋಡೆಗಳ ಮಧ್ಯದಲ್ಲಿಯೇ ಸ್ವಾತಂತ್ರ್ಯ ಪಡೆದೇ ತೀರುತ್ತಾನೆ. ಮತ್ತು ಜೀವನದ ಕೊನೆಯವರೆಗೂ ತನ್ನ ಉಸಿರನ್ನು ಸ್ವಾತಂತ್ರ್ಯಕ್ಕಾಗಿಯೇ ಮೀಸಲಿಡುತ್ತೇನೆಂಬ ತಿರುವು ಕಾಣಸಿಗುತ್ತದೆ. ಇದಕ್ಕೆ ಪೂರಕವೆಂಬಂತೆ ಸ್ವಾತಂತ್ರ್ಯ ಹೋರಾಟಗಾರ ಕೈದಿಗಳು ಮಾತುಗಳು ಇವನಿಗೆ ಪ್ರೇರಣೆಯಾಗುವುದನ್ನು ಕಾದಂಬರಿಯ ಕೊನೆಯವರೆಗೂ ಕಾಣಬಹುದಾಗಿದೆ.

ಶಿವಲಿಂಗು ಇತ್ತ 'ಕರಿನೀರು' ಶಿಕ್ಷೆಯನ್ನು ಅನುಭವಿಸಲು, ಅಂಡಮಾನಿಗೆ ಹೋದ ನಂತರ ತಾಯಿ ನೀಲವ್ವ ಗೌಡತಿ, ಮಗನ ಕೊರಗಿನಲ್ಲಿಯೇ ಕೊನೆಯುಸಿರೆಳೆದಿದ್ದರು. ನೀಲಕಂಠ ಹೆಚ್ಚಿನ ಶಿಕ್ಷಣ ಪಡೆಯಲು ಬೆಳಗಾವಿಗೆ ಬಂದು ಮುಂಬೈನಲ್ಲಿ ಕೆಲಸಕ್ಕೆ ಸೇರಿ ಲಗ್ನ ಮಾಡಿಕೊಂಡು ಕುಟುಂಬ ಸಮೇತನಾಗಿ ಅಲ್ಲಿಯೇ ನೆಲೆಯೂರಿದ್ದನು. ಇತ್ತ ತನ್ನ ತಂದೆ, ಹೊಲ, ಮನೆ ನೋಡಿಕೊಳ್ಳುವ ಸಲುವಾಗಿಯೇ ಶಿವಲಿಂಗುವಿನ ತಂಗಿಯಾದ ಶಾಂತ ತವರಿನಲ್ಲಿಯೇ ನೆಲಸಬೇಕಾದ ಸಂದರ್ಭ ಎದುರಾಗಿ ಅಲ್ಲಿಯೇ ಉಳಿದಿರುತ್ತಾಳೆ.

'ಜೀವಾವಧಿ ಶಿಕ್ಷೆಯಾಗಿ ಬಂದಿದ್ದ ಬಂಗಾಲದ ಕ್ರಾಂತಿಕಾರಿ ಅಕ್ಷರಸ್ಥ ಯುವಕ ಗಂಗೋಪಧ್ಯಾಯ, ಮರಾಠಿ ಮಾತನಾಡುವ ಸುಮಂತ ದೇಶಮುಖ, ನೋಡಲು ಗಟ್ಟಿ ಹುರಿಯಾಳುಗಳು, (ಪು.ಸಂ. 62) ಇಂತಹ ಹುಟ್ಟು ಹೋರಾಟಗಾರರಾಗಿದ್ದ ಇವರಿಬ್ಬರಿಗೂ ನೇಣಿಗೆ ಹಾಕುವಂತಹ ದಿನಗಳು, ಕ್ಷಣಗಳು ಬಂದೇಬಿಟ್ಟವು. ಅಂತಹ ಸಂದಿಗ್ಧ ಸಮಯದಲ್ಲೂ ಅವರಲ್ಲಿ ತಮ್ಮ ಸ್ವಾತಂತ್ರ್ಯದ ಒಲವು ಒಂದಿಂಚೂ ಕಡಿಮೆಯಾಗಿರಲಿಲ್ಲ.

ಬ್ರಿಟಿಷ್ ಅಧಿಕಾರಿಯ ದೌರ್ಜನ್ಯಕ್ಕೆ ಸಿಲುಕಿದ ಗಂಗೋಪಧ್ಯಾಯ ಅವರನ್ನು ದಿಟ್ಟವಾಗಿಯೇ ಎದುರಿಸುತ್ತಾನೆ. ಜೀವ ನಾಳೆ ಹೋಗುವುದೇನು, ಇಂದೇ ಹೋಗಲಿ. ಅದಕ್ಕೇಕೆ ಹೆದರಲಿ ನಾನು. ನಿಮ್ಮಂಥದರ ಹೆದರಿಕೆಗೆ ಸೋಲುವವನಲ್ಲ. ನಾವು ನೋಡುತ್ತಿರು ಭವಿಷ್ಯದಲ್ಲಿ ಏನಾಗುತ್ತದೆಯೆಂದು (ಪು.ಸಂ. 64) ಬ್ರಿಟೀಷರಿಂದ ಭಾರತ ಮುಕ್ತವಾಗುವುದೆಂಬ ವಿಶ್ವಾಸ ಅವನ ಮಾತಿನಲ್ಲಿರುತ್ತದೆ. ಭವ್ಯ ಭಾರತದ ಭವಿಷ್ಯವನ್ನು ನುಡಿಯುತ್ತಿದ್ದ. ಕೆಲ ದಿನಗಳ ನಂತರವೇ ಗಂಗೋಪಾಧ್ಯಾಯ ಮತ್ತು ಸುಮಂತರನ್ನೊಳಗೊಂಡಂತೆ ಒಟ್ಟು ಮೂರು ಜನರನ್ನು ಬೆಳಗಿನ ಜಾವ ಬ್ರಿಟೀಷ್ ಅಧಿಕಾರಿಯ ನೇತೃತ್ವದಲ್ಲಿ ನೇಣಿಗೇರಿಸಲಾಗುತ್ತದೆ.

ಇನ್ನು ಕಥಾನಾಯಕನ ತಾತನಾದ ಚೆನ್ನಬಸಪ್ಪಜ್ಜನು ಊರ ಮಂದಿರ ಸ್ವಾತಂತ್ರ್ಯ ಸಮರದಲ್ಲಿ

ಸೆಣಸುತ್ತಿದ್ದ ನಾಯಕರುಗಳ ಬಗೆಗೆ ಮತ್ತು ದೇಶಪ್ರೇಮಿಗಳ ಬಗೆಗೆ ಕತೆಯ ರೀತಿಯಲ್ಲಿ ಹಳ್ಳಿಯ ಮುಗ್ಧ ಜನಗಳಿಗೆ ಹೇಳುತ್ತಿದ್ದುದು ಮತ್ತು ಅದನ್ನು ಆಲಿಸುತ್ತಿದ್ದ ಕುತೂಹಲದಿಂದ ಮುಂದೇನು ಎಂಬಂತೆ ಕೇಳುವ ಜನಗಳಿಗೇನೂ ಕಡಿಮೆಯಿರಲಿಲ್ಲ. ದೂರದರ್ಶನವಿಲ್ಲದ ಆ ಕಾಲದಲ್ಲಿ ಚೆನ್ನಪ್ಪಜ್ಜನಿಗೆ ತಿಳಿದ ಮಾಹಿತಿಯನ್ನು ಊರಿನ ಯುವಕರಿಗೆ ಸ್ವಾತಂತ್ರ್ಯದ ಪರವಾಗಿ ಹುರಿದುಂಬಿಸುವ ರೀತಿಯಲ್ಲಿ ಆಕರ್ಷಕ ಶೈಲಿಯಲ್ಲಿ ಕತೆ ಹೇಳುತ್ತಿದ್ದುದು ಒಂದು ರೋಚಕವಾದ ಪ್ರಸಂಗವಾಗಿದ್ದು ಇದು ಕಾದಂಬರಿಯ ಒಳಹರಿವಿನ ವಿಸ್ತೀರ್ಣತೆಯನ್ನು ಬಿಂಬಿಸುತ್ತದೆ.

ಕಾಲಚಕ್ರ ಉರುಳುತ್ತ ಉರುಳುತ್ತ ಶಿವಲಿಂಗ ಕಾಲಾಪಾನಿ ಶಿಕ್ಷೆಗೆ ಒಳಗಾಗಿ ಬಂದು ಏಳೆಂಟು ವರ್ಷಗಳು ಕಳೆದಿರಬೇಕು. ಶಿಕ್ಷೆಗೊಳಗಾಗಿ ಬಂದವರು ಮನೆ ಮಠ ಕಳೆದುಕೊಂಡು ಭಾವನೆಗಳನ್ನೂ ಸುಟ್ಟುಕೊಂಡು 40–45 ವರ್ಷಗಳ ಹಿಂದಿನಿಂದಲೂ ಬಂದಿರುವ ಕೈದಿಗಳನ್ನು ನೋಡುತ್ತಾ ತನ್ನ ಊರು–ಕೇರಿಗಳನ್ನು ಮರೆತು ಇಲ್ಲಿಯೇ ಶಿಕ್ಷೆಯ ಕೆಲಸಗಳಲ್ಲಿ ತೊಡಗಿಸಿಕೊಂಡು ಜೀವನ ಕಳೆಯುತ್ತಿರುವ ಅವರುಗಳ ಬಗೆಗೆ ಅನುಕಂಪವಿಟ್ಟುಕೊಳ್ಳುತ್ತಾ ತನ್ನ ಹಣೆಬರಹಕ್ಕೆ ತಾನೇ ಒಮ್ಮೊಮ್ಮೆ ಹೆಮ್ಮೆ ಪಟ್ಟುಕೊಂಡು ಹೇಗೋ ಸಮಯ ಕಳೆಯುತ್ತಿದ್ದ (ಪು.ಸಂ. 86)

ಹೀಗೆ ಕಾಲಚಕ್ರ ಉರುಳಿದಂತೆ ಅಂಡಮಾನಿಗೆ ಬರುವ ಕೈದಿಗಳ ಸಂಖ್ಯೆ ದಿನೇ ದಿನೇ ಹೆಚ್ಚಾಗತೊಡಗಿತು. ಅವರೆಲ್ಲರೂ ಕ್ರಾಂತಿಕಾರಿಗಳೇ ಆಗಿದ್ದರು ಎನ್ನುವುದಕ್ಕೆ ಅವರ ನಿಲುವುಗಳು, ಧ್ಯೇಯಗಳು ಮತ್ತು ಕೈದಿ ಗೆಳೆಯನಾದ 'ದೋಂಡಿಬಾ' ಹೇಳುತ್ತಿದ್ದ ಅವರ ಬಗೆಗಿನ ಮಾಹಿತಿಗಳಿಂದ ತಿಳಿಯುತ್ತಿತ್ತು.

'ನಾಯಕ ದಾಮೋದರ ಸಾವರಕರ್' ಲಂಡನ್‌ಗೆ ಹೋಗಿ (ಬಿಳಿಯರ ದೇಶಕ್ಕೆ) ಬ್ಯಾರಿಸ್ಟರ್ ಪದವಿ (ವಕೀಲಿ) ಪಡೆದುಕೊಂಡು ಭಾರತಕ್ಕೆ ಬಂದು ಸ್ವಾತಂತ್ರ್ಯ ಹೋರಾಟಗಳಲ್ಲಿ ಭಾಗವಹಿಸಿ ನಂತರ ಬ್ರಿಟೀಷರ ಕೈಗೆ ಸೆರೆ ಸಿಕ್ಕಿ ಕಾಲಾಪಾನಿ ಶಿಕ್ಷೆಗೆ ಗುರಿಯಾದಂತಹ ಮಹಾನ್ ವ್ಯಕ್ತಿಯಾಗಿದ್ದರು.

ಉಳಿದ ಕೈದಿಗಳಂತೆಯೇ ಸಾವರ್‌ಕರನಿಗೂ ಶಿಕ್ಷೆ. ಕೈಕಾಲುಗಳಿಗೆ ಸರಪಳಿ ಬಿಗಿದಿರುತ್ತಿತ್ತು. ಸರಪಳಿಯ ಬಿಗಿತದಲ್ಲೇ ಎಲ್ಲ ಕೆಲಸಗಳನ್ನೂ ಮಾಡಬೇಕಿತ್ತು. ಈ ವ್ಯಕ್ತಿಯ ಬಗೆಗೆ ಕಥಾನಾಯಕನಿಗೆ ಎಲ್ಲಿಲ್ಲದ ಒಲವು, ಗೌರವ ಮೂಡುತ್ತಿತ್ತು. ಕಾರಣ ಆ ಯುವಕನಲ್ಲಿರುವ ದೇಶಪ್ರೇಮ.

ಅಂಡಮಾನ್ ಜೈಲಿನ ಕೈದಿಗಳಿಗೆ ವೀರಸಾವರ್‌ಕರ್ ಸಮಯ ಸಂದರ್ಭ ಸಿಕ್ಕಾಗಲೆಲ್ಲ ದೇಶದ ಇತಿಹಾಸ ದೇಶದ ಮೇಲಾದ ನಿರಂತರ ದಬ್ಬಾಳಿಕೆಗಳು, ಧರ್ಮ, ಸಂಸ್ಕೃತಿಗಳ ಬಗೆಗೆ ಅಭಿಯಾನ, ದೇಶಭಕ್ತಿ ಪ್ರಾರ್ಥನೆ ಮುಂತಾದವುಗಳ ಬಗ್ಗೆ ತಿಳಿಸಿ ಹೇಳುತ್ತಿದ್ದ ಮತ್ತು 'ಸಿಪಾಯಿ ದಂಗೆ' (1857)ಯ ಬಗ್ಗೆ ವಿವರಣೆಯನ್ನು ನೀಡುತ್ತಿದ್ದ.

ಜೈಲಿಗೆ ಬಂದಾಗಿನಿಂದ ಕೈದಿಗಳ ಸುಧಾರಣೆಗಾಗಿ ಸಾವರ್‌ಕರ್‌ರವರು ಸರ್ಕಾರಕ್ಕೆ ಮೇಲಿಂದ ಮೇಲೆ ಬೇಡಿಕೆ ಇಟ್ಟಾಗ ಕೆಲವೊಂದು ಸುಧಾರಣೆಗಳಾಗಿರುತ್ತವೆ. ಸುಮಾರು ವರ್ಷಗಳಿಂದ ಸರಪಳಿಗಳ ಬಂಧನದಲ್ಲಿದ್ದವರು ಮುಕ್ತವಾಗಿ, ಕಾಡುಗಳನ್ನು ಸವರಿ ಹಣ್ಣು, ತರಕಾರಿಗಳನ್ನು ಬೆಳೆಯುತ್ತಾ ತೋಟಗಳನ್ನು ವಿಸ್ತರಣೆ ಮಾಡುವ ಕೆಲಸ ಕೈದಿಗಳಿಗೆ ಖಾಯಂ ಆಗಿತ್ತು.

ಕರಿನೀರಿನ ಅಂಡಮಾನಿನಿಂದ ಯಾರೂ ಪಾರಾಗದಂತೆ ಸುತ್ತೆಲ್ಲ ಸಮುದ್ರದ ಕಾವಲು, ಹಾಗೆಯೇ ದ್ವೀಪದ ಒಳಗಡೆ ನುಸುಳಿ ತಪ್ಪಿಸಿಕೊಳ್ಳದಂತೆ ದಟ್ಟಣೆಯ ಕಾಡುಗಳು ಎಲ್ಲವೂ ಉಸಿರುಗಟ್ಟಿಸುವ ವಾತಾವರಣ. ಮಾತನಾಡುವುದಕ್ಕೂ ಬಿಗಿ ಭದ್ರತೆಯಿರುವ ಪೋಲೀಸರ ಸರ್ಪಗಾವಲಿನಲ್ಲಿ ಕಾಡನ್ನು ಸವರಿ ವ್ಯವಸಾಯಕ್ಕೆ ಅಗತ್ಯಕರವಾದ ಭೂಮಿಯನ್ನು ಸಿದ್ಧಪಡಿಸುವ ಕಷ್ಟಕರವಾದ ಕೆಲಸ ಮಾಡಬೇಕಾಗಿತ್ತು.

ಇಂತಹ ಸಮಯದಲ್ಲಿ 'ನಾರಾಯಣ ಮತ್ತು ಬಲರಾಮ' ಎಂದ ಕೈದಿಗಳ ನಾಪತ್ತೆ. ಅವರು ಅಲ್ಲಿಂದ ಪರಾರಿಯಾಗಲು ಯತ್ನಿಸಿ, ಕಾಡು ಜನಗಳ ವಿಷದ ಬಾಣ(ಮುಳ್ಳು)ಗಳಿಗೆ ಒಳಗಾಗಿ ನೋವು ಪಡೆಯಲಾರದೇ ಅಲ್ಲೇ ಸತ್ತು ಬಿದ್ದುದು ಅಂಡಮಾನಿನಲ್ಲಿ ಬ್ರಿಟೀಷರು ಕೊಡುವ ನರಕಸಮಾನ ಯಾತನೆಯನ್ನು ಶಿವಲಿಂಗು ಕಣ್ಣಾರೆ ಕಂಡಿದ್ದ. ಒಟ್ಟಿನಲ್ಲಿ ಕಾಲಾಪಾನಿ ಶಿಕ್ಷೆ ಕಣ್ಮುಂದಿನ ನರಕವೇ ಆಗಿಹೋಗಿತ್ತು.

ನಾಯಕನಿಗೆ ತನ್ನ ಸನ್ನಡತೆಯ ಆಧಾರದ ಮೇಲೆ ಬಿಡುಗಡೆಯ ಬಾಗಿಲು ತೆರೆಯುತ್ತದೆ. ಘೋಷಣೆ ಆಗುತ್ತಿದ್ದಂತೆಯೇ ಅವನಿಗಾದ ಖುಷಿಗೆ ಪಾರವೇ ಇರಲಿಲ್ಲ. ಹಡಗನ್ನೇರಿ ಕುಳಿತು, ಅಲ್ಲಿಂದ ರೈಲಿನಿಂದ ಪ್ರಯಾಣವನ್ನು ಸಹಕೈದಿ ಲಕ್ಷ್ಮಣನನ್ನು ಅವನ ಊರಿಗೆ ಬಿಟ್ಟು, ಮುಂಬೈನಲ್ಲಿ ಕೆಲವು ದಿನಗಳನ್ನು ಕಳೆದು, ಸ್ವಲ್ಪ ಹಣ ಸಂಪಾದಿಸಿ ಒಂದು ಸುಂದರವಾದ ಕುದುರೆಯನ್ನು ಖರೀದಿಸಿ ತನ್ನೂರಿನ ಕಡೆ ಮುಖ ಮಾಡಿದ.

ಅಂಡಮಾನಿನ ಕಾಲಾಪಾನಿ ಶಿಕ್ಷೆಯನ್ನು ಮುಗಿಸಿ ಸುಮಾರು 20 ವರುಷಗಳ ನಂತರ ತನ್ನೂರಿಗೆ ಆಗಮಿಸಿದ ಶಿವಲಿಂಗುವಿಗೆ ಆದ ಖುಷಿ ಅಷ್ಟಿಷ್ಟಲ್ಲ. ಅವನಿಗೆ ಮಾತ್ರವಲ್ಲದೇ ತನ್ನೂರಿನ ಜನತೆ, ತನ್ನ ರಕ್ತಸಂಬಂಧಿಗಳು ಕೂಡಾ ಶಿವಲಿಂಗುಗೆ ಪುನರ್ಜನ್ಮ ದೊರಕಿದಷ್ಟೇ ಸಂತಸ ವ್ಯಕ್ತಪಡಿಸುತ್ತಾರೆ.

ಒಟ್ಟಿನಲ್ಲಿ ಕಥಾನಾಯಕನ ತನ್ನ ಜೀವನದ ಮೊದಲ ಭಾಗ ಮುಗಿದು, ಎರಡನೇ ಭಾಗಕ್ಕೆ ಪ್ರವೇಶಿಸಿದನೆಂದೇ ಹೇಳಬಹುದು. ತನ್ನ ಜೀವಿತದ ಅರ್ಧ ಭಾಗವನ್ನು ಸೇಡು, ದುಡುಕು, ಶಿಕ್ಷೆಗೆ ಮೀಸಲಿರಿಸಿದ್ದ. ಅದು ಮುಗಿದು ಜೀವನದಲ್ಲಿ ಹೊಸ ಅಧ್ಯಾಯ ಆರಂಭವಾಗುತ್ತಿದೆ. ಮಹಾದೇವಪುರದ ಜನರು ಹೆಚ್ಚು ಕಡಿಮೆ ಅವನನ್ನು ಮರೆತೇ ಬಿಟ್ಟಿದ್ದರು. ಹಾಗೂ ಅವನನ್ನು ಗಲ್ಲಿಗೇರಿಸಿಬಿಟ್ಟಿದ್ದಾರೆ

ಎಂದು ತಿಳಿದುಕೊಂಡಿದ್ದರು. ಸುಮಾರು 20 ವರುಷಗಳಿಂದ ಎಲ್ಲವನ್ನೂ ಎಲ್ಲರನ್ನೂ ತೊರೆದು ಊಹಿಸಲೂ ಸಾಧ್ಯವಾಗದಷ್ಟು ದೂರಕ್ಕೆ ಹೋಗಿದ್ದನು.

ಶಿವಲಿಂಗುವಿಗೆ ಕರಿನೀರು ಶಿಕ್ಷೆಯಿಂದ ಬಿಡುಗಡೆ ಹಾಗೂ ಬೆಳಗಾವಿಗೆ ಹಿಂತಿರುಗುವಿಕೆ

ಊರಿನ ಜನ ಮತ್ತು ನಾಯಕನ ಗೆಳೆಯರು ಶಿವಲಿಂಗುವನ್ನು ನೋಡಲು ಮತ್ತು ಅಲ್ಲಿ ನಡೆದ ಘಟನೆಗಳನ್ನು ವಿವರವಾಗಿ ತಿಳಿದುಕೊಳ್ಳುವ ಉತ್ಸಾಹ ಮತ್ತು ಕುತೂಹಲದಿಂದ ಮುಗಿಬೀಳುತ್ತಿದ್ದರು. ಆಗ ಕಥಾನಾಯಕನು ಹೌದು ಈ ವಯಸ್ಸಿನ್ಯಾಗ ನಾನು ಇಷ್ಟು ಜೀವಂತ ಉಳಿದುಕೊಳ್ಳಾಕ ಕಾರಣರಾದವ್ರು ಜೇಲಿನಾಗಿದ್ದ ದೊಡ್ಡ ದೊಡ್ಡ ರಾಷ್ಟ್ರಭಕ್ತಿ ಮಂದಿ. ಅವರ ನಡುವೆ ಇದ್ದದಕನ ಅಂತ ತಿಳಿದುಕೊಳ್ರಿ' ಎನ್ನುತ್ತ ಅಲ್ಲಿಯ ರಾಷ್ಟ್ರಪ್ರೇಮಿಗಳ ಕೆಚ್ಚು ಕಿಚ್ಚು ಹೇಳುತ್ತಾ ಕೇಳುಗರಲ್ಲಿ ಸಂಚಾರ ಮೂಡಿಸುತ್ತಿದ್ದ.

'ಹೌದಪ್ಪ ಶಿವಲಿಂಗು ದೇಶ ದೇಶಭಕ್ತಿ ಅಂತ ನಿನ್ನ ಕಣ್ಣಾಗ ಹೊಳಪ ಎದ್ದು ಕಾಣ್ತತಿ ನೋಡು' (ಪು.ಸಂ. 129) ಎಂದು ಜನ ಚರ್ಚಿಸುತ್ತಿದ್ದರು.

ನಂತರದಲ್ಲಿ ಶಿವಲಿಂಗು ಮನೆಯವರ ಒತ್ತಾಯದ ಮೇರೆಗೆ ಮತ್ತು ಮಾಸ್ತರರ ಮಗಳಾದ ಶಾರದಕ್ಕನ ಒತ್ತಾಯಕ್ಕೆ ಮಣಿದ ಶಿವಲಿಂಗು ಇಂಗ್ಲೀಷ್ ಅಧಿಕಾರಿಗಳ ವಿರುದ್ಧ ಹೋರಾಡಿ, ಅವರ ದೌರ್ಜನ್ಯ ಮತ್ತು ಕಿರುಕುಳಕ್ಕೆ ಬೇಸತ್ತು ಆತ್ಮಹತ್ಯೆ ಮಾಡಿಕೊಂಡ ದಿಟ್ಟೆ, ಮಹಿಳೆ ಚಿನ್ನಕ್ಕಳ ಮಗಳಾದ ಕಲಾವತಿಯನ್ನು ಮದುವೆ ಮಾಡಿಕೊಳ್ಳಬೇಕಾದ ಅನಿವಾರ್ಯತೆ ಎದುರಾದಾಗ ಶಿವಲಿಂಗು ಸೋತು, ಗೃಹಸ್ಥಾಶ್ರಮಕ್ಕೆ ಕಾಲಿಡುತ್ತಾನೆ.

ಶಿವಲಿಂಗುವನ್ನೇ ಮದುವೆಯಾಗುವುದಾಗಿ ಹಠ ಹಿಡಿದ ಕಲಾವತಿಯು ತನ್ನ ತಾಯಿಯಂತೆಯೇ ಸ್ವಲ್ಪಮಟ್ಟಿನ ಹಠಮಾರಿ ಹುಡುಗಿಯಾಗಿದ್ದಳು. ನಾಯಕನಿಗೆ ಅವಳ ಮೇಲೆ ಪ್ರೇಮ, ಪ್ರಣಯ ಬಿಂಬಿಸುವ ಭಾವನೆಗಳು ಇರದೇ ಇದ್ದರೂ ಅವಳ ಮುಗ್ಧ ಮತ್ತು ರಾಷ್ಟ್ರಪ್ರೇಮವನ್ನೇ ಜೀವಾಳವಾಗಿರಿಸಿಕೊಂಡಿದ್ದ ಮದುವೆಗೆ ತಂದೆ, ಚಿಕ್ಕಮ್ಮ (ಮಲತಾಯಿ), ಅಜ್ಜಿ, ಸೋದರ ಮಾವಂದಿರ ವಿರೋಧದ ನಡುವೆಯೇ 'ಶಿವಲಿಂಗು'ವನ್ನೇ ವರಿಸುತ್ತಾಳೆ.

ಶಿವಲಿಂಗು ಊರಿನವರಿಗೆಲ್ಲ ಒಂದು ದಂತಕಥೆಯಾಗಿ ಹೋಗಿರುತ್ತಾನೆ. ಅವನ ಬಾಲ್ಯ, ಶಾಲೆ, ಆಟ, ಪಾಠ ಎಲ್ಲರೊಂದಿಗೆ ಗಳಿಸಿಕೊಂಡ ಪ್ರೀತಿ, ಸ್ವಭಾವ, ಸಿಟ್ಟು, ಬಿಳಿಯರನ್ನೇ ಕೊಲ್ಲುವ ಧೈರ್ಯ ಸಾವಿಗೆ ಹೆದರದೆ ತನಗಾಗಿಯೇ ನಡೆದುಹೋಗಿ ಜೈಲಿಗೆ ಸೇರಿದ ಎದೆಗಾರಿಕೆ. ಕೊನೆಗೆ ಕರಿನೀರಿಗೆ ಕಳಿವೆ ಅಲ್ಲಿ ಗಲ್ಲಿಗೇರಿಸಿರಬೇಕೆನ್ನುವ ಬಗೆಗಿನ ಮಾತುಗಳಿಂದ ಅವನೊಬ್ಬ ಧೀರನಾಯಕನಾಗಿಯೋ ದುರಂತನಾಯಕನಾಗಿಯೋ ಎಲ್ಲರ ಮನದೊಳಗೆ ತುಂಬಿಕೊಂಡಿದ್ದ (ಪು.ಸಂ. 142)

ಸಂಸಾರದ ನೌಕೆಯನ್ನು ಏರಿದ ಶಿವಲಿಂಗುವಿನದು ತುಂಬುಕುಟುಂಬ. ಶಿವಲಿಂಗುವಿನ ಹೆಂಡತಿ, ಮಕ್ಕಳು, ತಂದೆ, ತಂಗಿ ಇರುವಂತಹ ದೊಡ್ಡ ಮನೆ, ಮನೆಯ ನಾಯಕನ ಇತಿಹಾಸವನ್ನು ಹೇಳುತ್ತಿತ್ತು. ಇಲ್ಲಿ ಮಾಸ್ತರರ ಮಗಳಾದ ಶಾರದಕ್ಕ ಮತ್ತು ಕಲಾವತಿ ಇವರಿಬ್ಬರಿಗೂ ತಮ್ಮ ನೆಲದ, ಜಲ, ಸ್ವಾತಂತ್ರ್ಯದ ಹೋರಾಟ, ನಾಯಕರ ಭಾಷಣ ಇವುಗಳೆಲ್ಲದರ ಮೇಲೆ ಎಲ್ಲಿಲ್ಲದ ಅಭಿಮಾನ. ಎಲ್ಲ ಹೆಣ್ಣು ಮಕ್ಕಳಂತೆ ಗಂಡ, ಸಂಸಾರ, ಮಕ್ಕಳು, ಅಡುಗೆ, ಕೆಲಸ, ಇಷ್ಟರಲ್ಲೇ ಮುಗಿಯುತ್ತಿರಲಿಲ್ಲ. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಬೇಕು, ನಾಯಕರ ಭಾಷಣಗಳನ್ನು ಕೇಳಿ ಪ್ರಸ್ತುತ ವಿದ್ಯಮಾನಗಳನ್ನು ಚರ್ಚಿಸುವುದು. ಇದರ ಜೊತೆಗೆ ಜೀವನಕ್ಕೆ ನೆರವಾಗುವ ಮತ್ತು ಬೇಸರವನ್ನು ನೀಗುವ ಹೊಲಿಗೆ, ಹೆಣಿಗೆ, ನೂಲುವುದನ್ನು ಹವ್ಯಾಸವನ್ನಾಗಿಸಿಕೊಂಡಿದ್ದರು.

ಇವರಿಬ್ಬರ ಭಾವನೆಗಳು, ಆಸೆಗಳು ಮತ್ತು ಆಕಾಂಕ್ಷೆಗಳು ಹೆಚ್ಚುಕಡಿಮೆ ಒಂದೇ ತೆರನಾದುದೆಂದೇ ಹೇಳಬಹುದು, ವಯಸ್ಸಿನಲ್ಲಿ ಅಂತರವಿತ್ತು. ಜಾತಿಯಲ್ಲಿ ಅಂತರವಿತ್ತು. ಆದರೆ ಹವ್ಯಾಸ ಮತ್ತು ಅಭಿರುಚಿಯಲ್ಲಿ ಸಮಾನವಾದ ಮನಸ್ಸಿತ್ತು ಎಂದೇ ಹೇಳಬಹುದು. ಮಾನವೀಯ ಮೌಲ್ಯಗಳನ್ನು ತುಂಬಿಕೊಂಡ ಕಣಜಗಳಾಗಿದ್ದವು ಅವರ ಹೃದಯಗಳು.

ಬೆಳಗಾವಿಯಲ್ಲಿ ಗಾಂಧೀಜಿಯವರಿಂದ ಭಾಷಣ

ಬೆಳಗಾವಿಗೆ ಬಂದು ಭಾಷಣ ಮಾಡುವ ಗಾಂಧಿಯವರನ್ನು ಹತ್ತಿರದಿಂದಲೇ ನೋಡಬೇಕು. ಅವರ ಭಾಷಣದಿಂದ ಪ್ರೇರಿತಗೊಂಡ ಲಕ್ಷಾಂತರ ಸ್ವಾತಂತ್ರ್ಯ ಹೋರಾಟಗಾರರನ್ನು ಕಣ್ತುಂಬಿಕೊಳ್ಳಬೇಕೆಂದು ಹಂಬಲಿಸುತ್ತಿದ್ದರು. ತಮ್ಮ ಇಚ್ಛೆಯಂತೆಯೇ ಗಾಂಧೀಜಿಯವರ ಭಾಷಣವನ್ನು ಕೇಳುವ ದಿನ ಬಂದೇ ಬಿಟ್ಟಿತು.

"ಬೆಳಗಾವಿ ಅಧಿವೇಶನದಲ್ಲಿ ಗಾಂಧಿಜೀಯವರು ವಿದೇಶಿ ವಸ್ತುಗಳ ಬಹಿಷ್ಕಾರ, ಅಸ್ಪೃಶ್ಯತಾ ನಿವಾರಣೆ, ಖಾದಿ ಪ್ರಚಾರ, ಗ್ರಾಮೋದ್ಯೋಗ, ಅಹಿಂಸೆ, ಸ್ವಾವಲಂಬೀ ಬದುಕು, ಅಸಹಕಾರ ಚಳುವಳಿಗಳು ಮುಂತಾದ ವಿಷಯಗಳಲ್ಲಿ ಸಮರ್ಪಕವಾಗಿ ಎಲ್ಲರಿಗೂ ತಿಳಿಯುವಂತೆ ಭಾಷಣ ಮಾಡುತ್ತಿದ್ದರು. ಸತ್ಯಾಗ್ರಹ ಪ್ರತಿಯೊಬ್ಬ ಭಾರತೀಯ ಜನ್ಮಸಿದ್ಧ ಹಕ್ಕೆಂದು ಸಾರುತ್ತಿದ್ದರು" (ಪು.ಸಂ. 184)

ಇಂತಹ ಅದ್ಭುತವಾದ ಕ್ಷಣಗಳನ್ನು ಕಣ್ತುಂಬಿಕೊಳ್ಳಲು ಹಳ್ಳಿ ಹಳ್ಳಿಗಳಿಂದ ರೈತರು, ಮಹಿಳೆಯರು, ಯುವತಿಯರು, ತುಂಬು ಉತ್ಸಾಹದಿಂದ ಎತ್ತಿನಗಾಡಿಗಳಲ್ಲಿ ಬಂದಿದ್ದರು. ಜೊತೆಗೆ ಗಾಂಧೀಜಿಯವರು ಸಂಗ್ರಹಿಸುತ್ತಿದ್ದ ನಿಧಿಗಾಗಿ ತಮ್ಮಲ್ಲಿದ್ದ ಹಣ, ಮತ್ತು ಒಡವೆಗಳನ್ನು ನೀಡುತ್ತಿದ್ದರು. ಆದರೆ ಶಿವಲಿಂಗುವಿನ ಹಣ, ಒಡವೆಗಳೆರಡೂ ಇಲ್ಲದಿರುವ ಕಾರಣದಿಂದ ರಾಷ್ಟ್ರೀಯ ಚಳುವಳಿಗೆ ತನ್ನನ್ನು ತಾನು

ತೊಡಗಿಸಿಕೊಳ್ಳುವುದರ ಮೂಲಕ ಕಾಣಿಕೆಯನ್ನು ನೀಡಿದರಾಯಿತು ಎಂದು ಸಮಾಧಾನಿಸಿಕೊಳ್ಳುತ್ತಿರುವಾಗ ಕಲಾವತಿ ಮತ್ತು ಶಾರದಕ್ಕ ತಮ್ಮ ಮೈಮೇಲಿನ ಒಡವೆಗಳನ್ನು ಯಾರ ಅನುಮತಿಯನ್ನು ಕೇಳದೆ ನಿಧಿಗೆ ಅರ್ಪಿಸಿದುದನ್ನು ನೋಡಿ, ಅವರ ಧೈರ್ಯ, ದೇಶಭಕ್ತಿಗೆ ಬೆರಗಾಗಿ ನಿಂತುಬಿಟ್ಟ.

ಇಲ್ಲಿ ಕಲಾವತಿಯು ತನ್ನ ತಾಯಿಯಂತೆ ಎಲ್ಲ ಸದ್ಗುಣಗಳನ್ನು ಮತ್ತು ಹೋರಾಟದ ಕಿಚ್ಚನ್ನು ಹುಟ್ಟುತ್ತಲೇ ಮೈಗೂಡಿಸಿಕೊಂಡಿರುವ ಒಬ್ಬ ಸುಸಂಸ್ಕೃತ ಹೆಣ್ಣು ಮಗಳಾಗಿದ್ದಳು.

ದೇಶಪ್ರೇಮ, ದೇಶಸೇವೆ, ಸ್ವಾತಂತ್ರ್ಯ ಹೋರಾಟಗಳಲ್ಲಿ ನಿರಂತರವಾಗಿ ಭಾಗಿಯಾಗುವ ಮೂಲಕ, ಬ್ರಿಟಿಷರನ್ನು ಓಡಿಸಲು ಮತ್ತು ಬಂಧನದಿಂದ ಮುಕ್ತವಾಗಲು ಹವಣಿಸುತ್ತಿದ್ದ ಕೋಟಿ ಹೃದಯಗಳ ಮಧ್ಯೆ, ಸೊದ್ಯಾ (ಸೊದೆಪ್ಪ)ನಂತಹ ಕೆಟ್ಟ ಕ್ರಿಮಿಗಳು, ಬ್ರಿಟಿಷರಿಗೆ ಸಹಾಯ ಮಾಡುತ್ತ ಸ್ವಾತಂತ್ರ್ಯ ಹೋರಾಟಗಾರರ ತಂತ್ರಗಳು, ರಹಸ್ಯಗಳನ್ನು ತಿಳಿಸುತ್ತಾ, ದಲಿತ ಕೇರಿಯವರನ್ನು ಮತಾಂತರಕ್ಕೆ ಆಹ್ವಾನಿಸುತ್ತಾ ಒಬ್ಬರಿಗೊಬ್ಬರನ್ನು ಕಂಡರೆ ಆಗದಂತೆ ಎತ್ತಿಕಟ್ಟುತ್ತ ಪುಂಡಾಟಿಕೆಯಿಂದ ಠೀವಿಯಿಂದ ತಿರುಗುತ್ತಿದ್ದ.

ಮಳೆಯಿಲ್ಲದೆಯೇ ಮಹದೇವಪುರವನ್ನೊಳಗೊಂಡಂತೆ ಎಲ್ಲೆಲ್ಲೂ ಬರಗಾಲದ ಭೀಕರತೆ ಆವರಿಸಿಕೊಳ್ಳತೊಡಗಿತ್ತು. ಬಾವಿಯ ನೀರು ಆಳಕ್ಕಿಳಿದು ಕೆರೆಗಳು ಬತ್ತಿದ್ದವು. ಜನರು ನೀರು, ಬೆಳೆಯಿಲ್ಲದೆ ಕಂಗಾಲಾಗತೊಡಗಿದರು. ಬಡವರು, ಕೂಲಿಗೆಲಸದವರ ಹೊಟ್ಟೆಗೆ ನುಚ್ಚು, ನೀರು ಮಜ್ಜಿಗೆ ಕೂಡಾ ಸಿಗದೆ ಕಂಗಾಲಾದರು (ಪು.ಸಂ. 207)

ಸಕಾಲಕ್ಕೆ ಮಳೆಯಾಗದೇ ಇದ್ದುದರಿಂದ ಎಲ್ಲೆಲ್ಲೂ ಭೀಕರ ಬರಗಾಲ ಆವರಿಸಿದಾಗ, ಶಿವಲಿಂಗುವಿನ ಮನೆಯಲ್ಲಿ ಇದ್ದಂತಹ ಹಣೆಗಳಿಂದ ಜೋಳ ಮತ್ತು ಇತರೆ ಧಾನ್ಯಗಳನ್ನು ಊರ ಜನರಿಗೆ ನೀಡತೊಡಗಿದರು. ಕಲಾವತಿ ಕೂಡ ಯಾವ ಚಕಾರವನ್ನು ಎತ್ತದೇ ತುಂಬಿದ ಮನಸ್ಸಿನಿಂದಲೇ ಧಾನ್ಯಗಳನ್ನು ದಾನ ಮಾಡತೊಡಗಿದರು.

ಇಡೀ ವರ್ಷ ತಮ್ಮ ಹೊಲ ಮನೆಗಳ ಕೆಲಸ ಕಾರ್ಯಗಳಲ್ಲಿ ಹಬ್ಬ ಹರಿದಿನಗಳಲ್ಲಿ ಸಹಕರಿಸಿದ ಬಳಗಾರ ಬಸಮ್ಮ, ನಿಂಗಮ್ಮ, ಅಗಸರ ಚೆನ್ನ, ಗಾಣಿಗೇರ ಈರಣ್ಣ, ಬಸವಣ್ಣನ ಗುಡಿ, ಮಹಾದೇವನ ಗುಡಿಯ ಪೂಜಾರಿಗಳು, ಮನೆಯ ಅಂಗಳದಲ್ಲೇ ಕುಳಿತು ತನ್ನ ಹಂಟರ್ ಬಿಲ್ಲಿನಿಂದ ಠೇಂವ್ ಠೇಂವ್ ಎಂದು ಹೊಸ ಹತ್ತಿ ಹಿಂಜಿ ಹೊಡೆದು ಗಾದಿ ದಿಂಬು ಲೋಡುಗಳು ಮಾಡಿಕೊಡುವ ಪಿಂಜಾರ್ ಬುಡ್ಡಾಸಾಹೇಬ್ ಮತ್ತು ಇಸ್ಮಾಯಿಲ್, ಹೊಲದ ಕೆಲಸಕ್ಕೆ ಬೇಕಾಗುವ ಕುಡುಗೋಲು, ಕುರುಪಿ, ರೆಂಟೆ, ಕುಂಡೆಗಳೇ ಹೊಡೆಯುವ ಸಾಮಾನುಗಳನ್ನು ಕಾಯ್ದು ಕುಲುಮೆಯಿಂದ ತೆಗೆದು ಠಣ್ ಠಣ್ ಹೊಡೆದು ಹೊಸತನ್ನಾಗಿ, ಹರಿತವಾಗಿ ಮಾಡಿಕೊಡುವ ಕಮ್ಮಾರ ಲಕ್ಷ್ಮಣ. ಬಡಿಗೇರ ಗಣೇಶಣ್ಣ,

ಹಿತ್ತಲಿನ ಅಂಗಳದಲ್ಲಿ ಕುಳಿತು ಮನೆಯ ನಾಲ್ಕಾರು ಜನ ಗಂಡಸರ ತಲೆ ಕೂದಲು ಹಜಾಮತಿ ಮಾಡುವ ಅಪ್ಪಾ, ಮನೆಮಂದಿಗೆಲ್ಲ ಬಟ್ಟೆ ಹೊಲಿಯುವ ದುಂಡಪ್ಪ, ಮಳೆ ಬೆಳೆಗಳ ಬಗೆಗೆ, ನಾಡು ದೇಶದ ಬಗೆಗೆ, ಭವಿಷ್ಯ ಹೇಳುವವರ ಹಾಗೆ ನಸುಕಿನಲ್ಲಿ, ಜನ ಕಣ್ಣು ಬಿಡುವುದಕ್ಕೆ ಮೊದಲೇ ತನ್ನ ಕೈಲ್ಲಿಯ ಢಮರನ್ನು ಗುಡು-ಗುಡುಕ್ ಎಂದು ಗುಡಿಗುಳಿಸುತ್ತಾ ಹೋಗಿ ಬಿಡುವ ಬುಡುಬುಡುಕಿ ರಾಮಣ್ಣ (ಪು.ಸಂ. 210) ಇವರಿಗೆಲ್ಲ ಮನೆಯ ಉಗ್ರಾಣ ಮತ್ತು ಹಗೆಗಳನ್ನು ಅಗೆದು, ಮೊಗೆದು ಮೊಗೆದು ಕೊಟ್ಟು ಬರಗಾಲವನ್ನು ಸ್ವಲ್ಪ ಮಟ್ಟಿಗೆ ಹತ್ತಿಕ್ಕಲು ಪ್ರಯತ್ನಿಸಿದರು. ಇದು ಶಿವಲಿಂಗುವಿನ ತಂದೆಯಾದ ರುದ್ರಪ್ಪಗೌಡನ ಉದಾರತೆಗೆ ಹಿಡಿದ ಕನ್ನಡಿಯೆನ್ನಬಹುದು. ನಂತರ ಅವರ ಸಾವಾಗಿ ಊರಿಗೆ ಊರು ಕಣ್ಣೀರು ಹಾಕುತ್ತದೆ.

ಮತ್ತೆ ದೇಶದ ತುಂಬೆಲ್ಲಾ ಸ್ವಾತಂತ್ರ್ಯದ ಕಿಚ್ಚು, ಕೆಚ್ಚು, ತೀವ್ರಗೊಳ್ಳಲು ಶುರುವಾಗುತ್ತದೆ. 'ಅಸಹಕಾರ ಚಳುವಳಿ' ವ್ಯಾಪಕವಾಗಿ ಹಬ್ಬಲು ಶುರುವಾಗುತ್ತದೆ. ಸಂಘದ ಸಾವಿರಾರು ಕಾರ್ಯಕರ್ತರು ಭಾಗಿಯಾಗಿ, ಪೊಲೀಸರ ಲಾಠಿಯೇಟಿಗೆ ಶಿವಲಿಂಗು ಒಳಗಾಗಿ ಮತ್ತೆ ಜೈಲು ಪಾಲಾಗಿದ್ದನು. ಇವನಿಗೆ ಹೆಂಡತಿ ಕಲಾವತಿಯು ಹುರಿದುಂಬಿಸಿಯೇ ಕಳುಹಿಸುತ್ತಿದ್ದಳು. ಯಾವಾಗಲೂ ಸ್ವತಂತ್ರ್ಯ ಭಾರತದ ಕನಸು ಕಾಣುತ್ತಿದ್ದಳು.

ಆ ವಯಸ್ಸಿನಲ್ಲೂ ಗಂಡನಿಗೆ ಅಕ್ಷರಾಭ್ಯಾಸ ಮಾಡಿಸುತ್ತಿದ್ದಳು. "ಈ ವಯಸ್ಸಿನಲ್ಲಿ ಇದೆಲ್ಲಾ ಯಾಕೆ ಬಿಡು ಕಲಾವತಿ. ನನಗಿಂತಲೂ ಓದು ಬರವಣಿಗೆ ಇನ್ನು ಮೇಲೆ ಮಕ್ಕಳಿಗೆ ಅವಶ್ಯವಿದೆ. ಅವರ ಕಡೆಗೆ ಗಮನಕೊಡು" ಎನ್ನುತ್ತಿದ್ದ (ಪು.ಸಂ. 215)

ಕಾಲಾಪಾನಿಯೊಳಗಿದ್ದ ಸಾವರ್‌ಕರ್‌ರವರು ರತ್ನಗಿರಿ ಕೊಲ್ಹಾಪುರ, ಪುಣೆ, ಮುಂಬೈ, ಸುತ್ತಮುತ್ತ ಭಾಷಣ ಮಾಡುತ್ತ ತಿರುಗುತ್ತಿರುವರು. ಸಮಯ ಮಾಡಿಕೊಂಡು ಮುಂಬೈಗೆ ಬಾ ಎಂದು ತಮ್ಮ ನೀಲಕಂಠನ ಪತ್ರವನ್ನು ಶಿವಲಿಂಗು ಓದುತ್ತಿದ್ದ ಹಾಗೆಯೇ ಅವನ ನರನಾಡಿಗಳಲ್ಲಿ ಅದೇನೋ ಮಿಂಚಿನ ಸಂಚಾರವಾಗಿದಂತಾಗಿ ಮುಂಬೈಗೆ ಹೊರಟೇಬಿಟ್ಟನು.

ಮುಂಬೈಗೆ ಬಂದದ್ದು ಸುಭಾಷರ ಭಾಷಣ ಕೇಳಲಿಕ್ಕೆ ಮತ್ತು ನೀಲಕಂಠನ ಕುಟುಂಬವನ್ನು ನೋಡುವುದೇ ಆಗಿದ್ದರೂ ಸಹ ಖೈದಿಯಾಗಿದ್ದ ಲಕ್ಷ್ಮಣನ ನೆನಪಾಗಿ ಹೊರಡುತ್ತಾನೆ. ಆದರೆ ಲಕ್ಷ್ಮಣನ ಸಾವಿನ ಸುದ್ದಿಯನ್ನು ಕೇಳಿ ಮನದಲ್ಲಿ ಮರುಗುತ್ತಾನೆ. ಇದಕ್ಕೂ ಕೂಡ ಬ್ರಿಟಿಷರ ದಬ್ಬಾಳಿಕೆ ಕಾರಣವಾಗಿರುತ್ತದೆ. ಅಲ್ಲಿನ ಕಾವಲುಗಾರರು ಸಮಾಧಾನದಿಂದ ಶಿವಲಿಂಗುವಿನ ಭುಜದ ಮೇಲೆ ಕೈಯಿಟ್ಟು "ನಾವೂ ನಿನ್ನ ಹಾಗೆಯೇ ಕನಸು ಕಾಣುತ್ತಿದ್ದೇವೆ. ಆದೆ ಏನು ಮಾಡುವುದು? ಮನೆ ಮಕ್ಕಳು

ಹೊಟ್ಟೆಪಾಡು ಎಂದಿದೆಯಲ್ಲ ಶಿವಲಿಂಗಪ್ಪ' ಎನ್ನುತ್ತ 'ನೀನು ಕಟ್ಟಾ ದೇಶಭಕ್ತನಾಗಿದ್ದರೆ ಹೋಗು. ಗಾಂಧಿ, ಸಾವರಕರ, ಸುಭಾಷ ಚಂದ್ರರ ಗುಂಪುಗಳನ್ನು ಸೇರಿಕೊಂಡು ದೇಶಸೇವೆಗೆ ಮುಂದಾಗು' ಎಂದು ನಾಲ್ಕಾರು ಮಾತುಗಳನ್ನು ಹೇಳಿ 'ನಾಳೆ ರತ್ನಗಿರಿಯಲ್ಲಿ ಸಾವರಕರ ದೇಶಭಕ್ತಿ ಭಾಷಣ ಇದೆ. ಸಾಧ್ಯವಾದರೆ ಅಲ್ಲಿಗೆ ಹೋಗು. ಕೇಳು' ಎಂದು ಹೇಳಿದರು. (ಪು.ಸಂ. 219)

ಇಲ್ಲಿ ಬ್ರಿಟಿಷರ ದಬ್ಬಾಳಿಕೆ ಮತ್ತು ದೌರ್ಜನ್ಯಕ್ಕೆ ನಿರಂತರವಾಗಿ ಒಳಗಾಗುತ್ತಿದ್ದರು. ಮತ್ತು ಅನಿವಾರ್ಯತೆಯಿಂದ ಸಹಿಸಿಕೊಳ್ಳುವ, ಶರಣಾಗುವ ಪರಿಸ್ಥಿತಿ ಎದುರಾಗಿರುತ್ತದೆ.

ಸ್ವಾತಂತ್ರ್ಯ ಹೋರಾಟಗಾರರು ಮಹಾನ್ ನಾಯಕರ ಭಾಷಣವನ್ನು ಕೇಳಲು ಹೊರಡಲನುವಾದ, ಶಿವಲಿಂಗುವಿಗೆ ಆ ಮಹಾನ್ ಪಟ್ಟಣದ ಮೊದಲ ಆಧುನಿಕತೆಯ ಸ್ಪರ್ಶವನ್ನು ಕಣ್ತುಂಬಿಕೊಳ್ಳುವುದರ ಮೂಲಕ ಆಶ್ಚರ್ಯಚಕಿತನಾಗುತ್ತಾನೆ.

ಅದು ಬೆಳಗಿನ 8ರ ಒಳಗಡೆ ಶಾಲೆ, ಕಾಲೇಜು, ಆಫೀಸು, ಫ್ಯಾಕ್ಟರಿಗಳಿಗೆಂದು ಹೋಗುತ್ತಿರುವ ಯುವ ಜನಾಂಗದ ಶಿಸ್ತಿನ ನೋಟ, ಸುಶಿಕ್ಷಿತ ಹೆಂಗಸರು ವಿದೇಶಿ ಬಟ್ಟೆಗಳಿಂದ ಹೊಲಿದ ಉದ್ದನೆಯ ಫ್ರಾಕ್‌ಗಳು ತೊಟ್ಟು ಎತ್ತರ ಹಿಮ್ಮಡಿಯ ಚಪ್ಪಲಿಗಳು ಹಾಕಿಕೊಂಡು ತುಟಿಗೆ ಕೆಂಪನೆಯ ಲಿಪ್‌ಸ್ಟಿಕ್ ಹಚ್ಚಿಕೊಂಡದ್ದನ್ನು ಮತ್ತೆ ಮತ್ತೆ ತುಟಿಗಳಿಂದ ಒತ್ತಿಕೊಳ್ಳುತ್ತ ತುದಿ ಬೆರಳುಗಳಲ್ಲಿ ವ್ಯಾನಿಟಿಬ್ಯಾಗ್‌ಗಳನ್ನು ಹಿಡಿದುಕೊಂಡು ನಿಂತಿರುವ, ಕುಳಿತಿರುವವರನ್ನು ಕಂಡ. ಮನೆಯಲ್ಲಿ ಬಹುಶಃ ಪೇಪರ್ ಓದಲು ಸಮಯ ಸಿಗದೇ ಇದ್ದವರು ಇಲ್ಲಿ ಓದುತ್ತಾ ಅದರಲ್ಲೇ ಮಗ್ನರಾಗಿದ್ದವರನ್ನು ನೋಡಿದ್ದ. ಪರೀಕ್ಷೆಯ ಸಮಯವಾದುದರಿಂದ ಕಾಲೇಜು ಹುಡುಗರೂ ಕೂಡಾ ಗಣಿತ ಸೂತ್ರಗಳನ್ನು ಇಂಗ್ಲೀಷಿನಲ್ಲಿಯೇ ಬಿಡಿಸುವುದನ್ನು ಕಂಡು ಚಕಿತನಾದ. ಕೆಲವರು ಸರಕಾರಿ ಆಫೀಸುಗಳಲ್ಲಿ ಬಿಳಿಯರೊಂದಿಗೆ ಕೆಲಸ ಮಾಡುವವರಿಬಹುದೇನೋ. ಅವರ ಪ್ಯಾಂಟು, ದೊಡ್ಡ ಕಾಲರ್ ಶರ್ಟು, ಉದ್ದನದಾಗಿ ಇಳಿಬಿಟ್ಟ ಟೈ, ಪಾಲೀಶ್ ಮಾಡಿದ ಬೂಟು, ಅದರೊಳಗಿನ ಬಿಳಿಯ ಕಾಲುಚೀಲ, ಗಂಭೀರವಾಗಿ ಕುಳಿತ ಅವರ ಹಾವಭಾವಗಳನ್ನೆಲ್ಲ ಮತ್ತೆ ಮತ್ತೆ ನೋಡುತ್ತಲೇ ಇದ್ದ. (ಪು.ಸಂ. 221)

ಇನ್ನು ನೀಲಕಂಠನ ಹೆಂಡತಿ ಪ್ರಭ, ಮತ್ತವನ ಹೆಣ್ಣು ಮಕ್ಕಳಾದ ಮಾಧವಿ, ಸುಶೀಲರಿಗೂ ಸ್ವಾತಂತ್ರ್ಯದ ಹಂಬಲ ಮನೆ ಮಾಡಿತ್ತು. ಅದರಲ್ಲೂ ಸುಶೀಲಳಿಗೆ ಇಂತಹ ವಿಷಯಗಳ ಬಗೆಗೆ, ಇತಿಹಾಸದ ಬಗೆಗೆ, ದಾಸ್ಯ ಮುಕ್ತ ಭಾರತದ ಬಗ್ಗೆ ಅಪಾರವಾದ ಕನಸು ಕಟ್ಟಿಕೊಂಡ ಗಟ್ಟಿಗಿತ್ತಿ ಅವಳು. ಆದರೆ ನೀಲಕಂಠ ಮಾತ್ರ ಬಿಳಿಯರ ಬಗೆಗಿನ ವ್ಯಾಮೋಹ, ಅವರ ಭಾಷೆ, ಬಟ್ಟೆ, ಗತ್ತು, ಅಧಿಕಾರಕ್ಕೆ ಮರುಳಾಗಿ ಹೋರಾಟದ ಹಾದಿಯನ್ನೇ ಮರೆತಿದ್ದ.

ಶಿವಲಿಂಗು ಸುಮಾರು 20 ವರುಷಗಳ ಕಾಲ ಕಾಲಾಪಾನಿ (ಕರಿನೀರು) ಶಿಕ್ಷೆ ಅನುಭವಿಸಿ ಬಂದಿದ್ದರೂ, ತನ್ನ ನೆಲ, ಜಲ, ಸ್ವಾತಂತ್ರ್ಯದ ಬಗ್ಗೆ ಕಿಂಚಿತ್ತೂ ಅವನಲ್ಲಿ ಆಸಕ್ತಿ ಕುಂದಿರಲಿಲ್ಲ. ಬದಲಾಗಿ ದಿನೇ ದಿನೇ ಹೆಮ್ಮರವಾಗಿಯೇ ಬೆಳೆದು ತನ್ನ ವಿಸ್ತಾರತೆಯನ್ನು ಹರಡಿಕೊಂಡಿತ್ತು.

"ಇಪ್ಪತ್ತು ವರ್ಷ ಸಾವಿರಾರು ಮೈಲಿ ದೂರದ ಕಾಲಾಪಾನಿ ಶಿಕ್ಷೆ ಅನುಭವಿಸಿದರೂ ನಮ್ಮೂರು, ಅಪ್ಪ-ಅಮ್ಮ ಹೊಲ ನಾನೆಂದೂ ಮರೆತಿಲ್ಲ. ದಿನಾಲೂ ನೀವೆಲ್ಲ ನೆನಪಾಗ್ತಿದ್ರಿ ಜೀತಕ್ಕೆ ಕಸಿವಿಸಿಯಾಗ್ತಿತ್ತು. ಮತ್ತೆ ನಿಮ್ಮನ್ನೆಲ್ಲಾ ಯಾವಾಗ ನೋಡ್ತೇನೋ ಅನಿಸ್ತಿತ್ತು. ದೇವರು ನಮಗ ಮತ್ತೊಂದು ಜನ್ಮ ಕೊಟ್ಟಾನ. ಮತ್ತೊಮ್ಮೆ ಸಿಕ್ಕಿರುವ ನಮ್ಮೂರು ಈ ಸಂಬಂಧಗಳು, ಅಲ್ಲಿ ಸಿಗುವ ಪ್ರೀತಿ, ವಿಶ್ವಾಸ ಕತ್ತರಿಸಿಕೊಂಡು ಇಂಥಾ ನಗರಕ್ಕೆ ನಾನು ಬರೋದಿಲ್ಲ. ನಾನಿಲ್ಲಿ ಬಂದು ಉಳಿದು ಉಸಿರಾಡಿದ್ದೇ ಆದ್ರ ನನಗಿದೊಂದು ಕಾಲಾಪಾನಿ ಆಗ್ತದ. ಜೈಲಿನೊಳಗೆ ಬಂಧನ ಆದಂಗ ಆಗ್ತದ ನನಗ. ಸ್ವಾತಂತ್ರ್ಯ ಬೇಕು. ಮುಕ್ತ ಉಸಿರಾಟ, ನೆಲ, ನೀರು ಬೇಕು, ನನಗ ಇವೆಲ್ಲಾ ಹ್ಯಾಂಗ ಬೇಕೋ ನಮ್ಮ ಜನರಿಗೂ ನಮ್ಮ ನೆಲದಲ್ಲಿ ಮುಕ್ತವಾಗಿ ಓಡಾಡಲು, ಉಸಿರಾಡಲು ಈ ಬಿಳಿಮಂದಿಯಿಂದ ಸ್ವಾತಂತ್ರ್ಯ ಬೇಕು. ಅದಕ್ಕೆ ನಮ್ಮದು ನಿರಂತರ ಹೋರಾಟ" (ಪು.ಸಂ. 226)

ಬ್ರಿಟೀಷರಿಂದ ಸ್ವಾತಂತ್ರ್ಯ ಪಡೆಯುವುದಕ್ಕಾಗಿ ನಿರಂತರವಾಗಿ ಸೆಣಸುತ್ತಿದ್ದ ಶಿವಲಿಂಗುವಿನ ಮನದಾಳದ ಮಾತುಗಳಿವು. ಮುಂಬೈ ಅಂತ ಮುಂದುವರೆದ ನಗರವನ್ನು ಮತ್ತು ಅಲ್ಲಿನ ಯಾಂತ್ರಿಕ ಬದುಕನ್ನು ಗಮನಿಸಿದ ನಾಯಕನಿಗೆ ಅದು ಕಾಲಾಪಾನಿಯಂತೆ (ಅಂಡಮಾನ್ ಜೈಲಿನಂತೆ) ಭಾಸವಾಗುತ್ತಿತ್ತು. ಒಟ್ಟಿನಲ್ಲಿ ಶಿವಲಿಂಗುವಿನ ರಕ್ತದ ಕಣ-ಕಣದಲ್ಲೂ, ಮನೆ-ಮನದಲ್ಲೂ ಸ್ವಾತಂತ್ರ್ಯವೆಂಬ ಗಿಡ ಸೊಂಪಾಗಿ ಬೆಳೆದಿತ್ತು. ಮೊಗ್ಗಾಗಿದ್ದ ಕಿಚ್ಚು-ಕೆಚ್ಚು, ಹೂವಾಗಿ ಅರಳಿ ನಿಂತು ಫಲಿತಾಂಶ ನೀಡಬೇಕಿತ್ತಷ್ಟೇ.

ಯಾರ ಜೀವಕ್ಕೂ ಕುತ್ತು ಬರದಂತೆ, ಸ್ವಾತಂತ್ರ್ಯ ಸಿಗಬೇಕು ಎಂಬುದು ಶಿವಲಿಂಗುವಿನ ಇರಾದೆಯಾಗಿತ್ತು. ಅದಕ್ಕೆ ಕಾರಣೀಭೂತರಾದವರು 'ಗಾಂಧೀಜಿ' ಇದರ ಬಗ್ಗೆ ಅಂಡಮಾನಿನ ಕಾಲಾಪಾನಿಯೊಳಗೆ 'ಸಾವರಕರ್'ರವರಿಂದ ಜೈಲಿನೊಳಗೆ ಇದ್ದು ಮಾಹಿತಿಯನ್ನು ತಿಳಿದುಕೊಂಡಿದ್ದ.

ಸುಮಾರು ವರ್ಷಗಳ ಬಳಿಕ ನೀಲಕಂಠನ ಕುಟುಂಬ ಮತ್ತು ಮನೆಯ ಹೆಣ್ಣುಮಕ್ಕಳಾದ ಶಾಂತಾ, ಪಾರ್ವತಿ, ವೀರಣ್ಣಗೌಡ, ಕಾಕಾನ ಹೆಣ್ಣು ಮಕ್ಕಳಾದ ಉಮಾ, ಶಕುಂತಲಾ ಅವರನ್ನು ಅವರ ಗಂಡಂದಿರನ್ನು ಸಂಕ್ರಾಂತಿ ಹಬ್ಬಕ್ಕೆ ಕರೆಸಿಕೊಂಡಿದ್ದರು.

ಅವರ ಖುಷಿಗೆ ಪಾರವೇ ಇರುವುದಿಲ್ಲ. ಎಲ್ಲರೂ ಒಟ್ಟಾಗಿ ಸೇರಿ ಬಗೆ-ಬಗೆಯ ತಿನಿಸುಗಳನ್ನು ಮಾಡುವುದೇನು. ಎಲ್ಲರ ಬಳಿ ಪ್ರೀತಿಯಿಂದ ಮಾತನಾಡುತ್ತ ಮನೆಯ ಒಳಗೂ ಹೊರಗೂ ಉತ್ಸಾಹದಿಂದ

ಓಡಾಡುವುದೇನು, ಚಕ್ಕಡಿಗಳನ್ನೇರಿ ಊರಹೊರಗಿನ ಹೊಲಗಳಲ್ಲಿ ಪೂಜೆ ಮಾಡುವುದೇನು ಮುಂತಾದ ಕಾರ್ಯಚಟುವಟಿಕೆಗಳಲ್ಲಿ ಪಾಲ್ಗೊಂಡಿದ್ದರು.

ಕಲಾವತಿ ಉದಾರ ಮನಸ್ಸಿನ, ಸುಶಿಕ್ಷಿತ ಹೆಣ್ಣು ಮಗಳಾದ್ದರಿಂದ, ಅಸಹಾಯಕ ನಿರ್ಗತಿಕ ಹೆಣ್ಣು ಮಕ್ಕಳಿಗೆ ನೆರವಾಗುತ್ತಿದ್ದಳು. "ಊರಿನಂಚಿಗೆ ತಲುಪಿರುವ ತಮ್ಮ ಹೊಲದಲ್ಲಿಯ ಎರಡು ಎಕರೆ ಹೊಲವನ್ನು ಈರನಿಗೆ ಕೊಟ್ಟು ಜೀತದಿಂದ ಮುಕ್ತ ಮಾಡಿ, ಅಲ್ಲಿ ಅವನಿಗೆ ಮನೆ ಕಟ್ಟಿಕೊಂಡಿರಲು ವ್ಯವಸ್ಥೆ ಮಾಡಿಸಿದರು. ಅಲ್ಲಿಯೇ ಕೆಳಗೇರಿಯ ಅಬಲೆಯರ ದೇವದಾಸಿಯರ ಕಲ್ಯಾಣಕ್ಕಾಗಿ ಒಂದು ದೊಡ್ಡ ಕರಿ ಹಂಚಿನ ಮನೆ ಕಟ್ಟಿಸಿ ಆಸರೆಮನೆ ಮಾಡಿಕೊಟ್ಟರು. ಕಲಾವತಿಯೇ ಸ್ವತಃ ನಿಂತು ಅವರಿಗೆ ಅವರ ಮಕ್ಕಳಿಗೆ ಅಕ್ಷರಜ್ಞಾನ, ಕೃಷಿ ಜ್ಞಾನ, ಆರೋಗ್ಯ, ನೂಲುವುದು, ಹೆಣಿಗೆ ಕಲಿಸುವ ಜವಾಬ್ದಾರಿ ತೆಗೆದುಕೊಂಡಳು. ಸುತ್ತ ಹಳ್ಳಿಯಲ್ಲಿಯೂ ಮೇಲ್ಜಾತಿಯವರ ಶ್ರೀಮಂತರ ಅಪಮಾನದ ಕಠೋರ ಮಾತುಗಳಿಂದ ನೊಂದು ಬೆಂದು ಬಂದ ಮಹಿಳೆಯರಿಗೆ ಬಡವರಿಗೆ, ವಿಧವೆಯರಿಗೆ ಆತ್ಮಸ್ಥೈರ್ಯ ತುಂಬುತ್ತಿದ್ದಳು. (ಪು.ಟಂ. 248) ಇಂತಹ ಸಾಮಾಜಿಕ ಕಾರ್ಯಗಳಲ್ಲಿ ಪ್ರವೃತ್ತಳಾದ ಕಲಾವತಿಯು ಅವರ ಏಳಿಗೆಗಾಗಿ ಶ್ರಮಿಸುತ್ತಿದ್ದಳು. ಅವಳು ಜಾತಿ, ಧರ್ಮ, ಲಿಂಗವನ್ನು ಮೀರಿ ಸಮಾನತೆಯ ಕಡೆಗೆ ಮುಖಮಾಡಿದ್ದಳು.

ಒಂದು ಕಡೆ ಸ್ವಾತಂತ್ರ್ಯದ ಹೋರಾಟದ ತೀವ್ರತೆ ಹೆಚ್ಚುತ್ತಾ ಹೋಗುತ್ತಿದ್ದಂತೆ ಶಿವಲಿಂಗುವಿನ ಮಗನಾದ ಭರತನಲ್ಲಿ ಸ್ವಾತಂತ್ರ್ಯದ ಒಲವು ಹೆಮ್ಮರವಾಗಿ ಬೆಳೆಯುತ್ತ ಹೋಯಿತು "ಗಾಂಧಿಯವರ ಉಪವಾಸ ಸತ್ಯಾಗ್ರಹ, ಅಹಿಂಸಾ ಚಳುವಳಿ, ಅಸಹಕಾರ ಚಳುವಳಿ, ಮನವಿಗಳು, ಪ್ರಾರ್ಥನೆಗಳಿಂದ ಸ್ವಾತಂತ್ರ್ಯಗಳಿಸಲು ಸಾಧ್ಯವಿಲ್ಲ (ಪು.ಸಂ.251) ಎಂದು ತಲೆಗೆ ಹೇಳುತ್ತ ಸುಭಾಷರ ತರದಲ್ಲಿ ತೀವ್ರತರವಾದ ಹೋರಾಟ ನಡೆಸಬೇಕು. ಬ್ರಿಟೀಷರ ಬದ್ಧವೈರಿಯಾದ ಜರ್ಮನಿಯ ಸಹಾಯದಿಂದ ಭಾರತವನ್ನು ಸ್ವತಂತ್ರ್ಯಗೊಳಿಸಿಕೊಳ್ಳುವ ಉದ್ದೇಶದಿಂದ ಸುಭಾಷರು ಹಿಟ್ಲರನನ್ನು ಭೇಟಿಯಾಗುತ್ತಿದ್ದಾರೆ ಎಂದು ತಂದೆಗೆ ತಿಳಿಸಿದ.

ಸ್ವಾತಂತ್ರ್ಯಕ್ಕಾಗಿ ಉಗ್ರ ಹೋರಾಟ – ಚಳುವಳಿಗಳು

ದಿನೇ ದಿನೇ ಸ್ವಾತಂತ್ರ್ಯದ ಚಳುವಳಿಯ ಹೋರಾಟಗಳು ಉಗ್ರರೂಪವನ್ನು ಪಡೆದುಕೊಳ್ಳುತ್ತಾ ಹೋಯಿತು. ಬಿಳಿಸರ್ಕಾರದ ವಿರುದ್ಧ ಎಲ್ಲೆಲ್ಲೂ ಆಕ್ರೋಶ ಭುಗಿಲೆದ್ದಿತ್ತು. ಪ್ರತಿಭಟನೆ, ಮೆರವಣಿಗೆ, ಹರತಾಳಗಳು ಮೇಲಿಂದ ಮೇಲೆ ನಡೆಯುತ್ತಿದ್ದವು. ಇದರಲ್ಲಿ ಭರತನೂ ಭಾಗಿಯಾಗಿ ಸರಕಾರದ ವಿರುದ್ಧ ಕೂಗುತ್ತಾ, ಸರ್ಕಾರವನ್ನು ಬಾಯಿಗೆ ಬಂದಂತೆ ಬೈಯತೊಡಗಿದ್ದ. ಕ್ಷಣಾರ್ಧದಲ್ಲಿ ಪೋಲೀಸರು

ತಮ್ಮ ಲಾಟಿಗಳಿಂದ ಮನಬಂದಂತೆ ಥಳಿಸಿ ಗುಂಪನ್ನು ಚದುರಿಸಲು ಪ್ರಯತ್ನಿಸಿದರು. ಆ ಪೋಲೀಸರ ಗುಂಪಿನಲ್ಲಿ ತನ್ನ ಸೋದರತ್ತೆ ಶಾಂತಾಳ ಮಗ 'ಜಗದೀಶ'ನೂ ಇದ್ದ. "ನಾನು ಈ ಸಂದರ್ಭದೊಳಗೆ ಅಸಹಾಯಕನಾಗಬೇಕಾಗ್ತದ, ಸುಮ್ಮನಿರು" ಎಂದು ನೆಪಕ್ಕೆ ನೂಕಾಡುತ್ತಲೇ ಬುದ್ಧಿಹೇಳತೊಡಗಿದ (ಪು.ಸಂ. 255) ಆಕ್ರೋಶದಲ್ಲಿದ್ದ ಭರತ "ನೀವೆಲ್ಲಾ ಬಿಳಿಯರ ಕಾವಲು ನಾಯಿಗಳು, ಅವರೆಸೆಯುವ ದುಡ್ಡಿಗೆ, ರೊಟ್ಟಿಗೆ ಬಾಯಿಮುಚ್ಚಿಕೊಂಡವರು, ದೇಶದ್ರೋಹಿಗಳು, ನನ್ನ ಕೈಯಲ್ಲೂ ಲಾಠಿ ಇದ್ದಿದ್ದರೆ ನಿಮಗಿಂತಲೂ ಶಕ್ತಿ ಪ್ರಯೋಗ ಮಾಡುವುದು ನನಗೂ ಸರಿಯಾಗಿ ಬರುತ್ತಿತ್ತು. ಲಾಠಿ, ಖಾಕಿ ಇದೆಯೆಂದ ಮಾತ್ರಕ್ಕೆ ಸ್ವಾಭಿಮಾನ, ದೇಶಾಭಿಮಾನ ಬಿಡಬಾರದೆನ್ನುವ ಛಲ ನಿಮ್ಮಲ್ಲಿರಲಿ" ಎಂದು ಪೊಲೀಸರಿಗೆ ತಿರುಗೇಟು ಕೊಡುತ್ತಿದ್ದ. (ಪು.ಸಂ. 255) ಈ ತೆರನಾಗಿ ಸ್ವಾತಂತ್ರ್ಯದ ಕಿಚ್ಚು ಅವನಲ್ಲಿ ಆಳವಾಗಿ ಬೇರೂರಿತ್ತು. ಅವರ ಲಾಠಿಯೇಟಿಗೆ ಬೂಟಿನ ಒದೆತಕ್ಕೆ ಜಗ್ಗದೆಯೇ ಕುಗ್ಗದೆಯೇ ಎದೆಯೊಡ್ಡುತ್ತಿದ್ದ.

ಮುಂಬೈಗೆ ಮುಂದಿನ ವಿದ್ಯಾಭ್ಯಾಸಕ್ಕೆ ತೆರಳಿದನಾದರೂ ಕಾಲೇಜಿಗಿಂತ ಕಾಲೇಜಿನ ಲೈಬ್ರರಿಯಲ್ಲಿ ಕುಳಿತು ದಿನಪತ್ರಿಕೆಗಳನ್ನು ಓದುತ್ತಾ ಭಾರತದಾದ್ಯಂತ ಸ್ವಾತಂತ್ರ್ಯ ಚಳುವಳಿಗಳ ಬಗ್ಗೆ ತಿಳಿದುಕೊಳ್ಳುತ್ತಾ, ಚಳವಳಿಯಲ್ಲಿ ಸಕ್ರಿಯವಾಗಿ ಸಂಪೂರ್ಣವಾಗಿ ತೊಡಗಿಸಿಕೊಳ್ಳುತ್ತಿದ್ದ.

ಇತ್ತ ಮಹದೇವಪುರದ ಹಳ್ಳಿ ಜನರು, ನಿರ್ಗತಿಕರು, ಕೆಳಜಾತಿಗೆ ಸೇರಿದವರು ಬ್ರಿಟಿಷರ ಮಾತಿಗೆ ಮರುಳಾಗಿ ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡು, ಬೆಳಗಾವಿಯ ದಂಡುಪಾಳ್ಯದಲ್ಲಿ ಅವರ ಕುದುರೆ ತೊಳೆಯುವ, ಲದ್ದಿ ಎತ್ತುವ ಬೂಟು ಪಾಲಿಷ್ ಮಾಡುವ ಬಂದೂಕುಗಳನ್ನು ಒರೆಸುವ ಅವರ ಪಾಯಿಖಾನೆ ತೊಳೆಯುವ, ಕಸಾಯಿಖಾನೆಯಿಮದ ಮಾಂಸ ತಂದು, ಕತ್ತರಿಸುವ, ಅನೇಕ ಕೆಲಸಗಳಲ್ಲಿ ತೊಡಗಿಸಿಕೊಂಡು ಬಣ್ಣದ ಅಂಗಿಗಳನ್ನು ತೊಟ್ಟುಕೊಂಡು ಸುತ್ತಾಡತೊಡಗಿದರೆ, ಹೊಲಗೇರಿಯ ಐದಾರು ಹೆಂಗಸರು ವೇಶ್ಯಾವೃತ್ತಿ ಮಾಡಿಕೊಂಡು, ಎಲೆ ಅಡಿಕೆ ಹಾಕಿಕೊಂಡು ಅಡ್ಡಾಡತೊಡಗಿದರು (ಪು.ಸಂ.255)

ಶಿವಲಿಂಗಪ್ಪ ಇವರಿಗೆಲ್ಲಾ ಬ್ರಿಟೀಷರ ಬಣ್ಣದ ಮಾತುಗಳಿಗೆ ಮರುಳಾಗದಿರಿ ಎಂದು ತಿಳುವಳಿಕೆ ಹೇಳುತ್ತಿದ್ದ. ಇದಕ್ಕೆಲ್ಲಾ ಕಾರಣ 'ಸೋದ್ಯಾ'ನಂತ ಮನೆ ಮುರುಕರು ಕಾರಣವಾಗಿದ್ದರು. ಆ ಹಳ್ಳಿಯ ಮುಗ್ಧ ಜನರಿಗೆ ಆಸೆ, ಆಮಿಷವೊಡ್ಡಿ ಈ ರೀತಿಯ ಕೆಲಸಗಳಲ್ಲಿ ತೊಡಗುವಿಕೆಗೆ ಕಾರಣನಾಗಿದ್ದ.

ಮಹಾತ್ಮಾ ಗಾಂಧೀಜಿಯವರ ನೇತೃತ್ವದಲ್ಲಿ ಎಐಸಿಸಿ ಸಭೆ ಸೇರುತ್ತದೆ. ಮೌಲಾನಾ ಅಬ್ದುಲ್ ಕಲಾಂ ಆಜಾದ್, ನೆಹರು, ಪಟೇಲ್, ಮುಂತಾದ ರಾಷ್ಟ್ರೀಯ ನಾಯಕರು ವೇದಿಕೆಯಲ್ಲಿದ್ದರು. ಬ್ರಿಟಿಷರಿಗೆ "ಬ್ರಿಟೀಷರೇ ಭಾರತ ಬಿಟ್ಟು ತೊಲಗಿ" "ಕ್ವಿಟ್ ಇಂಡಿಯಾ" 'ಚಲೇಜಾವ್" ಎಚ್ಚರಿಕೆಯ ಕರೆಗೆ ಮೊಳಗುತ್ತಿತ್ತು.

ಇದು ಪ್ರಜಾಪ್ರಭುತ್ವ ನಡೆಸುದ ಶುದ್ಧ ಅಹಿಂಸಾತ್ಮಕ ಹೋರಾಟ, ಎಂದು ಘೋಷಿಸುತ್ತಾ,

ಬಲಿದಾನಕ್ಕೆ ಸಿದ್ಧರಿದ್ದೇವೆ. ಗುಲಾಮಗಿರಿಗೆ ನಾವು ಒಪ್ಪುವುದಿಲ್ಲ 'ಮಾಡು ಇಲ್ಲವೆ ಮಡಿ' ಎಂಬುದು ಪ್ರತಿಯೊಬ್ಬ ಭಾರತೀಯನ ನಿರ್ಧಾರ ಎಂದು ಗಾಂಧಿ ಹೇಳುತ್ತಿದ್ದರು.

ಒಬ್ಬೊಬ್ಬ ರಾಷ್ಟ್ರೀಯ ನಾಯಕರ ಹೋರಾಟದ ಹಾದಿ ಭಿನ್ನವಾಗಿರುತ್ತಿದ್ದವು.

* ಗಾಂಧಿ ಅಹಿಂಸಾವಾದಿ. ಉಪವಾಸ ಮಾಡಿಕೊಂಡು ಭಾಷಣಗಳನ್ನು ಮಾಡಿಕೊಂಡು ಹೋರಾಟ ಮಾಡುತ್ತಿದ್ದರು.

* ಸುಭಾಷ್ ಚಂದ್ರರು ಸಶಸ್ತ್ರ ಹೋರಾಟಕ್ಕೆ ಸಜ್ಜಾಗಿ ಎಂದು ಹೇಳಿಕೆ ನೀಡುತ್ತ, ಯುವಕರಿಗೆ ನೀವು ನಿಮ್ಮ ರಕ್ತ ಕೊಡಿ, ನಾನು ನಿಮಗೆ ಸ್ವಾತಂತ್ರ್ಯ ಕೊಡುತ್ತೇನೆ ಎಂದು ಹುರಿದುಂಬಿಸುತ್ತಿದ್ದರು.

* ಸಾವರ್‌ಕರರು ಪಿಸ್ತೂಲು, ಗುಂಡು, ಮದ್ದುಗಳಿಂದ ಹೋರಾಟ ನಡೆಸಬೇಕು ಎಂದು ಹೇಳುತ್ತಿದ್ದರು.

ಕಾಂಗ್ರೆಸ್ ಚಳುವಳಿ ಇನ್ನೇನು ಆರಂಭಗೊಳ್ಳಬೇಕಿತ್ತು. ಗಾಂಧೀಜಿಯ ಭಾಷಣದ ಶಕ್ತಿ, ಅದರ ಪರಿಣಾಮಗಳನ್ನು ಅರಿತಿದ್ದ ಬ್ರಿಟಿಷರು, ವೇದಿಕೆಯ ಮೇಲೆ ನಾಯಕರಿಲ್ಲದಂತೆ ಮಾಡಿ ಚಳುವಳಿಕಾರರನ್ನು ಓಡಿಸಿ ಮುಖಂಡರನ್ನು ಬಂಧಿಸಿತು. ಗಾಂಧಿ, ನೆಹರು, ಪಟೇಲ್, ಸರೋಜಿನಿ ನಾಯ್ಡು, ಕಸ್ತೂರ ಬಾ ಮುಂತಾದವರನ್ನೆಲ್ಲಾ ಬಂಧಿಸಿ ಪೂನಾದ ಆಗಾಖಾನ್ ಸೆರೆಮನೆಗೆ ತಳ್ಳಿದರು.

ನಾಯಕರಿಲ್ಲದೆ ಚಳುವಳಿ ನಡೆಸಲು ಅಸಾಧ್ಯ ಎಂದು ತಿಳಿದಿದ್ದ ಬ್ರಿಟಿಷ್ ಪೊಲೀಸ್ ಪಡೆ ಹತ್ತಿಕ್ಕಿ ಯಶಸ್ವಿಯಾಯಿತು. ಆದರೆ ಭಾರತದಾದ್ಯಂತ ನಡೆದ ನಿರಂತರ ಹೋರಾಟಗಳು ಚಳುವಳಿಗಳನ್ನು ಹತ್ತಿಕ್ಕಲು ಬ್ರಿಟೀಷರಿಗೆ ಪ್ರಯಾಸವಾದಂತೆ ಕಾಣುತ್ತದೆ.

ಬ್ರಿಟಿಷರ ಕೈವಶವಾಗಿ ಅವರು ಹೇಳುತ್ತಿದ್ದ ಮತಾಂತರ, ಶಿಕ್ಷಣ ಇವುಗಳಿಗೆಲ್ಲ ಮರುಳಾಗಿ ಅವರ ಮನೆಗಳಲ್ಲಿ ಕೆಲಸ ಮಾಡುತ್ತ ಅಲ್ಲಿಯ ಬಿಳಿಯ ಹೆಂಗಸರನ್ನು ನೋಡಲೆಂದೇ, ಆ ಅಧಿಕಾರಿಗಳಿಗೆ ನೆರವಾಗುತ್ತಿದ್ದ ಸೋದ್ಯಾನ ಖೂನಿ ಆಗಿರುತ್ತದೆ. ಈ ಸೋದ್ಯಾನು ಈರ್ಯಾನ (ಶಿವಲಿಂಗುವಿನ ಜೀತದಾಳು) ಹೆಂಡ್ತಿ, ರತ್ನಿಯನ್ನು ಮಾನಭಂಗ ಮಾಡಿದನೆಂದು ಇದಕ್ಕೆ ಪ್ರತೀಕಾರವಾಗಿ ಹಾಗೂ ಎಲ್ಲ ಕುತಂತ್ರಗಳಿಗೂ ಕಾರಣಕರ್ತನಾದ, ಊರಿನ ಹೆಣ್ಣು ಮಕ್ಕಳನ್ನು ಕಂಡರೆ ಸಾಕು ಅಸಭ್ಯವಾಗಿ ವರ್ತಿಸುತ್ತಿದ್ದ ಅವನ ಕಾಟ ತಾಳಲಾರದೆ, ಕೊಲೆ ಮಾಡಿ ತಲೆಮರೆಸಿಕೊಂಡು, ಸ್ವಾತಂತ್ರ್ಯ ಹೋರಾಟಗಾರರಿಗೆ ನೆರವಾಗುತ್ತಿರುವ ಇವನ ಸ್ವಾತಂತ್ರ್ಯ ಪ್ರೇಮ, ದಾಸ್ಯಮುಕ್ತ ಸಮಾಜವನ್ನು ರೂಪಿಸಲು ಮಾಡುತ್ತಿದ್ದ ಇವನ ಯತ್ನ ಮೆಚ್ಚುವಂತಹದ್ದು. ಇಲ್ಲಿ ಈರ್ಯಾ ಒಂದು ರೀತಿಯ ಬಂಧನದಿಂದ ಮುಕ್ತಿಗೊಳ್ಳಬೇಕಿತ್ತು.

* ಸ್ವಾತಂತ್ರ್ಯದಿಂದ ಮುಕ್ತಿ (ಆಂಗ್ಲರಿಂದ)

* ತಮ್ಮ ಹಿರಿಯರಿಂದ ಬಳುವಳಿಯಾಗಿ ಬಂದಿದ್ದ ಜೀತ ಪದ್ಧತಿಯಿಂದಲೂ ಮುಕ್ತನಾಗಬೇಕಿತ್ತು.

ಶಿವಲಿಂಗಪ್ಪ ಮತ್ತು ಅವನ ಸಹಚರರು ಬ್ರಿಟೀಷರ ದಬ್ಬಾಳಿಕೆಗೆ ಬೇಸತ್ತು ರೊಚ್ಚಿಗೇಳುತ್ತಾರೆ. ಸಿಕ್ಕ-ಸಿಕ್ಕ ಸಾರ್ವಜನಿಕ ಆಸ್ತಿಪಾಸ್ತಿಗಳನ್ನು ನಾಶಮಾಡುತ್ತ ಬ್ರಿಟೀಷರಿಗೆ ತೊಡಕಾಗುತ್ತ, ಕಣ್ಣಿಗೆ ಕಾಣದೆ ಮಾಯವಾಗುತ್ತಿದ್ದರು.

"ಬೆಳಗಾವಿಯಿಂದ ಮಿಲಿಟರಿ ಬೇಸ್‌ಗೆ ಬರುವ ಹಾದಿಯ ಪೂಲ್‌ನನ್ನು ನೋಡು ನೋಡುತ್ತಿದ್ದಂತೆಯೇ ಕೈಬಾಂಬ್‌ಗಳನ್ನು ಹಾಕಿ ಕೆಡವಿ, ತಂಲೆ ತಾರುಗಳನ್ನು ಕತ್ತರಿಸಿ ಕತ್ತಲೆಯಲ್ಲಿ ಮಾಯವಾದರು. ಮುಂದೆ ಒಂದು ತಾಸಿನ ನಂತರ ರೈಲು ಹಾದಿ ಮುಖಾಂತರ ಊರು ಪ್ರವೇಶಿಸುವ ಇನ್ನೊಂದು ಪೂಲ್‌ನನ್ನು ಕೆಡವಿ ಅಲ್ಲಿಯೂ ಲೈಟ್‌ಕಂಬಗಳನ್ನು ಹತ್ತಿ ತಂತಿ ತಾರುಗಳ ಸಂಪರ್ಕ ಕತ್ತರಿಸಿ ಪರಾರಿಯಾದರು. (ಮ.ಸಂ.289)

ತೊಂದರೆಗಳನ್ನು ಕೊಡುತ್ತ, ಪೊಲೀಸರು ಮತ್ತು ಫೌಜುದಾರರ ಕೆಂಗಣ್ಣಿಗೆ ಗುರಿಯಾಗತೊಡಗಿದರು. ಇವರ ಮುಖ್ಯ ಉದ್ದೇಶ ಬ್ರಿಟಿಷರನ್ನು ಸದೆಬಡಿದು ಓಡಿಸಿ, ಭವ್ಯ ಭಾರತದ ಸ್ವಾತಂತ್ರ್ಯ ಪತಾಕೆಯನ್ನು ಹಾರಿಸುವುದು.

ಮಗಳ ಮದುವೆ ನಡೆಯುತ್ತಿರುವಾಗಲೇ ಪೊಲೀಸರು ಶಿವಲಿಂಗುವನ್ನು ಹುಡುಕಿಕೊಂಡು ಬಂದು ವಿಚಾರಣೆ ನಡೆಸತೊಡಗಿದಾಗ ನನಗೇನು ಜೈಲು ಸಾಲಿನ ಬಗ್ಗೆ ಹೆದರಿಕೆಯಿಲ್ಲ ಎಂದು ಗಾಂಭೀರ್ಯದಿಂದಲೇ ಮಾತನಾಡತೊಡಗಿದ. ನಂತರ ಅವನನ್ನು ಹಿಂಡಲಗಾ ಜೈಲಿಗೆ ಹಾಕುವ ಮೂಲಕ ಅವನನ್ನು ತಟಸ್ಥನನ್ನಾಗಿ ಮಾಡಲು ಯತ್ನಿಸಿದರು. ಇತ್ತ ಭರತ್ ಉಳಿದ ಸ್ವಾತಂತ್ರ್ಯ ಪ್ರೇಮಿಗಳೊಂದಿಗೆ ಸೇರಿ ಹೋರಾಟದ ಹಾದಿಯನ್ನು ಇನ್ನೂ ವಿಸ್ತರಿಸತೊಡಗಿದ.

ಇತ್ತ ಗಾಂಧೀಜಿಯವರಿಂದ ಪ್ರೇರಿತವಾದಂತಹ ಜನ ಚಳಿವಳಿಗಳಲ್ಲಿ ಭಾಗವಹಿಸತೊಡಗಿದರು. ಮುಷ್ಕರಗಳೂ, ಸರ್ಕಾರಿ ಕಚೇರಿಗಳಿಗೆ ಬೆಂಕಿಯಿಟ್ಟು, ಕಾರ್ಖಾನೆಗಳನ್ನು ತ್ಯಜಿಸಿ ಹೊರಬಂದರು. ಇದನ್ನರಿತ ಬ್ರಿಟಿಷ್ ಸರ್ಕಾರ ಇವರನ್ನು ಹತ್ತಿಕ್ಕಲು ಮುಂದಾಯಿತು. ಸರ್ಕಾರಿ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವವರಿಗೆ, ಭಾಷಣಗಳು ಸಭೆ ಸಮಾರಂಭಗಳನ್ನು ನಡೆಸುವವರ ಮೇಲೆ ಲಾಠಿ ಚಾರ್ಜು, ಗೋಲೀಬಾರು ಮಾಡುತ್ತಿದ್ದರು ಮತ್ತು ಬಂಧಿಸುತ್ತಿದ್ದರು.

ಅದಕ್ಕೆ ಪ್ರತೀಕಾರವಾಗಿ ಸರಕಾರಿ ಕಛೇರಿಗಳನ್ನು ಸುಡುವುದು, ಖಜಾನೆ ಲೂಟಿ ಮಾಡುವುದು, ದಫ್ತರಗಳನ್ನು ಸುಡೋದು, ಟೆಲಿಫೋನು, ಟೆಲಿಗ್ರಾಫ್ ತಾರು ತಂತಿಗಳನ್ನು ಹಾಳುಮಾಡುವುದು ರೈಲ್ವೇ ಹಳಿಗಳನ್ನು ಕತ್ತರಿಸುವಂತಹ ಕೆಲಸಗಳಲ್ಲಿ ತೊಡಗಿರುತ್ತಾರೆ.

ಭರತನು ದಿನಪತ್ರಿಕೆಗಳಿಂದ ಸುದ್ದಿಗಳನ್ನು ತಿಳಿದು ಅದರಲ್ಲೂ ಸುಭಾಷರು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ರೀತಿಗಳನ್ನು ಕಂಡು ಅಚ್ಚರಿ ಮತ್ತು ಖುಷಿ ಪಡುತ್ತಿದ್ದ. ತೀವ್ರತರವಾದ ಹೋರಾಟವನ್ನು ಕಂಡು ಸ್ವಾತಂತ್ರ್ಯವನ್ನು ಪಡೆಯುವ ದಿನಗಳು ಹತ್ತಿರವಾಗುತ್ತಿವೆ ಎಂಬ ಮುನ್ಸೂಚನೆ ಅವನಿಗೆ ಸಿಗತೊಡಗಿತು.

ಗಾಂಧೀಜಿ ಮುದುಕನ್ನ ನೋಡಿದರೆ ನಾವೆಷ್ಟು ಬೆಚ್ಚಗ ಮನೆಯೊಳಗಿದ್ದೀವಿ ಅಂತ ನನ್ನ ಮಗನ ಹಂಗ ಕಿಡಿಹೊತ್ತಿ ಬೆಂಕಿ ಹಂಗ ಉರಿಬೇಕು. ಅದರೊಳಗ ಈ ಬಿಳಿ ಸರ್ಕಾರ ಸುಟ್ಟು ಬೂದಿಯಾಗಬೇಕು. ಅಂದಾಗ ಮಾತ್ರ ನಮಗೆ ಸ್ವಾತಂತ್ರ್ಯ ಸಿಗೋದು ಎಂದು ಆವೇಶಭರಿತನಾಗಿ ಮಾತನಾಡುತ್ತ ಕಣ್ತುಂಬಿಕೊಂಡು ಮೌನವಾದಳು" (ಮ.ಸಂ. 308) ಇವು ಕಲಾವತಿಗೆ ಇರುವ ದೇಶಪ್ರೇಮದ ಉತ್ತುಂಗತೆ ಎಂದೇ ಹೇಳಬಹುದು. ದೇಶಪ್ರೇಮ ಬಂದಾಗ ಅವಳ ಅವ್ವ ಚಿನ್ನಕ್ಕನನ್ನು ಮೀರಿಸುವಂತಹ ಆತ್ಮಸಮರ್ಪಣಾ ಭಾವ. ದೇಶಪ್ರೇಮವೆಂಬ ಉನ್ಮಾದದಲ್ಲಿ ಮುಳುಗಿದ್ದ ಭರತನಿಗೆ ಬ್ರಿಟಿಷ್ ನೌಕಾಧಿಕಾರಿಯಾಗಿದ್ದ ಎಡ್ವರ್ಡ್‌ನ ಮಗಳು ಗ್ರೇಸಿಯ ಗೆಳತಿಯಾಗಿದ್ದಳು. ಗ್ರೇಸಿ ಕೂಡಾ ಮಾನವೀಯತೆಯುಳ್ಳ ಸದ್ಗುಣ, ಸನ್ನಡತೆಯುಳ್ಳ ಸುಂದರ ಹುಡುಗಿಯಾಗಿದ್ದಳು. ಭರತನ ದೇಶಪ್ರೇಮ, ನೆಲ, ಜಲದ ಬಗ್ಗೆ ಇರುವಂತಹ ಅಭಿಮಾನ ಕಂಡು ನಿಬ್ಬೆರಗಾಗಿದ್ದಳು.

ಗ್ರೇಸಿಯ ಹುಟ್ಟುಹಬ್ಬಕ್ಕೆ ಆಹ್ವಾನಿಸಿದ್ದ ಎಲ್ಲ ಗೆಳೆಯರೂ ಜೊತೆಗೆ ಭರತನು ಬಂದಿದ್ದನು. ಅವರ ಮನೆಯ ವೈಭೋಗ, ನಮ್ಮ ದೇಶದ ಮುಖಂಡರು, ಪಿತೂರಿಗಾರರು, ಕುತಂತ್ರ ರಾಜಕೀಯ ವ್ಯಕ್ತಿಗಳನ್ನು ಕಂಡು ಅಸಹ್ಯಪಟ್ಟು, ಹುಟ್ಟುಹಬ್ಬದ ಶುಭಾಷಯಗಳನ್ನು ತಿಳಿಸಿ ಬಿಳಿಯ ವ್ಯಕ್ತಿಗಳ ಕಪಟ, ಮೋಸ, ಕುತಂತ್ರವನ್ನು ಧಿಕ್ಕರಿಸಿ ಹೊರನಡೆದರು.

ಓದಿನಲ್ಲಿ ನಿರಾಸೆ ಹೊಂದುತ್ತಿದ್ದ ಭರತ್ ಒಂದು ವರ್ಷ ಪರೀಕ್ಷೆಗೆ ಕೂರದೇ ವ್ಯರ್ಥವಾಗಿಸಿಕೊಂಡಿದ್ದ "ಸುಭಾಷ್ ಚಂದ್ರರ ಆರ್ಮಿ ಸೇರಲು ಹವಣಿಸುತ್ತಿದ್ದ. ಸುಭಾಷರು 30,000 (ಮೂವತ್ತು ಸಾವಿರ) ಯೋಧರೊಂದಿಗೆ ಜಪಾನಿನ ಸಹಕಾರದೊಂದಿಗೆ ಹಡಗುಗಳು, ಸಬ್‌ಮೆರೀನ್‌ಗಳ ಮೂಲಕ ಭಾರತದ ಕಡೆ ಬರತೊಡಗಿದ್ದು, ಮೊದಲು ಅಂಡಮಾನ್ ನಿಕೋಬಾರ್ ದ್ವೀಪಗಳ ಮೇಲೆ ಎರಗಿ ಅಲ್ಲಿ ಅಧಿಕಾರ ನಡೆಸುತ್ತಿದ್ದ ಬ್ರಿಟೀಷರ ಮೇಲೆ ಗುಂಡಿನ ಮಳೆಗರೆದು ಆ ದ್ವೀಪಗಳನ್ನು ವಶಪಡಿಸಿಕೊಂಡದ್ದು ನಂತರ ಸುಭಾಷ್ ಚಂದ್ರ ಬೋಸರು ದ್ವೀಪದ ಮೇಲೆ ಹೆಜ್ಜೆಯೂರಿ ಧ್ವಜ ಹಾರಿಸಿದ್ದು ತಿಳಿದು ಭರತ್ ಸಂಭ್ರಮಪಟ್ಟ. ತಾನೇ ಅಲ್ಲಿ ಹೆಜ್ಜೆಯೂರಿದಷ್ಟು ಕುಣಿದ ಕುಪ್ಪಳಿಸಿದ (ಮ.ಸಂ. 317)

ಶಿವಲಿಂಗನ ಜೀತದಾಳು ಈರ್‍ಯಾನ ಹೆಂಡತಿ ಮಾದೇವಿಯ ಮೇಲೆ ನಡೆಯುವ ಪೊಲೀಸರ ಅತ್ಯಾಚಾರದ ಯತ್ನವನ್ನು ಅವಳು ದಿಟ್ಟತನದಿಂದ ಹೋರಾಡಿ ತನ್ನ ಮಾನ ರಕ್ಷಿಸಿಕೊಳ್ಳುತ್ತಾಳೆ. ಗಾಂಧೀಜಿಯವರು ಆರಂಭಿಸಿದ್ದ ಚಲೇಜಾವ್ ಚಳುವಳಿ ಕಾಳ್ಗಿಚ್ಚಿನಂತೆ ಹಬ್ಬಿತ್ತು. ಎಲ್ಲೆಲ್ಲೂ ಬಿಳಿಯರ

ಸರ್ಕಾರವನ್ನು ಬುಡಮೇಲು ಮಾಡುವ ಹಿಂಸಾತ್ಮಕ ಕೃತ್ಯಗಳಲ್ಲಿ ಹೆಚ್ಚಾಗಿ ರೈತರು, ವಿದ್ಯಾರ್ಥಿಗಳು ತೊಡಗಿಕೊಂಡಿದ್ದರು.

ಮಳೆ ಬರಲಿ, ಬಿಡಲಿ, ಸರಕಾರಕ್ಕೆ ಕಂದಾಯ ಕಟ್ಟುವ ಪದ್ಧತಿಯನ್ನು ಭರತನು ತನ್ನೂರಿನ ಜನರನ್ನು ಒಗ್ಗೂಡಿಸಿಕೊಂಡು ಸರ್ಕಾರದ ವಿರುದ್ಧ ಸಿಡಿದೇಳುವುದು ಮತ್ತು ತೆರಿಗೆ ಕಟ್ಟಬಾರದೆಂದು ಊರಿನಲ್ಲಿ ಡಂಗುರ ಸಾರಿಸುವುದು ಭರತನ ದಿಟ್ಟತನ ದೇಶಪ್ರೇಮ, ರೈತಪರ ಕಾಳಜಿ, ನಾಯಕತ್ವದ ಗುಣದ ಗುರುತುಗಳು ಎಂದೇ ಹೇಳಬಹುದು.

ಆನಂತರ ಬಿಳಿಯ ಸರ್ಕಾರದ ಅಧಿಕಾರಿಗಳೂ ಬಂದು ಶಿವಲಿಂಗುವಿನ ಮನೆಯನ್ನು ಜಪ್ತಿ ಮಾಡುವುದರ ಮೂಲಕ ಮಹದೇವಪುರವನ್ನು ಲೂಟಿ ಮಾಡುತ್ತಾರೆ. ಶಿವಲಿಂಗು, ಭರತನೂ ಸೇರಿದಂತೆ ಮಹದೇವಪುರದ ದೇಶಪ್ರೇಮಿಗಳ ಗುಂಪು ಬೆಟ್ಟಗುಡ್ಡ, ಹಳ್ಳಕೊಳ್ಳ , ಕಾಡುಮೇಡುಗಳಲ್ಲಿ ಭೂಗತರಾಗಿ, ರಾತ್ರಿ ವೇಳೆ ಬ್ರಿಟೀಷರಿಗೆ ಉಪಟಳ ನೀಡುತ್ತಿರುತ್ತಾರೆ. ತಪ್ಪಿಸಿಕೊಂಡು ಹೋಗುವಾಗ ಶಿವಲಿಂಗುವಿನ ಕಾಲಿಗೆ ಗುಂಡೇಟು ಬೀಳುತ್ತದೆ. ನೋವನ್ನು ಸಹಿಸಲಾರದಂತ ಪೆಟ್ಟಾಗಿ ನಡೆಯಲು ಹರಸಾಹಸ ಪಡುತ್ತಿರುವಾಗ ಅಲ್ಲಿಯೇ ಕಾಣಿಸುತ್ತಿದ್ದ ಕಲ್ಲುಗಳ ಸಂದಿಯಲ್ಲಿ ಎಲ್ಲರೂ ಅಡಗಿ ಕುಳಿತಿರುವಾಗ ಶಿವಲಿಂಗಪ್ಪನ ಆಜ್ಞೆಯಂತೆ ಮತ್ತೆ ತಪ್ಪಿಸಿಕೊಳ್ಳಲು ಯತ್ನ ನಡೆಯುತ್ತದೆ.

ಶಿವಲಿಂಗು ಕಾಲನ್ನು ಎಳೆದುಕೊಂಡು ತಪ್ಪಿಸಿಕೊಳ್ಳಲು ಪ್ರಯತ್ನಿಸಿದಾಗ, ಫೌಜುದಾರ ಜೋರಾಗಿ 'ನಿಂತುಕೋ' ಎಂದರೂ ಮುಂದುವರೆಯುತ್ತಿರುವಾಗ ಪಿಸ್ತೂಲು ತವಿಗೆದು ಗುರಿಯಿಟ್ಟು ಹೊಡೆದಾಗ ಶಿವಲಿಂಗು ನೆಲಕ್ಕುರುಳಿದ. ಪೊಲೀಸನೊಬ್ಬ ಬೆತ್ತದ ಚಡಿಯಿಂದ ಮನಬಂದಂತೆ ಶಿವಲಿಂಗುವನ್ನು ಥಳಿಸಿದ.

ಆದರೆ ಆ ಫೌಜುದಾರ 'ಜಗದೀಶನೆ (ತಂಗಿಯ ಮಗ) ಆಗಿರುವುದು ದುರಂತ. ಹತ್ತಿರ ಬಂದು ಮಾವನನ್ನು ಸಂತೈಸಿ, ಮಾವನ ಕಾಲು ಹಿಡಿದು ರಕ್ತ ಒರೆಸತೊಡಗಿದಾಗ ಭರತ ಮತ್ತು ಸಹಚರರು ತಪ್ಪಿಸಿಕೊಳ್ಳುತ್ತಿರುವ ದಾರಿಯನ್ನು ಮತ್ತು ಅವರನ್ನು ಪೊಲೀಸರು ಬೆನ್ನಟ್ಟುತ್ತಿರುವುದನ್ನು ಶಿವಲಿಂಗು, ಜಗದೀಶನಿಗೆ ತೋರಿಸುತ್ತಾನೆ. ಈಗೇನು ಮಾಡುವುದೆಂದು, ಹಾಗೂ ಬೆನ್ನಟ್ಟಿರುವ ಪೊಲೀಸರನ್ನು ಹೇಗೆ ತಡೆಯುವುದೆಂದು ಯೋಚಿಸಿದ. ಹಾಗೆಯೇ ಸರಕಾರಕ್ಕೆ ದ್ರೋಹ ಬಗೆಯಬಾರದೆಂಬ ಕಟ್ಟಪ್ಪಣೆಯನ್ನು ನೆನೆಯುವ ಅವನು ನಿಜಕ್ಕೂ ಇಕ್ಕಟ್ಟಿಗೆ ಸಿಲುಕಿದ್ದ ಒಂದು ಕಡೆ ಸಂಬಂಧ, ಮತ್ತೊಂದು ಕಡೆ ಕರ್ತವ್ಯ. ಎರಡಕ್ಕೂ ದ್ರೋಹ ಬಗೆಯಬಾರದೆಂಬ ಅವನ ಉದಾರವಾದ ಮನಸ್ಥಿತಿ.

ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲೂ ಶಿವಲಿಂಗು 'ಜಗದೀಶ ನಿನ್ನ ಕೆಲಸ ನೀನು ಮಾಡು. ನಮ್ಮ

ಕೆಲಸ ನಾವು ಮಾಡುತ್ತೇವೆ' ಎಂದು ಹೇಳುವ ಮಾತು ಅವನ ಸ್ವಾಭಿಮಾನ, ಕರ್ತವ್ಯಪರ ಯೋಚನೆ, ನಿಲುವು ಮೆಚ್ಚುವಂತದ್ದು. ಕಾದಂಬರಿಯ ಉದ್ದಕ್ಕೂ ಶಿವಲಿಂಗುವಿನ ಇಂತಹ ಗುಣಗಳನ್ನು ನೋಡಬಹುದಾಗಿದೆ.

'ನೀನು ಸರಕಾರದ ಪರವಾಗಿಯೇ ಹೋರಾಡು. ಅವನು ವಿರೋಧವಾಗಿಯೇ ಇರಲಿ' (ಪು.ಸಂ. 345) ಜಗದೀಶನಿಗೆ ಹೇಳುವ ಮಾತುಗಳು ಎಂತಹ ಆದರ್ಶ ಸ್ವಾಭಿಮಾನತೆ ಅವನದು ಎನಿಸಿಬಿಡಬಹುದು.

ನರಳುವ ಶಿವಲಿಂಗುವನ್ನು ದವಾಖಾನೆಗೆ ಸೇರಿಸಲು, ಜಗದೀಶ ಮುಂದಾದಾಗ ಕೈ ಕೊಸರಿ 'ಸರಕಾರಿ ಮನುಷ್ಯ ನೀನು ನನ್ನನ್ನು ಮುಟ್ಟಬ್ಯಾಡ. ನನ್ನನ್ನು ಆ ನಿಮ್ಮ ಸರಕಾರಿ ದವಾಖಾನೆಗೆ ಹಾಕಬ್ಯಾಡ. ಅಲ್ಲಿಯ ಸರಕಾರಿ ಔಷಧಿ, ಗುಳಿಗೆ ನನಗೇನೂ ಬ್ಯಾಡಾ, ಮುಟ್ಟಬ್ಯಾಡ ಬಿಡೋ' (ಪು.ಸಂ. 354) ಎಂದು ನರಳುವಿಕೆಯಲ್ಲೂ ಗರ್ಜಿಸಿದ.

ಮಾವನ ದೇಶಾಭಿಮಾನದ ಪರಮಾವಧಿ ಕಂಡ ಜಗದೀಶನಿಗೆ ಅವನ ಮೇಲೆ ಅವನಿಗೇ ತಿರಸ್ಕಾರ ಬಂದು "ನಾನೊಬ್ಬ ದೇಶಾಭಿಮಾನ ಇಲ್ಲದ ಸ್ವಾರ್ಥಿ' (ಪು.ಸಂ. 355) ಎಂದುಕೊಂಡವನೇ ಹೋರಾಟಗಾರರನ್ನು ಹಿಡಿಯಲಾಗದಂತೆ ಪಿಸ್ತೂಲ್‌ನಿಂದ ತನ್ನ ಕಾಲಿಗೆ ಗುಂಡು ಹೊಡೆದುಕೊಳ್ಳುವ ಸಂದರ್ಭ. ಜಗದೀಶನಲ್ಲೂ ಸ್ವಾತಂತ್ರ್ಯದ ಒಲವು ಸ್ವಾತಂತ್ರ್ಯ ಪ್ರೇಮದ ಮಿಂಚು ಸಂಚಾರವಾದಂತೆ ಭಾಸವಾಗುತ್ತದೆ. ಇದಕ್ಕೆ ಅವನ 'ಜೈ ಭಾರತ್, ಜೈ ಭಾರತ್' ಎನ್ನುವ ನುಡಿಮುತ್ತುಗಳೇ ಸಾಕ್ಷಿಗಳು.

ಜಿನ್ನಾನಿಂದ ದೇಶವನ್ನು ಒಡೆಯುವ ಯತ್ನ ಮತ್ತು ಸ್ವತಂತ್ರ್ಯ ಭಾರತ

ಮುಸ್ಲಿಂ ಲೀಗ್‌ನ ಜಿನ್ನಾನ ದೇಶವನ್ನು ಒಡೆಯುವ ಅಭಿಪ್ರಾಯ ಗಾಂಧೀಜಿ ನೊಂದುಕೊಳ್ಳುವುದು, ಭಾರತದ ನೂತನ ವೈಸ್‌ರಾಯ್ ಆಗಿ 'ಲಾರ್ಡ್ ಮೌಇಂಟ್ ಬ್ಯಾಟನ್' ಪ್ರಮಾಣ ವಚನ ಸ್ವೀಕರಿಸಿದಾಗ ಆಂತರಿಕ ಸಮಸ್ಯೆಗಳಿಗೆ ಪರಿಹಾರ ದೊರೆಯಬಹುದೆಂದು ನಿರೀಕ್ಷೆ ಹುಟ್ಟಿಸುತ್ತದೆ.

ಹಿಂದು-ಮುಸ್ಲಿಮರ ಸಮಸ್ಯೆಯಿಂದ ಭಾರತವನ್ನು ಅನಿವಾರ್ಯವಾಗಿ ಇಬ್ಭಾಗ ಮಾಡಿ ಸ್ವಾತಂತ್ರ್ಯವನ್ನು ಘೋಷಿಸಿಯೇ ಬಿಟ್ಟರು. ಬ್ರಿಟಿಷ್ ಪಾರ್ಲಿಮೆಂಟು ಪಾಕಿಸ್ತಾನವನ್ನು ಬೇರ್ಪಡಿಸಿ ಆಗಸ್ಟ್ 14 ಮಧ್ಯರಾತ್ರಿ ಭಾರತಕ್ಕೆ ಸ್ವಾತಂತ್ರ್ಯ ಘೋಷಿಸಿತು (ಪು.ಸಂ. 361)

ಎಲ್ಲರ ಮನ-ಮನೆಗಳಲ್ಲೂ ಹರುಷದ ಹೊಳೆ ಹರಿದು, ಸ್ವಾತಂತ್ರ್ಯೋದಯದ ಸೂರ್ಯೋದಯವನ್ನು

ಕಂಡು ಕುಣಿದಾಡಿದರು. ಅಂದಿನಿಂದ ಬಂಧಮುಕ್ತಿಗೊಂಡರು. ಕೆಲವು ತಿಂಗಳುಗಳ ನಂತರ ಸ್ವಾತಂತ್ರ್ಯಹೋರಾಟಗಾರ ಶಿವಲಿಂಗುವಿನ ನಿಧನ, ಭರತ ಓದಿನಲ್ಲಿ ಆಸಕ್ತಿ ತೋರಿ, ಪಿಜಿಯಲ್ಲಿ ಚಿನ್ನದ ಪದಕ ಪಡೆದು ಸಂಶೋಧಕನಾಗಿ, ಬೆಂಗಳೂರಿನ ಪ್ರತಿಷ್ಠಿತ ಇಂಡಿಯನ್ ಇನ್ಸ್ಟಿಟ್ಯೂಟ್‌ನಲ್ಲಿ ವಿಜ್ಞಾನಿಯಾಗಿ ಉನ್ನತ ಹುದ್ದೆ ಅಲಂಕರಿಸುತ್ತಾನೆ.

ಭರತನ ಮಗ ಶಶಾಂಕನೂ ಕೂಡ ವಿಜ್ಞಾನಿಯಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಯಾಗಿದ್ದನು.

ಭರತನು ಸ್ವತಂತ್ರ್ಯ ಹೋರಾಟಗಾರರಾದ ತನ್ನ ತಂದೆ ಶಿವಲಿಂಗಪ್ಪ ಹೆಸರಿನಲ್ಲಿ 'ಮಹದೇವಪುರ ಶಿವಲಿಂಗಪ್ಪ ಎಜುಕೇಶನ್ ಸೊಸೈಟಿ'ಯನ್ನು ಕಟ್ಟಿಸಿ ತಾಯಿಯ ಹೆಸರಿನಲ್ಲಿ 'ಕಲಾನಿಕೇತನ ಖಾದಿ ಗ್ರಾಮೋದ್ಯೋಗ'ವನ್ನು ಸ್ಥಾಪಿಸಿ, ನೂರಾರು ವಿದ್ಯಾರ್ಥಿಗಳಿಗೆ ಗ್ರಾಮೀಣ ಮಹಿಳೆಯರಿಗೆ ನೆರವಾದನು.

ಕಾಲ ಕಳೆದಂತೆ ಮಾಲ್ ಸಂಸ್ಕೃತಿ, ವಿಶ್ವಾಸ ಘಾತುಕ ಶಕ್ತಿಗಳು, ಧರ್ಮ–ಜಾತಿ ಸಮುದಾಯ, ವ್ಯಕ್ತಿ, ಅಪನಂಬಿಕೆ ಸ್ವಾರ್ಥ, ಅಭಿಮಾನ್ಯ ಶೂನ್ಯತೆ, ಅಕ್ರಮಣಶೀಲ ಗುಣಗಳು ಹೆಚ್ಚಾಗಿ ಮನುಷ್ಯ ಬದುಕಿನಲ್ಲಿ ನೆಮ್ಮದಿ ಕಳೆದುಕೊಳ್ಳುವಂತಹ ದಿನಗಳು ಹತ್ತಿರವಾಗುತ್ತಿರುವುದನ್ನು ಕಂಡು ಭರತ ಮತ್ತು ವಿಜಯಾ ಬೇಸರ ಪಟ್ಟುಕೊಳ್ಳುತ್ತಿದ್ದರು (ಪು.ಸಂ. 410)

ಸ್ವಾತಂತ್ರ್ಯದ ಪೂರ್ವದಲ್ಲಿ ಒಂದು ರೀತಿಯ ಸಮಸ್ಯೆಗಳು, ತಲ್ಲಣಗಳು ತಲೆದೋರಿದರೆ, ಸ್ವಾತಂತ್ರ್ಯಾನಂತರದಲ್ಲಿ ಒಂದು ರೀತಿಯ ಸಮಸ್ಯೆಗಳು ಹುಟ್ಟಿಕೊಳ್ಳುತ್ತಿದ್ದವು. ಆಧುನೀಕರಣ, ನಗರೀಕರಣದ ಶಿಕ್ಷಣ ಹೆಚ್ಚಾದಂತೆ ಮನುಷ್ಯ ಮಾನವೀಯ ಸಂಬಂಧಗಳನ್ನು ಕಡಿದುಕೊಂಡು, ಸ್ವಾಭಿಮಾನ, ದೇಶಪ್ರೇಮವನ್ನು ಧಿಕ್ಕರಿಸಿ ಯಾಂತ್ರಿಕವಾಗಿ ಬದುಕನ್ನು ಸವೆಸುತ್ತಾನೆ.

ಇದಕ್ಕೆ ಉದಾಹರಣೆಯಾಗಿ ಭರತ ಮತ್ತು ವಿಜಯನ ಮಗ ಶಶಾಂಕ ಉನ್ನತ ವ್ಯಾಸಂಗ ಮಾಡಿ ತನ್ನ ತಂದೆಯಂತೆಯೇ ವಿಜ್ಞಾನಿಯಾದರೂ ಮದುವೆಯ ವಿಷಯದಲ್ಲಿ 'ಎಲಿಸಾ' ಎನ್ನುವ ಲಂಡನ್ ಹುಡುಗಿಯನ್ನು ಇಷ್ಟಪಟ್ಟಿರುವುದಾಗಿ ತಿಳಿಸುತ್ತಾರೆ.

ಇಬ್ಬರಿಗೂ ಒಂದು ಕ್ಷಣ ದಿಗ್ಭ್ರಮೆಯಾಗುತ್ತದೆ. ಆಗ ತಾಯಿ "ಶಶಾಂಕ ನಿನ್ನ ನಿರ್ಣಯ ತಪ್ಪು. ನಾವು ನಮ್ಮ ದೇಶ, ನಮ್ಮ ರೀತಿನೀತಿಗಳೇ ಬೇರೆ ಅವರವೇ ಬೇರೆ (ಪು.ಸಂ. 422) ಎಂದು ಬುದ್ಧಿವಾದ ಹೇಳುತ್ತಾಳೆ.

"ಈಗ ಮತ್ತೆ ಜಾಗತೀಕರಣದ ಉದ್ಯೋಗ ನೆಪ ಮಾಡಿ, ನಮ್ಮ ದೇಶದೊಳಗೆ ಹೇಗೆ ಬರುತ್ತಿದ್ದಾರೋ,

ಹಾಗೇ ನಮ್ಮ ಮನೆಯೊಳಗೂ ಬಂದು ಬಿಡುವಳೇ ಹುಡುಗಿ' ಎಂದು ಹೃದಯ ಭಾರವಾಗಿ ಭರತ್ ಕೇಳುತ್ತಾನೆ (ಪು.ಸಂ. 422) ಭರತನ ಸ್ವಾಭಿಮಾನ, ದೇಶಾಭಿಮಾನಕ್ಕೆ ಬಲವಾದ ಪೆಟ್ಟುಬಿದ್ದಂತಾಯಿತು.

ಕೆಲವೊಮ್ಮೆ ಉದಾರ ಮನಸ್ಸಿನಿಂದ ಒಪ್ಪಿಕೊಳ್ಳಬಾರದೇಕೆ' ಎಂದು ತನ್ನನ್ನು ತಾನೇ ಪ್ರಶ್ನಿಸಿಕೊಳ್ಳುತ್ತಿತ್ತು. ಶಶಾಂಕನ ಮನಸ್ಸು

ಸ್ವತಂತ್ರ ಭಾರತ ನಿನ್ನದಾಯಿತು
ವಿಶಾಲ ಜಗತ್ತು ಅವನದಾಗಲಿ ಎಂಬು ನುಡಿಗಳು ಕೇಳಿದಂತೆ ಭಾಸವಾಗತೊಡಗಿತು

ಕರಿನೀರು ಕಾದಂಬರಿ, ಡಾ. ಲತಾ ಗುತ್ತಿ

ಅಂಕಿತ ಪ್ರಕಾಶನ, ಬೆಂಗಳೂರು

ಅಧ್ಯಾಯ – 4

ಕರಿನೀರು ಕಾದಂಬರಿಯ ವಿಶ್ಲೇಷಣೆ

ಕಾದಂಬರಿಯ ಕಥಾವಸ್ತುವಿನ ವಿಶ್ಲೇಷಣೆ

ಕಾದಂಬರಿಯು ಸ್ವಾತಂತ್ರ್ಯ ಪೂರ್ವೋತ್ತರ ಕಥನವಾಗಿರುವುದರಿಂದ ಸ್ವಾತಂತ್ರ್ಯದ ಹಾದಿಯನ್ನು ಸವೆಸಿದ ಮಹಾನ್ ನಾಯಕರ ಮೇಲೆ ಬೆಳಕು ಚೆಲ್ಲುತ್ತದೆ.

ಕಾದಂಬರಿಯ ನಾಯಕ ಸುಮಾರು ಇಪ್ಪತ್ತು ವರುಷಗಳ ಕಾಲ ಅಂಡಮಾನಿನಲ್ಲಿ ಕಾಲಾಪಾನಿ ಶಿಕ್ಷೆಯನ್ನು ಅನುಭವಿಸಿದಂತಹ ಸಂದರ್ಭದಲ್ಲಿ ಅವನಲ್ಲಿ ಬೃಹತ್ತಾಗಿ ಬೆಳೆದಿದ್ದ ದೇಶಪ್ರೇಮ, ದೇಶಾಭಿಮಾನ ಊರಿಗೆ ಮರಳಿದ ಮೇಲೆ ಮನೆಯವರ ಪ್ರೀತಿ ಅಭಿಮಾನಿಗಳ ಮಧ್ಯೆ ಕಣ್ಮರೆಯಾಗದೆ ಹಸಿರಾಗಿತ್ತು.

ಬೆಳಗಾವಿಗೆ ಭೇಟಿ ಕೊಟ್ಟ ಗಾಂಧೀಜಿಯವರ ಜೊತೆ ಸರೋಜಿನಿ ನಾಯ್ಡು, ಜವಾಹರಲಾಲ್ ನೆಹರು ಅವರನ್ನು ನೋಡಿ ಶಿವಲಿಂಗು ರಾಷ್ಟ್ರಪ್ರೇಮ ಇಮ್ಮಡಿಯಾಯಿತು. ನಂತರದಲ್ಲಿ ಶಿವಲಿಂಗಪ್ಪ ಮಹದೇವಪುರದ ಸುತ್ತಲಿನ ಯುವಕರನ್ನೆಲ್ಲ ಸಂಘಟಿಸಿ ಬ್ರಿಟಿಷರ ವಿರುದ್ಧ ಹೋರಾಟದಲ್ಲಿ ತೊಡಗಿಸಿಕೊಳ್ಳುತ್ತಾರೆ (1)

ಹಳ್ಳಿಯ ಜನರ ಮನಸ್ಸಿನಲ್ಲಿ ಕಾಲಾಪಾನಿ (ಕರಿನೀರು) ಶಿಕ್ಷೆಗೆ ಗುರಿಯಾದವರು ಮತ್ತೆಂದಿಗೂ ಹಿಂದುರುಗಿ ಬರುವುದಿಲ್ಲವೆಂಬ ನಂಬಿಕೆಯನ್ನು ಹೊಂದಿದ್ದವರಿಂದ 20 ವರುಷಗಳ ನಂತರ ಶಿವಲಿಂಗು ತನ್ನೂರಿಗೆ ಮರಳಿ ಬಂದಿದ್ದನ್ನು ನೋಡಿ ಹರುಷ ವ್ಯಕ್ತಪಡಿಸಿ ಸಂತೋಷದ ಕಣ್ಣೀರನ್ನು ಸುರಿಸುತ್ತಾರೆ.

ಹಿಂದಿರುಗಿ ಬಂದಂತಹ ಶಿವಲಿಂಗು ಜೀವನವನ್ನು ಕಟ್ಟಿಕೊಂಡು ಹೊಲ-ಮನೆ ನೋಡಿಕೊಂಡು ಗೌಡಿಕೆ ಮಾಡಿಕೊಂಡು ಸುಖವಾಗಿ ಇರಬಹುದು ಎಂದು ಕುಟುಂಬದವರು, ಸಂಬಂಧಿಕರು ಎಂದುಕೊಳ್ಳುತ್ತಾರೆ. ಆದರೆ ಶಿವಲಿಂಗು ತನ್ನ ಸುಖಜೀವನದ ಹಾದಿ ಹಿಡಿಯದೆ ದೇಶದ ಜನರ ಸುಖಕ್ಕಾಗಿ ಸ್ವಾತಂತ್ರ್ಯ ಹೋರಾಟದ ಹಾದಿಯನ್ನು ಕಂಡುಕೊಳ್ಳುತ್ತಾನೆ.

ಕಾದಂಬರಿಯಲ್ಲಿನ ಕಥಾವಸ್ತುವನ್ನು ಲೇಖಕಿ ಬಹಳ ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ತನ್ನ ಕುಟುಂಬದ ಹಿರಿಯರು ಎನ್ನುವ ತಮ್ಮತನವನ್ನು ಬಿಟ್ಟು ಎಲ್ಲಿಯೂ ವರ್ಣನೆಗೆ ಗುರಿ ಮಾಡದೆ ವೈಭವೀಕರಿಸದೆ ನೈಜ ಚಿತ್ರಣವು ಕಣ್ಣ ಮುಂದೆ ಬರುವಂತೆ ಕಟ್ಟಿಕೊಟ್ಟಿದ್ದಾರೆ.

---

(1) ಡಾ. ಹೆಚ್.ಎಸ್.ಎಂ. ಪ್ರಕಾಶ್ ರವರ ವಿಮರ್ಶಾ ಲೇಖನ 'ಬರಹದ ಓರೆಗಲ್ಲು' ಮಾರ್ಚ್ 2017

ಸ್ವಾತಂತ್ರ್ಯಾನಂತರದ ಏಳನೇ ದಶಕದಲ್ಲಿರುವ ಹಿರಿಯರು ಮತ್ತು ಪ್ರಸಕ್ತ ಕಿರಿಯರಿಗೆಲ್ಲ ಸ್ವಾತಂತ್ರ್ಯ ಸಂಗ್ರಾಮ ಒಂದು ರೋಮಾಂಚನಕಾರಿ ನೆನಪು ಮಾತ್ರ. 'ಬೋಲೋ ಭಾರತ್ ಮಾತಾ ಕೀ ಜೈ' ಎಂಬ ಜೈಕಾರು ಸುಮಾರು ನೂರೈವತ್ತು ವರ್ಷಗಳ ಕಾಲ ಐದು ತಲೆಮಾರುಗಳ ಪ್ರತಿ ಭಾರತೀಯನ ಕೊರಳಿನಿಂದ ಗಟ್ಟಿದನಿಯಾಗಿ ಹೊರಹೊಮ್ಮಿ ತನುಮನಗಳಲ್ಲಿ ಭಾರತೀಯತೆಯನ್ನು ತುಂಬಿಕೊಂಡಿತ್ತು. ಅನನ್ಯ ಹೋರಾಟಗಳ ಮೂಲಕ ಪಡೆದಿರುವ ಸ್ವಾತಂತ್ರ್ಯವನ್ನು ಸಂರಕ್ಷಿಸಿಕೊಳ್ಳಬೇಕಾದ ಕರ್ತವ್ಯವು ನಮ್ಮ ನಿಮ್ಮೆಲ್ಲರದು. ಆ ಕರ್ತವ್ಯವನ್ನು ನೆನಪಿಸುವುದಕ್ಕೋಸ್ಕರವಾಗಿ ಬಂದಿರುವ ಹಾಗಿದೆ ಈ ಕಾದಂಬರಿ [2]

ಸ್ವಾತಂತ್ರ್ಯಕ್ಕಾಗಿ ಸೆಣುವ ಸಲುವಾಗಿ ಕುಟುಂಬವನ್ನು ಹೆಂಡತಿಯ ಕೈಗೊಪ್ಪಿಸಿ ನೇರವಾಗಿ ಚಳುವಳಿಗಳಲ್ಲಿ ಭಾಗವಹಿಸಲು ಮುಂದಾಗುತ್ತಾನೆ. ಕುಟುಂಬವನ್ನು ಅಚ್ಚುಕಟ್ಟಾಗಿ ನಡೆಸಿಕೊಂಡು ಹೋಗುವ ಕಲಾವತಿಯ ಜಾಣ್ಮೆಯನ್ನು ಕಾಣಬಹುದು. ಅಷ್ಟೇ ಅಲ್ಲದೆ ಗಂಡನಿಗೆ ಹೋರಾಟಗಳಿಗೆ ಚಳುವಳಿಗಳಿಗೆ ಭಾಗವಹಿಸಲು ಬೆಂಬಲವನ್ನು ನೀಡುವಂತಹ ಸತಿಧರ್ಮ ಭಾರತದಂತಹ ಹೆಣ್ಣು ಮಕ್ಕಳಿಗಲ್ಲದೆ ಮತ್ಯಾರಿಗಿರಲು ಸಾಧ್ಯ

ಕಾದಂಬರಿಯು ಕೇವಲ ದೇಶಪ್ರೇಮ, ದೇಶಾಭಿಮಾನಕ್ಕೆ ಸೀಮಿತವಾಗದೆ ಬೆಳಗಾವಿ ಪ್ರದೇಶದ ಸಾಂಸ್ಕೃತಿಕ ಆಚರಣೆಗಳು, ಹಬ್ಬಗಳು, ಉತ್ತರ ಕರ್ನಾಟಕದ ಭಾಷಾ ಶೈಲಿಯ ನಿರೂಪಣೆ ಜೊತೆಗೆ ಹದವಾಗಿ ಬವರೆದ ಬೆಂಗಳೂರು ಕನ್ನಡ ಕಾದಂಬರಿಗೆ ಮೆರುಗನ್ನು ತಂದುಕೊಡುತ್ತದೆ.

ಇದರೊಂದಿಗೆ ನವಿರಾಗಿ ಹೆಣೆದಿರುವ ಕಥೆಯಲ್ಲಿ ಪಾತ್ರಗಳು ತೀರಾ ಆಪ್ತವೆನ್ನುವಷ್ಟರ ಮಟ್ಟಿಗೆ ಮನಸ್ಸಿನಲ್ಲಿ ಉಳಿಯುತ್ತವೆ. ಕಾದಂಬರಿಯ ಆರಂಭದಿಂದ ಹಿಡಿದು, ಕಾದಂಬರಿಯುದ್ದಕ್ಕೂ, ಚೆನ್ನಕ್ಕ, ಚೆನ್ನಬಸಪ್ಪಜ್ಜ, ಶೇಷಪ್ಪ ಮಾಸ್ತರರು, ಇವರ ಮಗಳಾದ ಶಾರದಕ್ಕ, ಈರ್ಯಾ, ರಾಯಪ್ಪ ಮಾಸ್ತರರು, ಇವರು ಒಳ್ಳೆಯ ಪಾತ್ರಗಳಾಗಿ ಕಾಣಿಸಿಕೊಂಡರೆ, ದುಷ್ಟಚಟ, ದುರ್ನೀತಿಗಳನ್ನು ಜೀವನದ ಮೌಲ್ಯವಾಗಿರಿಸಿಕೊಂಡಿದ್ದಂತಹ ಸೊದೆಪ್ಪ, ಶೇಷಪ್ಪ ಮಾಸ್ತರರ ಮಗನಾದ ಗೋವಿಂದ, ಕೃಷ್ಣ (ಕಿಟ್ಟ) ನಂತವರು ಕಾದಂಬರಿಯಲ್ಲಿ ಅಲ್ಲಲ್ಲಿ ಕಾಣಿಸಿಕೊಳ್ಳುತ್ತಾರೆ.

ಗಾಂಧಿ ಸಾವರ್‌ಕರರು ಇಂಗ್ಲೆಂಡಿನಲ್ಲಿ ಬ್ಯಾರಿಸ್ಟರ್ (ಕಾನೂನು) ಪದವಿ ಪಡೆದು ಉಚ್ಚ ಸಂಸ್ಕಾರದಲ್ಲಿ ಬವಳೆದವರಾಗಿದ್ದರೂ ಅಸ್ಪಶ್ಯರ ಬಗೆಗಿದ್ದ ಅವರ ಕಾಳಜಿಯನ್ನು ಮತ್ತು ಅವರನ್ನು ಸಮಾಜದಲ್ಲಿ ಸಮಾನತೆಯತ್ತ ತರುವ ಅವರ ಉನ್ನತ ವಿಚಾರಗಳ ಬಗೆಯನ್ನು, ಕಂಡು ತುಂಬಾ ಆಶ್ಚರ್ಯಪಡುತ್ತಿದ್ದ. ಹಾಗೆಯೇ ಕೊಲ್ಲಾಪುರದ ಹಾಗೂ ಮಹಾರಾಜರು ಕೂಡಾ ಇಂಗ್ಲೆಂಡಿನಲ್ಲಿ ಓದಿ ಬಂದವರಾಗಿದ್ದರೂ,

---

[2] ಡಾ. ಹೆಚ್.ಎಸ್.ಎಂ. ಪ್ರಕಾಶ್‌ರವರ ವಿಮರ್ಶಾ ಲೇಖನ

ಬರಹದ ಓರೆಗಲ್ಲು,

ಇವರು ಕೂಡಾ ಅಸ್ಪೃಶ್ಯ ಜನರ ಏಳಿಗೆಗಾಗಿ, ಜೀತಪದ್ಧತಿ ರದ್ದು ಮಾಡುವುದರ ಬಗೆಗಾಗಲಿ, ದೇವದಾಸಿ ಪದ್ಧತಿ ರದ್ದು ಮಾಡುವ, ವಿಧವಾ ವಿವಾಹ ಮಾಡುವ ಕಾರ್ಯ್ದೆಗಳನ್ನು ಜಾರಿಗೆ ತಂದು ಸಮಾಜ ಸುಧಾರಣೆ ಮಾಡುತ್ತಿರುವುದನ್ನು ಕಾದಂಬರಿಯು ಅತ್ಯಂತ ಮಾರ್ಮಿಕವಾಗಿ ಚಿತ್ರಿಸುತ್ತದೆ.

ಇಂತಹ ಘಟನೆಗಳನ್ನು ಗಮನಿಸಿದ ಶಿವಲಿಂಗುವಿಗೆ ತನ್ನೂರಿನಲ್ಲಿರುವ ಸಾಮಾಜಿಕ ಸಮಸ್ಯೆಗಳು ಕಣ್ಮುಂದೆ ಬರತೊಡಗಿದವು. ಜೀತದಾಳು ಹೊಲೆಯರ ಈರ್‍ಯಾ, ಅವನ ತಂಗಿ ದೇವದಾಸಿಯಾಗಿ ಎಲ್ಲಮ್ಮನ ಗುಡ್ಡದಲ್ಲಿರುವ ದೇವಕ್ಕ, ವಿಧವೆ ಶಾರದಾ ಎಲ್ಲರೂ ಕಣ್ಮುಂದೆ ಕಾಣಿಸಿಕೊಂಡರು. ವಅಸ್ತವದಲ್ಲಿ ಇಂತಹವುಗಳನ್ನೆಲ್ಲಾ ಹೇಗೆ ತೊಡೆದು ಹಾಕಬೇಕೆಂದು ಮನಸ್ಸಿನಲ್ಲಿಯೇ ಚಿಂತಿಸುವುದು ಅವನ ಹೃದಯ ವೈಶಾಲ್ಯತೆಯನ್ನು ತಿಳಿಸುತ್ತದೆ.

ಶಿವಲಿಂಗುವಿಗಾದ ಆಧುನಿಕ ಜೀವನ ಶೈಲಿಯ ದರ್ಶನ.

ಶಿವಲಿಂಗು ಬಾಂಬೆಯ ದಾದರ್ ನಗರದ ಆಧುನಿಕ ಜನಜೀವನವನ್ನು ಕಂಡು ನಿಬ್ಬೆರಗಾಗುವ ಚಿತ್ರಣವಂತೂ ಸ್ವಾತಂತ್ರ್ಯ ಪೂರ್ವದಲ್ಲಿಯೇ ಭಾರತ ಇಷ್ಟರಮಟ್ಟಿಗೆ ಆಧುನಿಕತೆಯ ಜೊತೆಜೊತೆಗೆ ಹೆಜ್ಜೆ ಹಾಕುತ್ತಿತ್ತೇ? ಎಂಬ ಪ್ರಶ್ನೆಯನ್ನು ಆಶ್ಚರ್ಯವನ್ನು ಹುಟ್ಟುಹಾಕುತ್ತದೆ.

ವಿಶಾಲವಾದ ರೈಲ್ವೇ ಸ್ಟೇಷನ್ನು ಹೊರಗಡೆ ಅಗಲವಾದ ರಸ್ತೆಗಳು, ಓಡಾಡುವ ವಾಹನಗಳು, ಗಂಡಸರು ಹೆಂಗಸರು ಎನ್ನುವ ಭೇದ ಭಾವವಿಲ್ಲದೆ ಸರಿಸಮವಾಗಿ ನಡೆದಾಡುವ ರೀತಿ, ಹದಿವಯಸ್ಸಿನ ಹುಡುಗರು ಪ್ಯಾಂಟು ಶರ್ಟು ತೊಟ್ಟು ಕಾಲೇಜುಗಳಿಗೆ ಹೊರಟಿರುವ ಅವರ ಹುಮ್ಮಸ್ಸನ್ನು ಕಂಡು ನಿಬ್ಬೆರಗಾಗುವಂತೆ ಮಾಡಿತ್ತು. ವಾಸ್ತವವಾಗಿ ನಗರದ ನೈಜ ಚಿತ್ರಣವನ್ನು ಶಿವಲಿಂಗುವಿಗೆ ಕಟ್ಟಿಕೊಟ್ಟಿತ್ತು.

ಶಾಲೆ, ಕಾಲೇಜು, ಆಫೀಸು, ಫ್ಯಾಕ್ಟರಿಗಳಿಗೆಂದು ಹೋಗುತ್ತಿರುವ ಯುವ ಜನಾಂಗದ ಶಿಸ್ತಿನ ನೋಟ, ಸುಶಿಕ್ಷಿತ ಹೆಂಗಸರು ವಿದೇಶಿ ಬಟ್ಟೆಗಳಿಂದ ಹೊಲಿದ ಉದ್ದನೆಯ ಫ್ರಾಕ್‌ಗಳನ್ನು ತೊಟ್ಟು, ಎತ್ತರದ ಹಿಮ್ಮಡಿಯ ಚಪ್ಪಲಿಗಳು ಹಾಕಿಕೊಂಡು ತುಟಿಗೆ ಕೆಂಪನೆಯ ಬಣ್ಣ ಮುತ್ತಿಕೊಂಡಿದ್ದನ್ನು, ಮತ್ತೆ ಮತ್ತೆ ತುಟಿಗಳಿಂದ ಒತ್ತಿಕೊಳ್ಳುತ್ತ ತುದಿಬೆರಳಲ್ಲಿ ವ್ಯಾನಿಟಿ ಬ್ಯಾಗ್‌ಗಳನ್ನು ಹಿಡಿದುಕೊಂಡು ನಿಂತಿರುವ, ಕುಳಿತಿರುವ, ಮತ್ತು ಮನೆಯಲ್ಲಿ ಬಹುಶಃ ಪೇಪರ್ ಓದಲು ಸಮಯ ಸಿಗದೇ ಇದ್ದವರು ಇಲ್ಲಿ ಓದುತ್ತಾ ಅದರಲ್ಲೇ ಮಗ್ನರಾಗಿದ್ದವರನ್ನು ಪರೀಕ್ಷಾ ಸಮಯವಾದುದರಿಂದ ಕಾಲೇಜು ಹುಡುಗರು ಕೂಡಾ ಗಣಿತ ಸೂತ್ರಗಳನ್ನು ಇಂಗ್ಲೀಷ್‌ನಲ್ಲಿಯೇ ಬಿಡಿಸುವುದನ್ನು ಕಂಡು ಚಕಿತನಾಗುವುದು. ಕೆಲವರು ಸರ್ಕಾರಿ ಆಫೀಸುಗಳಲ್ಲಿ ಬಿಳಿಯರೊಂದಿಗೆ ಕೆಲಸ ಮಾಡುವ ಅವರ ಪ್ಯಾಂಟು, ದೊಡ್ಡ ಕಾಲರ್ ಶರ್ಟು, ಉದ್ದವಾಗಿ ಇಳಿಬಿಟ್ಟ ಟೈ, ಪಾಲೀಶ್ ಮಾಡಿದ ಬೂಟು, ಅದರೊಳಗಿನ ಬಿಳಿಯ ಕಾಲುಚೀಲ,

ಗಂಭೀರವಾಗಿ ಕುಳಿತ ಅಲ್ಲಿನ ಕೆಲವು ಜನಗಳ ಹಾವ-ಭಾವಗಳು ಶಿವಲಿಂಗುವನ್ನು ಬೇರೆಯ ಪ್ರಪಂಚಕ್ಕೆ ಕರೆದೊಯ್ದಿತ್ತು.

ದಾದರ್‌ನಲ್ಲಿರುವ 'ಲಕ್ಷ್ಮೀ ಕಾಟನ್ ಮಿಲ್'ನಲ್ಲಿ ಕಥಾನಾಯಕ ತಮ್ಮ ನೀಲ ಕಂಠ ಕೆಲಸ ಮಾಡುವ ಫ್ಯಾಕ್ಟರಿ ಇಂತಹ ಬೃಹದಾಕಾರದ ಕಟ್ಟಡವನ್ನು ಹೊರನೋಟದಲ್ಲಿಯೇ ನೋಡಿ ದಂಗಾಗುವುದು, ಅದರ ಆಯ, ಅಳತೆಗೆ ಬೆಪ್ಪಾಗಿ ಹೋದಳು. ರಾತ್ರಿ ಪಾಳಿಯಿಂದ ಹೊರಬರುತ್ತಿರುವ ಕಾರ್ಮಿಕರು, ಬೆಳಗಿನ ಪಾಳಿಗೆ ಒಳಗೋಡುತ್ತಿರುವ ಕಾರ್ಮಿಕರು, ಜೋರಾಗಿ ಕೂಗುತ್ತಿರುವ ಸೈರನ್ನುಗಳು, ಅಂಗಳದ ಒಂದು ಬದಿಗೆ ಒಟ್ಟಿರುವ ಹತ್ತಿ ಗಂಟಿನ ದೊಡ್ಡ ದೊಡ್ಡ ಉಂಡೆಗಳ ಗುಡ್ಡ, ಮತ್ತೊಂದು ಬದಿಗೆ ಹತ್ತಿಯ ತೂಗಾಡುವ ಗಂಟುಗಳನ್ನು ಹೊತ್ತು, ಗೇಟು ದಾಟುತ್ತಿರುವ ಟ್ರಕ್‌ಗಳು, ಇವುಗಳೆಲ್ಲದರ ಮೇಲ್ವಿಚಾರಕರು ಕೈಯಲ್ಲಿ ಏನೇನೋ ಕಾಗದ ಪತ್ರಗಳನ್ನು ಹಿಡಿದು ರಭಸದಿಂದ ಇಲ್ಲಿಂದ ಅಲ್ಲಿ ಅಲ್ಲಿಂದ ಇಲ್ಲಿ ಓಡಾಡುವ ಅವರ ರೀತಿಗಳನ್ನು ಕುತೂಹಲದಿಂದ ಶಿವಲಿಂಗು ನೋಡುತ್ತಿದ್ದ ಬಗೆ ಅವನಿಗೆ ನಿಜವಾಗಿಯೂ ಹೊಸ ಪ್ರಪಂಚವನ್ನು ಪ್ರವೇಶಿಸಿದ ಹಾಗೆ ಭಾಸವಾಗುತ್ತಿತ್ತು.

ನೀಲಕಂಠ ಫ್ಯಾಕ್ಟರಿಯಲ್ಲಿ ತಯಾರಾಗುವ ಹತ್ತಿ ಬಟ್ಟೆಗಳು, ಹಾಗು ಅದನ್ನು ಇಂಗ್ಲೆಂಡಿಗೆ ಕಳುಹಿಸುವುದು ಯಂತ್ರಗಳ ಮೂಲಕ ಇನ್ನೂ ಹದಗೊಳಿಸಿ ಬಟ್ಟೆಯನ್ನು ನೇಯುವುದರ ಬಗ್ಗೆ ಹಾಗೂ ಮೊದಲನೇ ದರ್ಜೆಯ ನೂಲು ಅವರು ತೆಗೆದುಕೊಂಡು ಹೋಗ್ತಾರೆ. ಎರಡನೇ ದರ್ಜೆಯ ನೂಲಿನಿಂದ ತಯಾರಿಸುವ ಬಟ್ಟೆಗಳು ನಮಗೆ ಎಂದು ವಿವರಿಸಿದಾಗ, ಶಿವಲಿಂಗು ಕೆಂಡಾಮಂಡಲನಾಗಿ 'ಒಳ್ಳೆಯದೆಲ್ಲಾ ಬ್ರಿಟಿಷರಿಗೆ, ಮಿಕ್ಕಿದ್ದು ನಮಗೆ'ನ ಎಂದು ಅಲ್ಲೂ ತನ್ನ ತಾಯ್ನೆಲಕ್ಕೆ ತನ್ನ ಜನಗಳಿಗೆ ಆಗುತ್ತಿರುವ ಅನ್ಯಾಯದ ವಿರುದ್ಧ ತಿರುಗಿಬೀಳುವುದನ್ನು ಕಾಣಬಹುದು.

ಕಾದಂಬರಿಯು ಸಜ್ಜನಿಕೆಯನ್ನು ಪ್ರತಿ ಹಂತದಲ್ಲಿಯೂ ರೂಢಿಸುವ ಕಡೆಗೆ ಗಮನವೀಯುವುದಲ್ಲದೆ, ಕೆಟ್ಟದ್ದರ ವಿರುದ್ಧ ತಿರುಗಿ ಬೀಳುವ ಉತ್ಸಾಹದಲ್ಲಿ ಅನ್ಯಾಯ, ಅಕ್ರಮ, ಸಮಾಜಘಾತುಕ ಕ್ರಿಯೆಗಳನ್ನು ನಡೆಸಬಾರದು ಎಂಬ ಎಚ್ಚರವನ್ನು ಮಾಡಿಸುತ್ತದೆ.

ಇಲ್ಲಿ ಶಿವಲಿಂಗುವಿಗೆ ಆ ಎಚ್ಚರಿಕೆಯ ಜೊತೆಗೆ, ಸ್ವಾತಂತ್ರ್ಯ ಪ್ರೇಮವನ್ನು ಮೈಗೂಡಿಸಿಕೊಳ್ಳುವುದರ ಮೂಲಕ ಸಂಪೂರ್ಣವಾಗಿ ತನ್ನನ್ನು ತಾನು ಭಾರತದ ಮಣ್ಣಿನ ಸೇವೆಗೆ ಮುಡಿಪಾಗಿಸಿಕೊಳ್ಳುತ್ತಾನೆ.

ಅಷ್ಟೇ ಅಲ್ಲದೆ, ತನ್ನ ಕುಟುಂಬದವರು ಅಂದರೆ ಮಗ ಭರತ ಮತ್ತು ಹೆಂಡತಿ ಕಲಾವತಿ ಇವರೂ ಕೂಡಾ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕುತ್ತಾರೆ. ಕಲಾವತಿ ಗಾಂಧೀಜಿಯ ಕನಸನ್ನು ಅಂದರೆ ಸ್ವಾವಲಂಬಿ ಜೀವನವನ್ನು ಊರಿನ ಹೆಣ್ಣುಮಕ್ಕಳ ಮೂಲಕ ನನಸಾಗಿಸುವ ಮೂಲಕ ಆದರ್ಶವನ್ನು

ಮೆರೆಯುತ್ತಾಳೆ.

ಮತ್ತೊಂದು ವಿಶೇಷವೆಂದರೆ ಎಲ್ಲೋ, ಮಹಾತ್ಮರು ಆಡಿದ ಮಾತು, ಮಾಡಿದ ಕೆಲಸ, ಬೆಳಗಾವಿಯ ಪ್ರದೇಶದ ಪುಟ್ಟ ಊರಿನ ಜನರ ಮನಸ್ಸಿನ ಮೇಲೆ ಮಾಡಿದ ಪರಿಣಾಮವೇನು ಎಂಬುದು ಕಾದಂಬರಿಯ ನಾಯಕ ಸ್ವಾತಂತ್ರ್ಯ ಸಂಗ್ರಾಮದ ಘಟನೆಗಳಿಗೆ ಪ್ರತಿಕ್ರಿಯೆ ತೋರುತ್ತ ಊರ ಮನಸ್ಸು ತಿದ್ದುತ್ತಾ ಇಡೀ ಕಾದಂಬರಿಯು ಕರ್ನಾಟಕದ ಬಯಲು ಸೀಮೆಯ ಒಂದು ಹಳ್ಳಿಯಲ್ಲಿ ಸ್ವಾತಂತ್ರ್ಯ ಸಂಗ್ರಾಮ ರೂಪುಗೊಂಡ ಬಗೆಯ ಚಿತ್ರಣವನ್ನು ಒದಗಿಸುತ್ತದೆ.

ಹೀಗೆ ಕಥೆ ಬಹಳ ಕುತೂಹಲಕಾರಿಯಾಗಿ, ಆದರೆ ಅತ್ಯಂತ ಸಹಜವಾಗಿ ಬೆಳವಣಿಗೆಯನ್ನು ಪಡೆಯುತ್ತಾ ಮುಂದೆ ಸಾಗುತ್ತದೆ. ಎಲ್ಲಿಯೂ ದಿಢೀರ್ ಬೆಳವಣಿಗೆಗಳಿಲ್ಲದೆ ಅದು ಹೇಗೆ ನಡೆದಿದೆಯೋ ಹಾಗೆಯೇ ಒಂದೇ ಗತಿಯಲ್ಲಿ ನಿರೂಪಣೆ ಸಾಗುತ್ತದೆ. ಇದಕ್ಕೆ ಕಾರಣವೇನೆಂದರೆ ಲೇಖಕಿಯವರು ಸಾಕಷ್ಟು ವರ್ಷಗಳವರೆಗೆ ತಮ್ಮ ಸಂಬಂಧಿಗಳನ್ನು ಭೇಟಿ ಮಾಡಿ ಊರಿನವರನ್ನು ಭೇಟಿ ಮಾಡಿ ಎಲ್ಲ ವಿವರಗಳನ್ನು ಸಂಗ್ರಹಿಸಿ, ಉತ್ತಮವಾಗಿ ಪೋಣಿಸಿ ಕಥೆಯನ್ನು ಬರೆದಿದ್ದಾರೆ [(3)].

ಕೃತಿಯಲ್ಲಿ ಪುಟದಿಂದ ಪುಟಕ್ಕೆ, ಸನ್ನಿವೇಶದಿಂದ ಸನ್ನಿವೇಶಕ್ಕೆ ಎಷ್ಟು ತಾಳ ಮೇಳವಿದೆಯೆಂದರೆ ಎಲ್ಲಿಯೂ ಭಂಗವಾಯಿತೆನಿಸುವುದಿಲ್ಲ. ಬಳಸಿದ ಭಾಷೆ ಬೆಳಗಾವಿಯ ಕನ್ನಡವಾದರೂ ಬೆಂಗಳೂರಿನ ಪಾಲಿಶ್ ಇದೆ (4) ಇನ್ನು ಸೃಷ್ಟಿಸಿದ ಪಾತ್ರಗಳು ಕಾಲ್ಪನಿಕವಾಗಿರದೇ ನೈಜ ಚಿತ್ರಣವೇ ಕಣ್ಣಿಗೆ, ಮನಸ್ಸಿಗೆ ತಾಗುವ ಹಾಗೆ. ಅಪರಿಚಿತತೆಗೆ ಎಡೆಮಾಡಿಕೊಡದೇ ಗಂಭೀರವಾಗಿ ಸಾಗುತ್ತದೆ.

ಪ್ರತಿಯೊಂದು ಪಾತ್ರಗಳನ್ನು ಗಮನಿಸಬಹುದು. ತನ್ನ ಕುಟುಂಬದವರು, ತನ್ನೂರಿನವರು ಎಂದು ಅತಿ ವಿಶ್ವಾಸಕ್ಕೆ ತೆಗೆದುಕೊಳ್ಳದೇ ಎಲ್ಲೆಲ್ಲಿ ಎಷ್ಟನ್ನು ಹೇಳಬೇಕೋ ಅಷ್ಟನ್ನೇ ಹೇಳಿ ಉತ್ಪ್ರೇಕ್ಷೆಗೆ ಒಳಪಡಿಸದೆಯಿರುವುದು ಡಾ. ಲತಾಗುತ್ತಿಯವರ ಚಾತುರ್ಯಕ್ಕೆ ಹಿಡಿದ ಕನ್ನಡಿಯಾಗಿದೆ.

---

3. ಓ.ಎಲ್. ನಾಗಭೂಷಣ ಸ್ವಾಮಿ ಕರಿನೀರು ಕಾದಂಬರಿಯ ಮುನ್ನುಡಿಯಿಂದ ಆಯ್ಕೆಮಾಡಿಕೊಂಡ ಸಾಲುಗಳು.

4. ಡಾ. ಹೆಚ್.ಎಸ್.ಎಂ. ಪ್ರಕಾಶ್ ಅವರ ವಿಮರ್ಶಾ ಲೇಖನ, ಮಾರ್ಚ್–ಏಪ್ರಿಲ್ 2017 ಸಂಕ್ರಮಣ

ಅಧ್ಯಾಯ – 5

ಕಾದಂಬರಿಯಲ್ಲಿ ಸ್ವಾತಂತ್ರ್ಯಕ್ಕಾಗಿ ಸೆಣಸುವ ಪಾತ್ರಗಳು

ಪ್ರಮುಖ / ಗಮನ ಸೆಳೆಯುವ ಪಾತ್ರಗಳು

ಕಾದಂಬರಿಯಲ್ಲಿ ಸ್ವಾತಂತ್ರ್ಯಕ್ಕಾಗಿ ಸೆಣಸುವ ಪಾತ್ರಗಳು

ಕಾದಂಬರಿಯುದ್ದಕ್ಕೂ ಸ್ವಾತಂತ್ರ್ಯಕ್ಕಾಗಿ ಹೋರಾಡುವ, ಜೀವ–ಜೀವನವನ್ನು ಮುಡಿಪಿಡುವ ಸೆಣಸುವ ಪಾತ್ರಗಳಿಗೇನೂ ಕೊರತೆಯಿಲ್ಲ. ಆರಂಭದಲ್ಲಿ ಚಿನ್ನಕ್ಕಳಿಂದ ಹಿಡಿದು, ಕಾದಂಬರಿಯ ಅಂತ್ಯದವರೆಗೂ ಅಂದರೆ ಭರತನವರೆಗೂ ಸುಮಾರು ಪಾತ್ರಗಳು ಬಂದು ಹೋಗುತ್ತವೆ.

ಚಿನ್ನಕ್ಕ :

ಇವಳು ಕಾದಂಬರಿಯ ಆರಂಭದಲ್ಲಿ ಕಾಣಿಸಿಕೊಳ್ಳುವ ಮಹಾನ್ ಸ್ವಾಭಿಮಾನಿ ಮತ್ತು ಬ್ರಿಟಿಷರ ವಿರುದ್ಧ ದನಿಯೆತ್ತಿ, ಅವರಿಂದ ಅವಮಾನಕ್ಕೆ ಒಳಗಾಗಿ, ಆತ್ಮಹತ್ಯೆ ಮಾಡಿಕೊಂಡು ಸ್ವಾತಂತ್ರ್ಯ ಹೋರಾಟದ ಕಿಚ್ಚನ್ನು 'ಶಿವಲಿಂಗು' ಎನ್ನುವ ಎಳೆಯ ಪ್ರಾಯದ ಹುಡುಗನಿಗೆ ಹಚ್ಚಿ, ಸ್ವಾಭಿಮಾನವನ್ನು ಹುಟ್ಟಿಸಿರುತ್ತಾಳೆ. ಇದೆಲ್ಲ ನಮ್ಮ ಹೊಲಗದ್ದೆ, ನಿಮ್ಮದೇನು? ಎನ್ನುವಂತೆಯೇ ಅವಳ ದಿಟ್ಟ ಉತ್ತರಗಳಿಗೆ ಬ್ರಿಟೀಷರು ಉತ್ತರಿಸಲಾರದೆ ಸೋತು, ಅಸಹಾಯಕರಾದಾಗ, ಅವಳನ್ನು ಅವಮಾನಿಸಲು ಮುಂದಾಗುತ್ತಾರೆ. ಉಸಿರಿರುವವರೆಗೂ 'ಇದು ನನ್ನ ಹೊಲ, ನನ್ನ ಊರು, ನಾ ಜೀವಂತ ಇರುವವರೆಗೂ ಇಲ್ಲಿ ಬರುವವಳೇ. ನಿಮ್ಮಂಥವರ ಉಪಟಳ, ಉಡಾಳತನ ಹೆಚ್ಚಾತಂದ್ರ ಕುಡಗೋಲಿಂದ ಕೊಚ್ಚಿ–ಕೊಚ್ಚಿ ಕೊಂದಹಾಕ್ತೇನೆ' ಎನ್ನುವ ಅವಳ ವೀರಾವೇಶದ ಮಾತುಗಳು ಎಂತಹವರ ಮನಸ್ಸಿನಲ್ಲಿಯೂ ಸ್ವಾತಂತ್ರ್ಯದ ಬೀಜವನ್ನು ಬಿತ್ತುತ್ತಿತ್ತು. ಅದರಲ್ಲೂ ಸೋದರ ಸಂಬಂಧಿಯಾದ ಶಿವಲಿಂಗುವಿನ ಮೇಲೆ ಮನಸ್ಸಿನಾಳಕ್ಕೆ ಇಳಿದು ಬೇರು ಬಿಟ್ಟಿದ್ದವು.

ಶಿವಲಿಂಗು :

ಚಿನ್ನಕ್ಕಳಿಗಾದ ದೌರ್ಜನ್ಯ ಅವಮಾನ ಮತ್ತು ಸಾವನ್ನು ಸಹಿಸಲಾರದೇ ಶಿವಲಿಂಗು ರೊಚ್ಚಿಗೆದ್ದು ಬ್ರಿಟಿಷ್ ಅಧಿಕಾರಿಯನ್ನು ಕೊಲ್ಲಲು ಮುಂದಾಗಿ ಗುರಿತಪ್ಪಿ ಅವನ ಹೆಂಡತಿಯನ್ನು ಸಾಯಿಸುತ್ತಾನೆ. ಮುಂದೆ ಸುಮಾರು 20 ವರುಷಗಳ ಕಾಲ 'ಕರಿನೀರು' ಶಿಕ್ಷೆಗೊಳಗಾಗಿ ನಂತರ ಬಿಡುಗಡೆಯಾಗಿ, ಚಂದನೆಯ ಬದುಕು ಕಟ್ಟಿಕೊಂಡು, ಇಡೀ ಕುಟುಂಬವೇ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಿಂದೇಳುತ್ತದೆ. ಬ್ರಿಟೀಷರ ಬೂಟುಕಾಲು, ಲಾಠಿ, ಬಂದೂಕುಗಳಿಗೆ ಜಗ್ಗದೇ ಎದೆಯೊಡ್ಡಿ ನಿಲ್ಲುವ ಇವನ ಧೈರ್ಯ, ಮತ್ತು ಹೋರಾಟದ ಕಿಚ್ಚನ್ನು ಮೆಚ್ಚುವಂತಹದ್ದು. ಕಾದಮಬರಿಯ ಆರಂಭದಿಂದ, ಅಂತ್ಯದವರೆಗೆ ಶಿವಲಿಂಗು ಅಥವಾ ಶಿವಲಿಂಗೇಗೌಡನ ಪಾತ್ರ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಲೇ ಇರುತ್ತಾನೆ.

ಚೆನ್ನಬಸಪ್ಪಜ್ಜ :

ಶಿವಲಿಂಗುವಿನ 'ತಾತ' ಚೆನ್ನಬಸಪ್ಪಜ್ಜ. ಸ್ವಾತಂತ್ರ್ಯದ ಹೋರಾಟ, ಚಳುವಳಿ, ಪ್ರತಿಭಟನೆಯಲ್ಲಿ ನೇರವಾಗಿ ತೊಡಗಿಸಿಕೊಳ್ಳದಿದ್ದರೂ ಅಪಾರವಾದ ದೇಶಾಭಿಮಾನವನ್ನು ಕುರಿತು ಮನೆಯ ಮೊಮ್ಮಕ್ಕಳಿಗೆ ಹಾಗೂ ಸುತ್ತಮುತ್ತಲಿನವರಿಗೆ ಕತೆಯ ರೂಪದಲ್ಲಿ ಹೇಳುತ್ತಿದ್ದುದು ವಿಶೇಷ. ಪ್ರಥಮ ಸ್ವಾತಂತ್ರ್ಯ ಸಂಗಾಮ, ಕಿತ್ತೂರು ರಾಣಿ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಮಹಾತ್ಮ ಗಾಂಧೀಜಿ ಇನ್ನೂ ಮುಂತಾದ ರಾಷ್ಟ್ರ ನಾಯಕರುಗಳ ಬಗ್ಗೆ ಹಾಗೆ ಬ್ರಿಟೀಷರ ವಿರುದ್ಧ ದಂಗೆಯೇಳುತ್ತಿದ್ದ ಸ್ವಾತಂತ್ರ್ಯಾಭಿಮಾನಿಗಳ ಬಗ್ಗೆ ವಿವರವಾಗಿ ತಿಳಿಹೇಳುತ್ತಿದ್ದರು.

ರಾಯಪ್ಪ ಮಾಸ್ತರರು ಮತ್ತು ಶೇಷಪ್ಪ ಮಾಸ್ತರರು:

ಇವರು ಶಿವಲಿಂಗುವಿನ ಶಾಲಾ ಶಿಕ್ಷಕರಾಗಿದ್ದರು. ಶಿಕ್ಷಣದ ಜೊತೆಗೆ ಸ್ವಾತಂತ್ರ್ಯದ ಬಗ್ಗೆ ತಿಳಿಸಿ ಹೇಳುತ್ತಿದ್ದರು. ಬರಿಟೀಷರನ್ನು ಹೇಗೆ ಹೊರದೂಡಬೇಕು. ಸ್ವಾತಂತ್ರ್ಯಕ್ಕೆ ಹೇಗೆ ಸಜ್ಜಾಗಬೇಕು ಎಂದು ತಿಳಿಸುತ್ತಿದ್ದರು. ಅದರಲ್ಲೂ ಶೇಷಪ್ಪ ಮಾಸ್ತರರು ಸಂಪೂರ್ಣ ಬೆಂಬಲವನ್ನು ಕೊಟ್ಟಿದ್ದರು. ಹಾಗೂ ಅವರ ಮಗಳಾದ ಶಾರದಕ್ಕನನ್ನು ಬೆಳಗಾವೀಲಿ ಗಾಂಧೀಜಿಯವರ ಭಾಷಣಗಳನ್ನು ಕೇಳಿ, ಕಣ್ಣಾರೆ ಕಂಡು ತನ್ನ ಒಡವೆಗಳನ್ನು ಕೊಟ್ಟು ಬಂದಿರುತ್ತಾಳೆ. ಈ ರೀತಿಯಲ್ಲಿ 'ಅವರು ಸ್ವಾತಂತ್ರ್ಯಕ್ಕಾಗಿ ತಮ್ಮ ಬೆಂಬಲವನ್ನು ಸೂಚಿಸುತ್ತಿದ್ದರು.

ಗಾಂಧೀಜಿ, ಸಾವರಕರ್, ಸುಭಾಷ ಚಂದ್ರಬೋಸ್, ತಿಲಕರು, ಲಜಪತರಾಯರು:

ರಾಷ್ಟ್ರಮಟ್ಟದ ನಾಯಕರುಗಳಾಗಿದ್ದ ಇವರು ಅವರದೇ ಆದ ವಿಭಿನ್ನ ಶೈಲಿಯಲ್ಲಿ ಹೋರಾಟಕ್ಕೆ ಇಳಿದಿದ್ದರು. ಗಾಂಧೀಜಿಯವರು ಅಹಿಂಸಾ ಮಾರ್ಗದಿಂದ ಹೋರಾಟ ಮಾಡುತ್ತಿದ್ದರು. ಅಸಹಕಾರ ಚಳುವಳಿಯನ್ನು ಕೈಗೊಳ್ಳುತ್ತಾರೆ. ಗಾಂಧೀಜಿ ಮೊದಲು ಸತ್ಯಾಗ್ರಹ ಆರಂಭಿಸಿದ್ದು, ಆಫ್ರಿಕಾ ದೇಶದಿಂದ, ಅಹಿಂಸೆ ಮತ್ತು ಸತ್ಯಾಗ್ರಹದಿಂದ ಸ್ವಾತಂತ್ರ್ಯ ಪಡೆಯುವುದು ಇವರ ಗುರಿಯಾಗಿತ್ತು.

ಸೆರೆಮನೆಯ ಸರಳುಗಳ ಹಿಂದೆಯೇ ದೇಶದಲ್ಲಿ ನಡೆಯುತ್ತಿದ್ದಂತಹ ಚಳುವಳಿ ಹೋರಾಟಗಳ ಬಗ್ಗೆ ಮಾಹಿತಿಯನ್ನು ಪಡೆದುಕೊಂಡು, ಹೋರಾಟದ ಸಲುವಾಗಿ ಜೈಲಿಗೆ ಬಂದಿರುವ ಕೈದಿಗಳಿಗೆ ಹುರಿದುಂಬಿಸುತ್ತಿದ್ದರು. ಮತ್ತು ದೇಶದ ಅವ್ಯವಸ್ಥೆಯ ಬಗ್ಗೆ, ಬ್ರಿಟೀಷರ ಪಿತೂರಿಗಳ ಬಗ್ಗೆ ಚರ್ಚಿಸುವ ಮೂಲಕ ತಿಳಿಸುತ್ತಿದ್ದರು. ತಿಲಕರು ಲಜಪತರಾಯರು "ರಾಷ್ಟ್ರೀಯ ಕಾಂಗ್ರೆಸ್ ಅನ್ನು ಹುಟ್ಟುಹಾಕಿದ್ದರು. ಆ ಮೂಲಕ ಜನಜಾಗೃತಿ ಭಾಷಣಗಳನ್ನು ಮಾಡುತ್ತಿದ್ದರು. ತಿಲಕರು 'ಸ್ವರಾಜ್ಯ ನನ್ನ ಜನ್ಮ ಸಿದ್ಧ ಹಕ್ಕು' ಎಂದು ಘೋಷಿಸಿದ್ದರು.

ಸುಭಾಷರು ಸಣ್ಣ ವಯಸ್ಸಿಗೆ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದ್ದರು. ನಂತರ 'ಫಾರ್ವರ್ಡ್ ಬ್ಲಾಕ್' ಎನ್ನುವ ಹೊಸ ಪಕ್ಷವನ್ನು ಕಟ್ಟಿ ತಮ್ಮ ಹೊಸ ಪಕ್ಷದ ಮುಖಾಂತರ ಯುವಕರನ್ನು ಹೊಸ ಆಲೋಚನೆಗಳನ್ನು ಹುಟ್ಟುಹಾಕುತ್ತ ಕ್ರಾಂತಿ ಮಾಡುತ್ತಿದ್ದರು. ಹನ್ನೊಂದು ಸಲ ಜೈಲಿಗೆ ಹೋಗಿರುತ್ತಾರೆ.

ಕಲಾವತಿ :

'ತಾಯಿಯಂತೆ ಮಗಳು. ನೂಲಿನಂತೆ ಸೀರೆ' ಎಂಬ ಗಾದೆ ಮಾತಿನಂತೆ ಇವಳಲ್ಲೂ ಸ್ವಾತಂತ್ರ್ಯದ ಕಿಚ್ಚು ತುಂಬಿಕೊಂಡಿದ್ದಳು. ಕಾರಣಕ್ಕಾಗಿಯೇ ಜೈಲಿಗೆ ಹೋಗಿ ಬಂದಿದ್ದರೂ ಶಿವಲಿಂಗುವನ್ನೇ ಮದುವೆಯಾಗುತ್ತಾಳೆ. ನಂತರ ಗಂಡನಿಗೆ ಬೆನ್ನೆಲುಬಾಗಿ ನಿಂತು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಲು ಹುರಿದುಂಬಿಸಿ, ನಾನು ಮಕ್ಕಳನ್ನು ನೋಡಿಕೊಳ್ಳುತ್ತೇನೆ. ನೀವು ಧೈರ್ಯವಾಗಿ ಹೋಗಿಬನ್ನಿ ಎಂದು ಹೇಳುತ್ತಿದ್ದಳು. ಶೇಷಪ್ಪ ಮಾಸ್ತರರ ಮಗಳಾದ ಶಾರದಕ್ಕನ ಜೊತೆ ಬೆಳಗಾವಿಯಲ್ಲಿ ಗಾಂಧೀಜಿಯವರ ಭಾಷಣವನ್ನು ಕೇಳುವ ಅವರನ್ನು ಕಣ್ತುಂಬಿಕೊಳ್ಳುವುದಕ್ಕಾಗಿ ಮತ್ತು ಮಹಿಳೆಯರೂ ಕೂಡಾ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗಿಯಾಗಿರುವುದನ್ನು ಕಂಡು ತಮ್ಮನ್ನು ತೊಡಗಿಸಿಕೊಳ್ಳಬೇಕೆಂದು ನಿರ್ಧರಿಸುತ್ತಾಳೆ. ಹಾಗೂ ಬೆಲೆಬಾಳುವ ಬಂಗಾರದ ಒಡವೆಗಳನ್ನು ಯಾರ ಅನುಮತಿಯಿಲ್ಲದೆ ಸ್ವಯಂಪ್ರೇರಿತಳಾಗಿ ಗಾಂಧೀಜಿಯವರ ಸಂಗ್ರಹ ಕಾರ್ಯಕ್ಕೆ ನೆರವಾಗುತ್ತಾಳೆ. ಗಾಂಧೀಜಿಯ ಕನಸಿನಂತೆ ಖಾದಿ ಗ್ರಾಮೋದ್ಯೋಗವನ್ನು ಮನೆಯಲ್ಲಿಯೇ ಆರಂಭಿಸಿ, ಊರಿನ ಹೆಂಗಸರಿಗೂ ತರಬೇತಿ ಕೊಡುವ ಮೂಲಕ ಸವಾತಂತ್ರ್ಯ ಹೋರಾಟಕ್ಕೆ ನೆರವಾಗುತ್ತಾಳೆ.

ಭರತ :

ಶಿವಲಿಂಗುವಿನ ಮಗ ಭರತ್ ಕೂಡಾ ಅಪ್ಪನಂತೆಯೇ ಹೋರಾಟಗಾರ ಅವನು ವಿದ್ಯಾಭ್ಯಾಸವನ್ನು ತ್ಯಜಿಸಿ ಅಪ್ಪನಿಗೆ ಸಾಥ್ ನೀಡುತ್ತಾನೆ. ಸ್ವಾತಂತ್ರ್ಯ ಭಾರತದಲ್ಲಿ ವಿಜ್ಞಾನಿಯಾಗಿ ನಂತರ ಸಾಧಕನಾಗುತ್ತಾನೆ. (ಸಂಕ್ರಮಣ, ಲೇಖನ) ಭವ್ಯ ಭಾರತದ ಕನಸನ್ನು ಕಟ್ಟಿಕೊಂಡಿದ್ದ. ಭರತ ನಾಯಕತ್ವದ ಲಕ್ಷಣಗಳನ್ನು ಎಳೆಯ ಪ್ರಾಯದಲ್ಲೇ ಮೈಗೂಡಿಸಿಕೊಂಡವನು. ಸುಭಾಷರ ಕಟ್ಟಿಕೊಂಡ ಪಕ್ಷವನ್ನು ಸೇರಿಕೊಳ್ಳಲು ಹವಣಿಸುತ್ತಿದ್ದಂತಹ ಅಪರೂಪದ ವ್ಯಕ್ತಿತ್ವದ ಪಾತ್ರಧಾರಿ. ನಿರಂತರವಾದ ಹೋರಾಟಗಾರನಾಗಿರುತ್ತಾನೆ.

ಈರ್ಯಾ (ಈರಪ್ಪ):–

ಶಿವಲಿಂಗುವಿನ ತೋಟದಲ್ಲಿ ಕೆಲಸ ಮಾಡುವ ಆಳು. ಈರ್ಯಾ ಇವನೂ ಕೂಡ ಬ್ರಿಟೀಷರ ವಿರುದ್ಧ ದನಿಯೆತ್ತಿ ಅವರ ಕಣ್ಣಿಗೆ ಬೀಳದಂತೆ ಸರ್ಕಾರಿ ಕಛೇರಿಗಳನ್ನು ಸಾರ್ವಜನಿಕ ಆಸ್ತಿಗಳನ್ನು ನಾಶಮಾಡುತ್ತ, ಹಗಲಿನಲ್ಲಿ ಭೂಗತನಾಗಿಬಿಡುತ್ತಿದ್ದ ಮತ್ತು ಸ್ವಾತಂತ್ರ್ಯ ಚಳುವಳಿಗಾರರ ಜೊತೆಗೂಡಿ,

ಬ್ರಿಟೀಷರಿಗೆ ಗೊತ್ತಾಗದ ಹಾಗೆ ಕಾರ್ಯಪ್ರವೃತ್ತರಾಗಿ, ಜೀವದ ಹಂಗು ತೊರೆದು ಹೋರಾಡುತ್ತಿದ್ದ.

ಹೀಗೆ ಕಾದಂಬರಿಯುದ್ದಕ್ಕೂ ಸ್ವಾತಂತ್ರ್ಯಕ್ಕಾಗಿ ಸೆಣಸುವ ಪಾತ್ರಗಳನ್ನು ನೋಡುತ್ತಲೇ ಹೋಗುತ್ತೇವೆ. ಹಳ್ಳಿಯ ಮುಗ್ಧ ಜನರಾದರೂ ಸ್ವಾತಂತ್ರ್ಯವನ್ನು ಪಡೆಯುವ ಹಂಬಲದಿಂದ ಮನೆ, ಹೊಲ, ಕುಟುಂಬಗಳನ್ನು ಬಿಟ್ಟು ಹೋರಾಟದಲ್ಲಿ ನಿರತರಾದವರನ್ನು ಕಾಣಬಹುದು.

ಕೇವಲ ಹೋರಾಟಕ್ಕೆ ಸೀಮಿತಗೊಳಿಸಿಕೊಳ್ಳದೆ, ಸ್ವಾತಂತ್ರ್ಯವನ್ನು ಪಡೆದೇ ತೀರಬೇಕೆಂಬ ಮಹದಾಸೆಯಿಂದ ತೀವ್ರವಾಗಿ ಹೋರಾಡಿ, 1947 ಆಗಸ್ಟ್ 14ರ ಮಧ್ಯರಾತ್ರಿಯಲ್ಲಿ ಸ್ವಾತಂತ್ರ್ಯ ಪಡೆದುಕೊಂಡು ತಮ್ಮ ಕನಸನ್ನು ನನಸನ್ನಾಗಿ ಮಾಡಿಕೊಳ್ಳುತ್ತಾರೆ.

ಡಾ. ಲತಾ ಗುತ್ತಿಯವರ 'ಕರಿನೀರು' ಕಾದಂಬರಿ

ಪ್ರಕಾಶಕರು – ಅಂಕಿತ ಪುಸ್ತಕ

ಬಸವನಗುಡಿ, ಬೆಂಗಳೂರು – 04

ಮೊದಲನೆ ಮುದ್ರಣ – 2015

ಡಾ. ಲತಾ ಗುತ್ತಿಯವರ 'ಕರಿನೀರು' ಕಾದಂಬರಿ

ಪ್ರಕಾಶಕರು – ಅಂಕಿತ ಪುಸ್ತಕ

ಬಸವನಗುಡಿ, ಬೆಂಗಳೂರು – 04

ಅಧ್ಯಾಯ – 6

ಸಮಾರೋಪ

ಸಮಾರೋಪ

ಕರಿನೀರು ಕಾದಂಬರಿಯಲ್ಲಿ ಸ್ವಾತಂತ್ರ್ಯವನ್ನು ಪಡೆಯಲು ಸುಮಾರು ವರ್ಷಗಳ ಕಾಲ ಸುದೀರ್ಘವಾಗಿ ಹೋರಾಟವನ್ನು ಮಾಡಿ ಸ್ವಾತಂತ್ರ್ಯವನ್ನು ಪಡೆದುಕೊಂಡರೂ ಹಳ್ಳಿಯ ಒಬ್ಬ ಹೆಣ್ಣು ಮಗಳು ಬರಿಟೀಷರ ವಿರುದ್ಧ ತಿರುಗಿಬಿದ್ದು ತನ್ನ ನೆಲ, ಹೊಲದ ಮೇಲೆ ಇದ್ದ ಪ್ರೀತಿ, ಅಭಿಮಾನವನ್ನು ವ್ಯಕ್ತಪಡಿಸಿ, ಬ್ರಿಟಿಷ್ ಅಧಿಕಾರಿಗಳ ದೌರ್ಜನ್ಯಕ್ಕೆ ಮತ್ತು ಅವಮಾನಕ್ಕೆ ಒಳಗಾಗುತ್ತಾಳೆ. ಬೇಸತ್ತು ಆತ್ಮಹತ್ಯೆಯನ್ನು ಮಾಡಿಕೊಳ್ಳುವ ಮೂಲಕ ಸ್ವಾತಂತ್ರ್ಯ ಭಾರತಕ್ಕೆ ಮುನ್ನುಡಿಯನ್ನು ಬರೆಯುತ್ತಾಳೆ.

ಚಿನ್ನಕ್ಕಳ ಸಾವು, ಮನೆಯವರ ನೋವು, ದುಃಖ, ಶಿವಲಿಂಗು ಎಂಬ ಕೆಚ್ಚದೆ ಯುವಕನನ್ನು ಪ್ರಭಾವಿ ಸ್ವಾತಂತ್ರ್ಯ ಹೋರಾಟಗಾರನನ್ನು ಹುಟ್ಟುಹಾಕುತ್ತದೆ. ಸಾವಿನ ಪ್ರತೀಕಾರವನ್ನು, ತೀರಿಸಿಕೊಳ್ಳಲು ಶಿವಲಿಂಗು ಮುಂದಾಗಿ, ಬ್ರಿಟಿಷ್ ಅಧಿಕಾರಿಗೆ ಬಂದೂಕಿನಿಂದ ಸುಡಲು ಮುಂದಾಗುತ್ತಾನೆ. ಗುರಿತಪ್ಪಿ ಅವನ ಹೆಂಡತಿ ಸಾಯುತ್ತಾಳೆ. ನಂತರ ಕಾದಂಬರಿ ನಾಯಕನಿಗೆ 'ಕರಿನೀರು' ಶಿಕ್ಷೆಗೆ ಗುರಿಯಾಗಿ ಅಂಡಮಾನಿನ ಸರಳುಗಳ ಹಿಂದೆ, ಸ್ವಾತಂತ್ರ್ಯಕ್ಕಾಗಿ ಹೋರಾಡಿ, ಶಿಕ್ಷೆಗೆ ಗುರಿಯಾದ ಮಹಾನ್ ಸ್ವಾತಂತ್ರ್ಯ ಹೋರಾಟಗಾರರನ್ನು ಭೇಟಿಯಾಗಿರುವುದರ ಮೂಲಕ ಅವನ ಸ್ವಾತಂತ್ರ್ಯ ಪ್ರೇಮ ಮತ್ತಷ್ಟು ಗಟ್ಟಿಯಾಗುತ್ತಾ ಹೋಗುತ್ತದೆ.

ಇಲ್ಲಿ ಬರುವ ನಾಯಕನು ಲೇಖಕಿಯ ಕುಟುಂಬದ ಹಿರಿಯರಾಗಿರುವುದು ವಿಶೇಷ. ಆ ಹಿರಿಯರ ಕಥೆಯನ್ನು ತಾವು ಎಳೆತನದಿಂದ ಕೇಳುತ್ತ ಬಂದಿದ್ದನ್ನು ಡಾ. ಲತಾಗುತ್ತಿಯವರು ಹೇಳಿಕೊಂಡಿದ್ದಾರೆ. ಸಣ್ಣ ವಯಸ್ಸಿನಲ್ಲಿಯೇ ಮನಸ್ಸಿನಲ್ಲಿ ಬೇರುಬಿಟ್ಟಿದ್ದ ನೆನಪುಗಳು ತುಂಬಾ ಪರಿಣಾಮಕಾರಿಯಾಗಿ, ಯಶಸ್ವಿಯಾಗಿ, ಕರಿನೀರು ಕಾದಂಬರಿಯನ್ನು ಕಟ್ಟಿಕೊಟ್ಟಿದ್ದಾರೆ. ಹಾಗಾಗಿ ಸ್ವಾತಂತ್ರ್ಯ ಪೂರ್ವದ ಬದುಕನ್ನು ಚಿತ್ರಿಸುವಲ್ಲಿ ಕಥೆಗೆ ಆಪ್ತಗುಣ ಒದಗುತ್ತದೆ. ಕಾದಂಬರಿಯ ಮುಖ್ಯ ಆಶಯವಿರುವುದೇ ತನ್ನ ಊರು, ತನ್ನ ಮನೆ, ತನ್ನ ಮಾನ ಎಂಬ ಸೀಮಿತ ವ್ಯಕ್ತಿತ್ವದ ಬಗ್ಗೆ, ಹೆಣ್ಣಿನ ಮಾನ ಸಂರಕ್ಷಣೆಗೆ ಮುಂದಾಗಿ, ದುಡುಕುತನದಿಂದ ಕೊಲೆಮಾಡಿ, ಕರಿನೀರು ಶಿಕ್ಷೆಗೆ ಗುರಿಯಾಗಿ ಅಲ್ಲಿನ ಕಷ್ಟ, ಜೀವನಾನುಭವಗಳಿಂದ ಬೆಳೆದು ತನ್ನ ಜೀವನವನ್ನು ಕಟ್ಟಿಕೊಂಡು ನಂತರ ಯಶಸ್ವಿ ಸ್ವಾತಂತ್ರ್ಯ ಹೋರಾಟಗಾರನಾಗುವುದು ಕಾದಂಬರಿಯ ರೋಚಕತೆಯನ್ನು ಹಿಡಿದಿಡುತ್ತವೆ. ಸೆರೆಮನೆಯಲ್ಲಿ ಕೇಳುತ್ತಿದ್ದ, ಸ್ವಾತಂತ್ರ್ಯದ ಬಗೆಗಿನ ಮಾತುಗಳು ಹಾಗೂ ಪ್ರಮುಖ ಹೋರಾಟಗಾರರ ಜೊತೆಗಿನ ಒಡನಾಟ. ತಾಯ್ನೆಲದ ಬಗೆಗಿನ ಅಭಿಮಾನ, ಹಾಗೂ ರಕ್ತ ಸಂಬಂಧಿಗಳನ್ನು ತೊರೆದಿರುವ ನೋವು ಶಿವಲಿಂಗುವನ್ನು ಇನ್ನಷ್ಟು ಗಟ್ಟಿಗೊಳಿಸುತ್ತದೆ.

ಪ್ರತಿ ಹಂತದಲ್ಲಿಯೂ ಸ್ವಾತಂತ್ರ್ಯಕ್ಕಾಗಿ ಸೆಣಸುವ ನಾಯಕನ ಗುಣವನ್ನು ಲೇಖಕಿ ಸಹಜವಾಗಿ ಚಿತ್ರಿಸಿದ್ದಾರೆ ಹಾಗೂ ಬೆಳಗಾವಿ ಹಳ್ಳಿಯ ಜನಜೀವನ ಚಿತ್ರಣ, ಸಾಂಸ್ಕೃತಿಕ ಆಚರಣೆಗಳು, ಶಿವಲಿಂಗುವಿನ ಅಜ್ಜ ಕಟ್ಟಿಕೊಂಡಿದ್ದ ಕನಸುಗಳು, ಯೌವನದಲ್ಲಿ ಅವಳಿಗಿದ್ದ ಆವೇಶಗಳು, ಹೆಣ್ಣಿನ ಮಾನರಕ್ಷಣೆಗೆ ತುಡಿಯುವ ಅವನ ಮನಸ್ಸು. ಅಂಡಮಾನಿನ ಜೈಲುಗಳ ನೈಜ ಚಿತ್ರಣ, ಅಲ್ಲಿನ ಕಾಡು ಎಲ್ಲವನ್ನೂ ಲೇಖಕಿ ಸುಂದರವಾಗಿ ಹಿಡಿದಿಟ್ಟಿದ್ದಾರೆ.

ಕೆಲವು ಪ್ರಸಿದ್ಧ ಕಾದಂಬರಿಗಳಂತೆಯೇ ಇದಕ್ಕೂ ಸಹ ಮೂರು ತಲೆಮಾರುಗಳ ಸುತ್ತ ಚಲಿಸುವ ಕಥಾವಸ್ತು. ಕೇಂದ್ರ ಬಿಂದು ಬೆಳಗಾವಿಯ ಸುತ್ತಮುತ್ತಲಿನ ಪ್ರದೇಶವಾದರೂ ಸುಳಿಸುತ್ತುವುದು 'ಕರಿನೀರು'ನಲ್ಲಿ. ಅಂಡಮಾನ್‌ನ ದ್ವೀಪಗಳೆಲ್ಲವೂ ಜ್ವಾಲಾಮುಖಿಯಿಂದಾದ ದ್ವೀಪಗಳು. ಇಂದಲ್ಲಿ ನಾಳೆ ಸ್ಫೋಟಿಸಿ ಲಾವಾ ರಸ ಬಿಳಿಗಾಳಿ, ಬಿಸಿಬೂದಿ ಹೊರಹೊಮ್ಮಿ ಅಲ್ಲೋಲಕಲ್ಲೋಲವನ್ನುಂಟು ಮಾಡಬಲ್ಲ ಕೇಂದ್ರಗಳು. ಹೊರಬರುವ ಬಿಸಿಗಾಳಿಯಲ್ಲಿ ಮತ್ತು ಬಿಸಿನೀರಿನಲ್ಲಿ ಗಂಧಕ, ಇಂಗಾಲ ಇತ್ಯಾದಿಗಳು ಬೆರೆತಾಗ ಸಮುದ್ರದ ನೀರು ಕಪ್ಪಾಗಿ ಕಾಣುವುದರಿಂದ ಕರಿನೀರು ಎಂದು ಕರೆದಿರಬಹುದು.

ಶಿವಲಿಂಗುವಿನ ಮೊಮ್ಮಗನಾದ 'ಶಶಾಂಕ' ಕೂಡ ವಿಜ್ಞಾನಿಯಾಗಿ ದೇಶ-ವಿದೇಶಗಳನ್ನು ಸುತ್ತಿ ಶಿಕ್ಷಣ ಸಂಸ್ಥೆಗಳಿಗೆ ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಚರ್ಚಿಸುವಂತ ಚತುರನಾಗಿದ್ದು, ವಿದೇಶಿ ಹುಡುಗಿಗೆ ಮನಸೋಲುವುದು, ತಂದೆ ಭರತ ಮತ್ತು ತಾಯಿ ವಿಜಯಾಳಿಗೆ ಆಘಾತವನ್ನುಂಟು ಮಾಡುತ್ತದೆ.

ಯಾರ್ನು ಹೊರದೂಡಬೇಕೆಂದು ಇಷ್ಟು ವರ್ಷಗಳ ಹೋರಾಡಿದೆವೋ ಸ್ವಾತಂತ್ರ್ಯಕ್ಕಾಗಿ ಜೀವನವನ್ನು ಮುಡಿಪಾಗಿಟ್ಟೆವೋ, ಪುನಃ ಆಧುನಿಕತೆಯ ನೆಪವೊಡ್ಡಿ ಬ್ರಿಟೀಷರ ಆಗಮನವನ್ನು ಭರತನಿಗೆ ಸೈರಿಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಹೆಚ್ಚಾಗಿ ತನ್ನ ಕುಟುಂಬದೊಳಗೆ ಪ್ರವೇಶಿಸುವುದು ಅವನಿಗೆ ಕಲ್ಪನೆಗೂ ನಿಲುಕದ ಸಂಗತಿಯಾಗಿರುವುದನ್ನು ಲೇಖಕಿ ಮನಮುಟ್ಟುವಂತೆ ಅತ್ಯಂತ ಹೃದಯಸ್ಪರ್ಶಿಯಾಗಿ ಚಿತ್ರಿಸಿದ್ದಾರೆ.

ಬೆಳಗಾವಿ ಪ್ರದೇಶದ ಜನರು ಆಚರಿಸುತ್ತಿದ್ದ ಸಾಂಸ್ಕೃತಿಕ ಆಚರಣೆಗಳನ್ನು ಹಬ್ಬ ಹರಿದಿನಗಳನ್ನು ಕಾದಂಬರಿಯ ಅಲ್ಲಲ್ಲಿ ಕಾಣಬಹುದು. ಚೆನ್ನಬಸಪ್ಪಜ್ಜ, ಶಿವಲಿಂಗುವಿನ ಮೇಲೆ ಕಟ್ಟಿಕೊಂಡಿದ್ದ ನೂರಾರು ಕನಸುಗಳಲ್ಲಿ 'ಪೈಲ್ವಾನನನ್ನಾಗಿ' ಮಾಡುವುದು ಒಂದು. ಪಕ್ಕದೂರಿನಲ್ಲಿ ನಡೆದ ಜಾತ್ರೆಗೆ ಕರೆದುಕೊಂಡು ಹೋಗಿ, ಅಲ್ಲಿನ ಕುಸ್ತಿಪಟುಗಳನ್ನು ಮತ್ತು ಕುಸ್ತಿಯ ಮಟ್ಟುಗಳನ್ನು ಶಿವಲಿಂಗುವಿಗೆ ತೋರಿಸುವುದು ಆ ಮೂಲಕ ಶಿವಲಿಂಗುವಿಗೆ ಪ್ರೇರೇಪಿಸುವುದು, ಹಾಗೂ ಕುಸ್ತಿ ನೋಡಲು ಹೊರಡುವಾಗ, ದೊಡ್ಡ ಬುಟ್ಟಿ ತುಂಬ ಮಾಡಲಿ, ತುಪ್ಪದ ಗಡಗಿ ತೆಗೆದುಕೊಂಡು ಚಕ್ಕಡಿ ಏರುತ್ತಿದ್ದ ಅಷ್ಟೇ ಅಲ್ಲ ಊರಿನಲ್ಲಿ ಯಾರಾದರೂ ಬರುವವರಿದ್ದರೆ ಅವರನ್ನೂ ಕರೆದುಕೊಂಡು ಹೋಗುವ ಹೃದಯ ವೈಶಾಲ್ಯತೆಯನ್ನು ಚೆನ್ನಬಸಪ್ಪಜ್ಜನಲ್ಲಿ ಕಾಣಬಹುದು.

ಮಲೆನಾಡಿನ ಸೌಂದರ್ಯದಂತೆ ತುಂಬಿಕೊಂಡಂತಹ ಮಹದೇವಪುರಕ್ಕೆ ಇದ್ದಕ್ಕಿದ್ದಂತೆ ಪ್ಲೇಗ್ ಹರಡಿತ್ತು. ನೋಡು ನೋಡುತ್ತಿದ್ದಂತೆಯೇ ಊರು-ಕೇರಿ, ದಾಟಿ ಹಳ್ಳಿಗಳನ್ನು ನುಂಗುತ್ತಿತ್ತು. ಇಂತಹ ಪ್ಲೇಗ್ ಮಾರಿಯ ರೌದ್ರಾವತಾರವನ್ನು ಕಾಣಬಹುದು. ಅಷ್ಟೇ ಅಲ್ಲದೆ ಕಾದಂಬರಿಯ ನಾಯಕನ ಪ್ರೀತಿಯ ಚಿಕ್ಕಪ್ಪನಾದ 'ಧರ್ಮಗೌಡ'ನನ್ನು ಬಲಿ ತೆಗೆದುಕೊಂಡ ಸಮಯದಲ್ಲಿ ತತ್ತರಿಸಿದ ಕುಟುಂಬದ ನೈಜ ಚಿತ್ರಣವನ್ನು ಕಾಣಬಹುದು.

ದಿನೇ-ದಿನೇ ಹೆಣಗಳೂ, ಆಕ್ರಂದನ ಕೇಳಿ ಊರಿಗೆ ಊರೇ ನಡುಗುವ ಹಾಗೂ ಭಯಂಕರ ದೃಶ್ಯಗಳನ್ನು ಹೆಣಗಳನ್ನು ಸಾಗಿಸುವವರೂ ಇಲ್ಲದೆ ಕಂಗಾಲಾದ ಪ್ರಸಂಗವನ್ನು ಕಾದಂಬರಿಯು ಹಿಡಿದಿಡುತ್ತದೆ.

ಇನ್ನೊಂದು ಮುಖ್ಯ ಸಂಗತಿಯೆಂದರೆ ಈ ಕಾದಂಬರಿ ಕರಿನೀರು ಶಿಕ್ಷೆ ಅನುಭವಿಸಿ ಬಂದ ನಾಯಕನದ್ದು ಮಾತ್ರವಲ್ಲ. ಒಂದು ಇಡೀ ಪ್ರದೇಶದ್ದು. ಒಂದು ಇಡೀ ಜೀವನ ಕ್ರಮದ್ದು ಅನ್ನುವ ಹಾಗೆ ಬೆಳೆಯುತ್ತದೆ. ಕಾದಂಬರಿಯು ಮುಖ್ಯ ಆಶ್ಯವಿರುವುದೆ ತನ್ನ ಊರು, ತನ್ನ ಮನೆ, ತನ್ನ ಮಾನ ಎಂಬ ಸೀಮಿತ ವ್ಯಕ್ತಿತ್ವದ ಹೆಣ್ಣಿನ ಮಾನ ಸಂರಕ್ಷಣೆಗೆಂದು ಕೋಪದಿಂದ ಕೊಲೆ ಮಾಡಿ ಕಾಲಾಪಾನಿ ಶಿಕ್ಷೆಯನ್ನು ಅನುಭವಿಸುವ ನಾಯಕಿ ಅಲ್ಲಿನ ಅನುಭವಗಳಿಂದ ಬೆಳೆದು ಸ್ವಾತಂತ್ರ್ಯ ಹೋರಾಟಗಾರನಾಗಿ, ತನ್ನ ಊರಿನ ಜನರ, ಬದುಕಿನ ಆಶಾಕಿರಣವಾಗಿ ಹೊರಹೊಮ್ಮುತ್ತಾನೆ.

ಕಾದಂಬರಿಗೆ ಗತಕಾಲದ ಸಾಮಾಜಿಕ ಬದುಕನ್ನು ಕುರಿತು ಕೇಳಿದ. ಕಂಡ ಕಥನಗಳ ಸ್ವರೂಪವೂ ಒರಗಿದೆ. ಬೆಳಗಾವಿ ಪ್ರದೇಶದ ಗ್ರಾಮೀಣ ಬದುಕಿನ ಚಿತ್ರಣವನ್ನು ಓದುಗರಿಗೆ ಉಣಬಡಿಸಲಾಗಿದೆ.

ಶಿವಲಿಂಗುವಿನ ತಂಗಿಯ ಮಗನಾದ 'ಜಗದೀಶ' ಬ್ರಿಟೀಷರ ಪೊಲೀಸು ಇಲಾಖೆಯಲ್ಲಿ ಕೆಲಸ ಮಾಡುತ್ತ ಉದ್ಯೋಗದ ಕರ್ತವ್ಯ, ಊರವರ ಮೆಚ್ಚುಗೆ, ಗೌರವಗಳನ್ನ, ಸಂಪಾದಿಸಿರುವ ಆಪ್ತ ಬಂಧು ನಾಯಕನ ಮದುವೆಯ ಪ್ರಸಂಗ. ಹುಡುಗನಿಗೆ ಅವನ ಮೇಲೆ ಪ್ರೀತಿ ಹುಟ್ಟುವ ಸನ್ನಿವೇಶ ಇಂಥದೆಲ್ಲಾ ಲೇಖಕಿಯು ಮಾನವೀಯ ಸಂದರ್ಭಗಳನ್ನು ತುಂಬಾ ಚೆನ್ನಾಗಿ ನಿರ್ವಹಿಸಿದ್ದಾರೆ.

ಹೀಗೆ ಕಥೆ ಬಹಳ ಕುತೂಹಲಕಾರಿಯಾಗಿ ಆದರೆ ಅತ್ಯಂತ ಸಹಜವಾಗಿ ಬೆಳವಣಿಗೆಯನ್ನು ಪಡೆಯುತ್ತಾ ಮುಂದೆ ಸಾಗುತ್ತದೆ. ಎಲ್ಲಿಯೂ ದಿಢೀರ್ ಬೆಳವಣಿಗೆಗಳಿಲ್ಲದೆ ಅದು ಹೇಗೆ ನಡೆದಿದೆಯೋ ಹಾಗೆಯೇ ಒಂದೇ ಗತಿಯಲ್ಲಿ ನಿರೂಪಣೆ ಸಾಗುತ್ತದೆ. ಇದಕ್ಕೆ ಕಾರಣವೇನೆಂದರೆ, ಲೇಖಕಿಯವರು ಸಾಕಷ್ಟು ವರ್ಷಗಳವರೆಗೆ ತಮ್ಮ ಸಂಬಂಧಪಟ್ಟ ಸಂಬಂಧಿಗಳನ್ನು ಭೇಟಿ ಎಲ್ಲಾ ವಿವರಗಳನ್ನು ಸಂಗ್ರಹಿಸಿ, ಉತ್ತಮವಾಗಿ ಪೋಣಿಸಿ ಕಥೆಯನ್ನು ಬರೆದಿದ್ದಾರೆ. ಇದು ಅವರ ಮನೆಯ ಹಿರಿಯನೊಬ್ಬನ ಕಥೆಯಾದರೂ

ಇಂತಹದೇ ಕಥೆಗಳು ಪ್ರತಿ ಊರಿನಲ್ಲಿಯೂ ಪ್ರತಿ ಮನೆಯಲ್ಲಿಯೂ ಯಾರದ್ದಾದರೂ ಒಬ್ಬರ ಬಗ್ಗೆ ಇದ್ದೇ ಇರುತ್ತವೆ. ಪ್ರತಿ ನಾಗರೀಕನನ್ನೂ ತನ್ನ ಸುಳಿಗೆ, ಸುತ್ತಿಸಿಕೊಂಡ ಮಹಾ ವಿಪ್ಲದವಾಗಿತ್ತು ಅದು. ಗಾಂಧೀಜಿಯಂತಹ ಅನೇಕ ನಾಯಕರ ಪ್ರಭಾವ ಆ ರೀತಿಯಿತ್ತು. ಹೀಗಾಗಿ ಈ ಮರುಕಥನವನ್ನು ಎಲ್ಲರೂ ತಪ್ಪದೇ ಓದಬೇಕು. ಇಂದು ನಮ್ಮಲ್ಲಿ ಅವತರಿಸಿರುವ ಸ್ವಾರ್ಥ, ದುರಾಸೆಗಳನ್ನು ದೂರ ಮಾಡಬಹುದಾದ ದಾರಿಯೆಂದರೆ ರಾಷ್ಟ್ರಪ್ರೇಮವನ್ನು ಬೆಳೆಸಿಕೊಂಡು ಸರಳತೆ, ಪ್ರಾಮಾಣಿಕತೆಗಳನ್ನು ಮೈಗೂಡಿಸಿಕೊಳ್ಳುವುದು ಇಂತಹ ಅತ್ಯುತ್ತಮ ಐತಿಹಾಸಿಕ ಕಾದಂಬರಿಗಳಿಂದ ಸಾಧ್ಯವಾಗುತ್ತದೆ.

ಲೇಖಕಿಯ ಪರಿಚಯ

ಡಾ. ಲತಾಗುತ್ತಿ

ಕಾವ್ಯ, ಪ್ರವಾಸ, ಕಥನ, ಕಾದಂಬರಿ, ಕಥೆ, ಸಂಪಾದನೆ, ಅನುವಾದ. ಜೀವನ ಚರಿತ್ರೆ, ವೈಚಾರಿಕ ಲೆಖನ ಹೀಗೆ ಸಾಹಿತ್ಯದ ಬಹು ಪ್ರಕಾರಗಳಲ್ಲಿ ಆಸಕ್ತಿಯಿರಿಸಿಕೊಂಡು 1980ರಿಂದ ನಿರಂತರ ಸಾಹಿತ್ಯ ಕೃಷಿ ನಡೆಸುತ್ತ ಬಂದಿರುವ ಲತಾ ಗುತ್ತಿಯವರು ಈ ವರೆಗೆ 25ಕೃತಿಗಳನ್ನು ಪ್ರಕಟಿಸಿದ್ದಾರೆ.

ಬೆಳಗಾವಿಯಲ್ಲಿ ಹುಟ್ಟಿ ಬೆಂಗಳೂರಿನಲ್ಲಿ ನೆಲೆಸಿರುವ ಲತಾಗುತ್ತಿಯವರು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಿಂದ ಕನ್ನಡ ಎಂ.ಎ. ಮತ್ತು ಪಿಎಚ್.ಡಿ. ಪದವಿ, ಮೈಸೂರು ವಿಶ್ವವಿದ್ಯಾಲಯದಿಂದ ಇಂಗ್ಲಿಷ್ ಎಂ.ಎ. ಪದವಿ ಪಡೆದುಕೊಂಡಿದ್ದಾರೆ.

ಹದಿನೈದು ವರ್ಷಗಳನ್ನು ವಿದೇಶಗಳಲ್ಲಿ ಕಳೆದು ಸೌದಿ ಅರೇಬಿಯಾ ಲಂಡನ್, ಫ್ರಾನ್ಸ್, ಇಟಲಿ, ಬೆಲ್ಜಿಯಂ, ಹಾಲೆಂಡ್‌ಗಳಲ್ಲಿ ಸುತ್ತಾಡಿರುವುದರಿಂದಾಗಿಯೋ ಏನೋ ಪ್ರವಾಸ ಕಥನ ರಚನೆಗೆ ಪ್ರೇರಣೆ ಸಿಕ್ಕಂತಾಗಿ ಯುರೋನಾಡಿನಲ್ಲಿ, ನಾ ಕಂಡಂತೆ ಅರೇಬಿಯಾ. ಅಂಡಮಾನಿನೆಳೆಯನು ಹಿಡಿದು ಮತ್ತು ಚಿರಾಪುಂಜಿಯವರೆಗೆ ಎನ್ನುವ ಪ್ರವಾಸ ಸಾಹಿತ್ಯ ಕೃತಿಗಳನ್ನು ಪ್ರಕಟಿಸಿರುವುದಲ್ಲದೆ ಪಿಎಚ್.ಡಿ ಪದವಿಗೂ 'ಪ್ರವಾಸ ಸಾಹಿತ್ಯ ವಿಶ್ವ ಸಂಸ್ಕೃತಿಗಳು' ವಿಷಯವನ್ನೇ ಆಯ್ಕೆ ಮಾಡಿಕೊಂಡರು.

ಪ್ರವಾಸ ಸಾಹಿತ್ಯದ ಒಳನೋಟಗಳು ಎನ್ನುವ ಕೃತಿಯನ್ನೂ ರಚಿಸಿದ್ದರು. ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಕಾವ್ಯ, ಪ್ರಬಂಧ, ಕಥೆ, ಪ್ರವಾಸ, ಲೇಖನ, ಸಂದರ್ಶನಗಳನ್ನು ಪರಕಟಿಸಿರುವುದಲ್ಲದೆ ಕನಕಪುರ, ಶಿವಮೊಗ್ಗ, ಬೆಂಗಳೂರು, ಬೆಳಗಾವಿ, ಗದಗಗಳಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ವಿವಿಧ ವಿಷಯಗಳನ್ನು ಕುರಿತು ಮಾತನಾಡಿದ್ದಾರೆ. ಹಾಗೂ ಕವಿತಾ ವಾಚನ ಮಾಡಿದ್ದಾರೆ.

ಅಸ್ಸಾಂ ರಾಜ್ಯದ ಗೌಹಾತಿಯಲ್ಲಿ ನಡೆದ ಸರ್ವಭಾಷಾ ಕವಿ ಸಮ್ಮೇಳನದಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿ ಕಾವ್ಯವಾಚನ ಮಾಡಿದ್ದಾರೆ. ಬೆಳೆಗಾವಿಯಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದಲ್ಲಿ 'ಸಮಕಾಲೀನ ಜಗತ್ತು ಮತ್ತು ಮಹಿಳೆ' ಕುರಿತು ಭಾಷಣ ಮಾಡಿದ್ದಾರೆ. ಲತಾ ಗುತ್ತಿಯವರು ವರ್ತಮಾನ. ಗಾಂಜಾಡಾಲಿ, ಬೆಳ್ಳಿಹೂವು, ಸೂಜಿಗಲ್ಲು, ಇರುವಿಕೆ, ಆಕಾಶಗೀತೆಗಳು, ಭೂಮಿ ಬಾನಿನ ನಡುವೆ ಕಿಚ್ಚ ಹಾಯುವ ಕಾಲ, ಎನ್ನುವ ಎಂಟು ಕವಿತಾ ಸಂಕಲನಗಳನ್ನು ಕಡಲಾಚೆಯ ಕಥೆಗಳು. ಎನ್ನುವ ಕಥಾಸಂಕಲನವನ್ನೂ, ಹೆಜ್ಜೆ, ಕಿರಿನೀರು, ಎನ್ನುವ ಕಾದಂಬರಿಗಳನ್ನೂ, ಲೀಲಾವತಿ ತೋರಣಗಟ್ಟಿಯವರ ಬದುಕು ಬರಹವನ್ನೂ, ಪ್ರಕಟಿಸಿದ್ದು, ಕೇಂದ್ರಸಾಹಿತ್ಯ ಅಕಾಡೆಮಿಗಾಗಿ ಸಮಕಾಲೀನ ಬಂಗಾಲಿ ಕವಿಯತ್ರಿಯರ ಕವಿತೆಗಳನ್ನು ಅನುವಾದಿಸಿಕೊಟ್ಟಿದ್ದಾರೆ. ಮಹಿಳಾ ಸಾಹಿತ್ಯ ಚರಿತ್ರೆಯನ್ನು ಸಂಪಾದಿಸಿದ್ದಾರೆ.

ರಾಜ್ಯ ಮಟ್ಟದ ಚುಟುಕು ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿರುವ ಲತಾಗುತ್ತಿಯವರನನು ಅರಿಸಿಕೊಂಡು ಬಂದಿರುವ ಪ್ರಶಸ್ತಿಗಳು ಹಲವು, ಅವುಗಳಲ್ಲಿ ಮುಖ್ಯವಾದವುಗಳೆಂದರೆ ಎರಡು ಬಾರಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುಸ್ತಕ ಬಹುಮಾನ, ಮೂರು ಬಾರಿ ಕನ್ನಡ ಸಾಹಿತ್ಯ ಪರಿಷತ್ತಿನ ದತ್ತಿನಿಧಿ ಪ್ರಶಸ್ತಿ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಪ್ರಶಸ್ತಿ, ಆರ್ಯಭಟ ಸಾಹಿತ್ಯ ಪ್ರಶಸ್ತಿ, ಗೊರೂರು ಸಾಹಿತ್ಯ ಪ್ರಶಸ್ತಿ, ಮೂರು ಬಾರಿ ಮಾತೋಶ್ರೀ ರತ್ನಮ್ಮ ಹೆಗ್ಗಡೆ ಪ್ರಶಸ್ತಿ, ವಿಶ್ವೇಶ್ವರಯ್ಯ ಸಾಹಿತ್ಯ ಪ್ರಶಸ್ತಿ, ಚುಟುಕು ಭೂಷಣ ಪ್ರಶಸ್ತಿ, 'ಕರ್ನಾಟಕ ಸಾಹಿತ್ಯ ಅಕಾಡೆಮಿಯು ಡಾ॥ ಲತಾಗುತ್ತಿಯವರ 'ಕರಿನೀರು' ಕೃತಿಗೆ 2015ರ ಅತ್ಯುತ್ತಮ ಕಾದಂಬರಿ ಬಹುಮಾನ ನೀಡಿ ಪುರಸ್ಕರಿಸಿದೆ. ಜೊತೆಗೆ ಕುವೆಂಪು ಪ್ರಶಸ್ತಿ ಶಿವಮೊಗ್ಗ. ಮಾತೋಶ್ರೀ ರತ್ನಮ್ಮ ಹೆಗ್ಗಡೆ ಪ್ರಶಸ್ತಿ, ವಸುದೇವ ಭೂಪಾಲಂ ಪ್ರಶಸ್ತಿ, ಸಿರಿಗನ್ನಡ ಪುಸ್ತಕ ಪ್ರಶಸ್ತಿ, ಕರಿನೀರು ಕಾದಂಬರಿಗೆ ಲಭಿಸಿವೆ.

ಕಾದಂಬರಿಯಲ್ಲಿನ ಪ್ರಮುಖ ಘಟನೆಗಳು

1.	1904 ರಲ್ಲಿ	ಕಾಲಾಪಾನಿ ಶಿಕ್ಷೆಯ ಪಟ್ಟಿ ಹೊರಬಿದ್ದಿತು
2.	1824 ರಲ್ಲಿ	ಕಿತ್ತೂರು ಕಾಳಗ
3.	1857 ರಲ್ಲಿ	ಸಿಪಾಯಿ ದಂಗೆ
4.	1857 ರಲ್ಲಿ	ನರಗುಂದ ಬಂಡಾಯ
5.	1896 ರಲ್ಲಿ	ದೇಶದಲ್ಲಿ ಪ್ಲೇಗ್ ಹಬ್ಬಿತ್ತು.
6.	1885 ರಲ್ಲಿ	ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಉದಯ
7.	1896 ರಲ್ಲಿ	ಆಫ್ರಿಕಾದಲ್ಲಿ ಕಾರ್ಮಿಕರ ಚಳುವಳಿ
8.	1914 ರಲ್ಲಿ	ಆಫ್ರಿಕಾದಿಂದ ಗಾಂಧೀಜಿ ಮರಳಿ ಭಾರತಕ್ಕೆ
9.	1920 ರಲ್ಲಿ	ಗಾಂಧೀಜಿಯವರಿಗೆ ಕಾಂಗ್ರೆಸ್ ಪಕ್ಷದ ಜವಾಬ್ದಾರಿ
10.	1900 ರಲ್ಲಿ	ತಿಲಕರ ಸ್ವರಾಜ್ಯ ಕಲ್ಪನೆಯ ಭಾಷಣ
11.	1920 ರಲ್ಲಿ	ತಿಲಕರು ತೀರಿಕೊಂಡಿದ್ದು.
12.	1900 ರಲ್ಲಿ	ಮೊದಲ ಸಲ ಗಾಂಧೀಜಿ ಬೆಳಗಾವಿಗೆ ಬಂದಿದ್ದು
13.	1924 ರಲ್ಲಿ	ಡಿಸೆಂಬರ್ ಕಾಂಗ್ರೆಸ್ ಅಧಿವೇಶಕ್ಕೆ ಗಾಂಧೀಜಿ ಬೆಳಗಾವಿಗೆ ಬಂದಿದ್ದು.
14.	1930 ರಲ್ಲಿ	ಕಾಯ್ದೆ ಭಂಗ ಚಳುವಳಿ
15.	1829 ರಲ್ಲಿ	ಚೆನ್ನಮ್ಮಳ ನಿಧನ
16.	1939 ರಲ್ಲಿ	ಎರಡನೆಯ ಮಹಾಯುದ್ಧ.
17.	1942 ರಲ್ಲಿ	ಆಗಸ್ಟ 8 ಚಲೇಜಾವ್ ಚಳುವಳಿ
18.	1942 ರಲ್ಲಿ	ಸುಭಾಷ್‌ರ ಗೃಹಬಂಧನ.
19.	1942 ರಲ್ಲಿ	ಆಗಸ್ಟ 9 ಚಲೇಜಾವ್ ಚಳುವಳಿ ಭಾಷಣ

20.	1943 ರಲ್ಲಿ	ಡಿಸೆಂಬರ್ 20 ಅಂಡಮಾನ್ ದ್ವೀಪಗಳು ಸ್ವತಂತ್ರ್ಯಗೊಂಡವು.
21.	1944 ರಲ್ಲಿ	ಫೆಬ್ರವರಿ ಸುಭಾಷರು ಬರ್ಮಾ ಮೂಲಕ ಭಾರತ ಗಡಿ ತಲುಪಿದರು.
22.	1945 ರಲ್ಲಿ	ಆಗಸ್ಟ 18 ಸುಭಾಷರು ವಿಮಾನ ಅಪಘಾತದಲ್ಲಿ ನಿಧನರಾದರು.
23.	1946 ರಲ್ಲಿ	ಆಗಸ್ಟ 18 ಕೋಮು ಭೇದ ನೌಖಾಲಿ ಹತ್ಯಾಕಾಂಡ.
24.	1947 ರಲ್ಲಿ	ಮಾರ್ಚ್ 24 ಭಾರತ್ ವೈಸ್‌ರಾಯ್ ಬ್ಯಾಟನ್ ಪ್ರಮಾಣ ವಚನ.
25.	1947 ರಲ್ಲಿ	ಆಗಸ್ಟ 15 ಭಾರತದ ಸ್ವಾತಂತ್ರ್ಯ ಘೋಷಣೆ.
26.	1857 ರಲ್ಲಿ	ಹಲಗಲಿ ಬೇಡರು ಬ್ರಿಟೀಷರ ವಿರುದ್ಧ ಸಿಡಿದೆದ್ದದ್ದು.
27.	1948 ರಲ್ಲಿ	ಜನವರಿ 31 ಗಾಂಧೀಜಿಯವರ ನಿಧನ

ಡಾ. ಲತಾ ಗುತ್ತಿಯವರ 'ಕರಿನೀರು' ಕಾದಂಬರಿ
ಪ್ರಕಾಶಕರು – ಅಂಕಿತ ಪುಸ್ತಕ ಪ್ರಕಾಶನ
ಬಸವನಗುಡಿ, ಬೆಂಗಳೂರು – 560 004
ಮೊದಲನೇ ಮುದ್ರಣ – 2015

ಕಾದಂಬರಿಯಲ್ಲಿ ಬರುವ ಪ್ರಮುಖ ಪಾತ್ರಗಳು

ಚೆನ್ನಬಸಪ್ಪಜ್ಜ – ಮಹಾದೇವಪುರದ ಗೌಡರು

ರುದ್ರಪ್ಪ ಗೌಡ – ಕೃತಿಯ ನಾಯಕನ ತಂದೆ

ಧರ್ಮಗೌಡ, ವೀರಣ್ಣ ಗೌಡ – ಚಿಕ್ಕಪ್ಪಂದಿರು

ಶಿವಲಿಂಗು + ಕಲಾವತಿ

ಶಾಂತಾ

ಪಾರ್ವತಿ

ನೀಲಕಂಠ + ಪ್ರಭಾವತಿ

ಭರತ ಕಸ್ತೂರಿ ಮಾಧುರಿ ಸುಶೀಲ

ವಿಜಯಾ ಮಲ್ಲಿಕಾರ್ಜುನ ವಿವೇಕ್ ಜಗದೀಶ್

ಶಶಾಂಕ್

ಚೆನ್ನಕ್ಕ + ಸದಾಶಿವ

ಕಲಾವತಿ

ಮಲ್ಲಮ್ಮ ಚಂದ್ರು

(ಅಜ್ಜಿ) ಸುರೇಶ ಸೋದರ ಮಾವಂದಿರು

ಶಂಕರ

ಕಲ್ಲೇಶಿ ಶಿವಲಿಂಗುವಿನ ಶಾಲಾ ಗೆಳೆಯರು

ಬಾಬಾ ಗೌಡ

ಕೃಷ್ಣಪ್ಪ

ಧೋಂಡಿಬಾ

ಗಂಗೋಪಧ್ಯಾಯ

ಸುಮಂತ ಯಶವಂತ ಲಕ್ಷ್ಮೀಬಾಯಿ ನಾರಾಯಣ ಬಲರಾಮ ಲಕ್ಷ್ಮಣ	ಶಿವಲಿಂಗುವಿನ ಅಂಡಮಾನ್ ಕೈದಿಗಳು

ಗಾಂಧೀಜಿ ಸಾವರಕರ ಸುಭಾಷ್ ಚಂದ್ರ ಬೋಸ್ ತಿಲಕರು	ಸ್ವಾತಂತ್ರ್ಯ ಹೋರಾಟಗಾರರು, ಕ್ರಾಂತಿಕಾರರು

ಶೇಷಪ್ಪ ಮಾಸ್ತರ ರಾಯಪ್ಪ ಮಾಸ್ತರ	ಶಿವಲಿಂಗುವಿನ ಶಾಲಾ ಮೇಷ್ಟ್ರುಗಳು

ಜಾರ್ಜ್ – ಮಿಲಿಟರಿ ಅಧಿಕಾರಿ

ಕ್ಯಾಥರೀನ್ – ಜಾರ್ಜ್‌ನ ಹೆಂಡತಿ

ಜೋಸೆಫ್ ಡಿಕನ್ಸ್‌ನ್ – ಕ್ರೈಸ್ತ ಪಾದ್ರಿ

ಗ್ರೇಸಿ – ಭರತನ ಕಾಲೇಜು ಸ್ನೇಹಿತೆ

ಶ್ರೀನಿವಾಸ + ಲಕ್ಷ್ಮೀ ಹೆಂಡತಿ ಶಾರದ ಶೇಷಪ್ಪ ಮಾಸ್ತರರ ಮಕ್ಕಳು

ಗೋವಿಂದ + ರತ್ನ (ಪ್ರೇಯಸಿ)

ಮರ್‍ಯಾ (ಮರೆಪ್ಪ) – ಚೆನ್ನಬಸಪ್ಪಜ್ಜನ ಹೊಲದ ಆಳು

ಈರ್‍ಯಾ + ಮಾದೇವಿ

ದೇವಕ್ಕಿ (ಯಲ್ಲಮ್ಮನ ಗುಡ್ಡದಾಗ ದೇವದಾಸಿಯಾಗಿರುತ್ತಾಳೆ)

ಸೋದ್ಯಾ (ಸೊದೆಪ್ಪ) – ಊರೊಳಗಿನ ಪುಂಡ

ಶಶಾಂಕ್ – ಅಂತರರಾಷ್ಟ್ರೀಯ ಸ್ನೇಹಿತರು

ಎಲಿಸಾ

ಪರಾಮರ್ಶನ ಗ್ರಂಥಗಳು

1. 'ಯುಗಧರ್ಮ ಹಾಗು ಸಾಹಿತ್ಯ ದರ್ಶನ', ಕೀರ್ತಿನಾಥ ಕುರ್ತಕೋಟಿ
2. ಓ.ಎಲ್. ನಾಗಭೂಷಣ ಸ್ವಾಮಿ, ವಿಮರ್ಶಾ ಲೇಖನ,
3. ಹೊಸಗನ್ನಡ ಸಾಹಿತ್ಯ ಚರಿತ್ರೆ, ಎಲ್.ಎಸ್. ಶೇಷಗಿರಿ ರಾವ್
4. ಡಾ. ಹೆಚ್.ಎಸ್.ಎಂ. ಪ್ರಕಾಶ್ ರವರ ವಿಮರ್ಶಾ ಲೇಖನ 'ಬರಹದ ಓರೆಗಲ್ಲು' ಮಾರ್ಚ್ 2017
5. ಡಾ. ಹೆಚ್.ಎಸ್.ಎಂ. ಪ್ರಕಾಶ್ ಅವರ ವಿಮರ್ಶಾ ಲೇಖನ, ಮಾರ್ಚ್–ಏಪ್ರಿಲ್ 2017 ಸಂಕ್ರಮಣ